Digitization by eGangotri and Sarayu Trust. Funding by MoE-IKS

॥ ಶ್ರೀ ಮಹಾಂತೇಶ್ವರ ಪ್ರಸನ್ನ ॥

ಶ್ರೀ ಕಡಕೋಳ ಮಡಿವಾಳಯೋಗಿ ವಿರಚಿತ

ಕೈವಲ್ಯ ವಾಕ್ಯಾಮೃತ

ಮತ್ತು

ಶ್ರೀ ಮಹಾಂತೇಶ್ವರ 108 ನಾಮಾವಳಿ

ಗಾಳಿಪೂಜಿ ವಚನ

ಸಂಪಾದಕರು:

ಕೈ. ಶ್ರೀ ಗೌಡಪ್ಪ ಸಾಧು ಅಣಜಿಗಿ

ಮು. ಕಡಕೋಳ

S:682
33P3

ಪ್ರಕಾಶಕರು:

ಶ್ರೀ ವೀರೇಶ್ವರ ಪ್ರಕಾಶನ

ಶ್ರೀ ಮಡಿವಾಳೇಶ್ವರ ಮಹಾಮಠ ಕಡಕೋಳ

ತಾ. ಜೇವರ್ಗಿ ಜಿ. ಗುಲಬರ್ಗಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

S:682
38P3
8804
Anajagi, Goudappa
Sadu, ed.
Kaivallya vakyamruta

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಕಡಕೋಳ ಮಡಿವಾಳಯೋಗಿ ವಿರಚಿತ

ಕೈವಲ್ಯ ವಾಕ್ಯಾಮೃತ

ಮತ್ತು

ಶ್ರೀ ಮಹಾಂತೇಶ್ವರ 108 ನಾಮಾವಳಿ

ಗಾಳಿಪೂಜಿ ವಚನ

ಸಂಪಾದಕರು:

ಕೈ. ಶ್ರೀ ಗೌಡಪ್ಪ ಸಾಧು ಅಣಜಿಗಿ

ಮು. ಕಡಕೋಳ

ಪ್ರಕಾಶಕರು:

ಶ್ರೀ ವೀರೇಶ್ವರ ಪ್ರಕಾಶನ

ಶ್ರೀ ಮಡಿವಾಳೇಶ್ವರ ಮಹಾಮಠ ಕಡಕೋಳ

ತಾ. ಜೇವರ್ಗಿ ಜಿ. ಗುಲಬರ್ಗಾ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

KAIVALLYA VAKYAMRUTA Edited by : Shri Goudappa Sadu Anajagi, Kadakol Published by : Veereshwar Prakashana Sri Madivaleshwar Mahamath, Kadakol Tq. Jewargi Dist. Gulbgarga

© ಪ್ರಕಾಶಕರು

6ನೇ ಮುದ್ರಣ 2003

ಪುಟಗಳು: 88 + 12

ಪ್ರತಿಗಳು : 1000

ಬೆಲೆ : ರೂ. 30-00

S:682
33P3

SRI ... A
JNANA ... AL
LIBRARY
Jangam ... Varanasi
ACC 8804

50

ಪ್ರಕಾಶಕರು:
ಶ್ರೀ ವೀರೇಶ್ವರ ಪ್ರಕಾಶನ
ಶ್ರೀ ಮಡಿವಾಳೇಶ್ವರ ಮಹಾಮಠ ಕಡಕೋಳ
ತಾ. ಜೇವರ್ಗಿ ಜಿ. ಗುಲಬರ್ಗಾ

ಮುದ್ರಕರು:
ಶ್ರೀ ಶಿವಶಕ್ತಿ ಆಫ್‌ಸೆಟ್,
ಭೀಮರಾಯನಗುಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಗುರು ಮಡಿವಾಳೇಶ್ವರ ಪ್ರಸನ್ನ ॥

ಪೂಜ್ಯ ಶ್ರೀ ಷ. ಬ್ರ. ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳು
ಶ್ರೀ ಮಡಿವಾಳೇಶ್ವರ ಮಹಾಮಠ, ಕಡಕೋಳ

ಮುನ್ನುಡಿ

ಸಗೆರನಾಡಿನ ತತ್ವ ಪದಗಳ ಸಿರಿವಂತಿಕೆ ಹೆಚ್ಚಿಸಿದ ತತ್ವಪದಗಳ ಹರಿಕಾರ ಕಡಕೊಳದ ಮಡಿವಾಳಪ್ಪನವರು. ಕಲಬುರ್ಗಿ ಜಿಲ್ಲೆಯ ಅಫಜಲಪೂರ ತಾಲೂಕಿನ ಚಿಣಮಗೇರಿ ಚೌಡಾಪುರದ ನಡು ಸೀಮೆಯಲ್ಲಿ ಶೋಭಿಸುವ ಗುಡ್ಡದ ಮಹಾತಪಸ್ವಿ ಮಾಂತೇಶ್ವರರ ಕರುಣೆಯ ಕಂದರಾಗಿ, ಶಿಷ್ಯರಾಗಿ ಬಿದನೂರಿನಲ್ಲಿ ಉದಯಸಿದ ಮಹಾಜ್ಞಾನಿ ಮಡಿವಾಳೇಶ್ವರ ಇವರು ತಮ್ಮ ಜೀವನದುದ್ದಕ್ಕೂ ಮಾನವರ ಕಲ್ಯಾಣಕ್ಕಾಗಿ ಜೀವನವನ್ನೇ ಮುಡುಪಾಗಿಟ್ಟ ಮಹಾನುಭಾವಿ. ಇವರು ಅನಂತ ಪ್ರಾಂತಗಳಲ್ಲಿ ಸಂಚರಿಸಿ, ಕಷ್ಟ ಸುಖಗಳಿಂದ ತನ್ನ ಸನ್ಯಾಸತ್ವ ಜೀವನದಲ್ಲಿ ಬೆಂದರೂ ಜನಗಳ ಉದ್ದಾರಕ್ಕಾಗಿ ಅನುಭಾವದ ಝಚಿಯನ್ನೆ ಉಣಿಸಿದ ಶಿವಯೋಗಿ ಜಾತಿ ಮತಗಳ ಬೇರನ್ನು ಬುಡಮೇಲುಗೊಳಿಸಿದ ಸಂತ. ತಾನು ವೀರಶೈವ ಜಂಗಮ ಕುಲೋದ್ಭವರಾದ ಅವರಲ್ಲಿ ಯಾವತ್ತು ಜಾತ್ಯಾತ್ವ ಸನಿಹಕ್ಕೂ ಸುಳಿಯಲಿಲ್ಲ. ಸಮಾಜದ ಅಂಕುಡೊಂಕುಗಳನ್ನು ತಿದ್ದುಲು ತತ್ವಪದಗಳಿಂದ ಸನ್ಮಾರ್ಗ ತೋರಿಸಿದ ಧೀಮಂತ ಪುರುಷ. ಅನೇಕ ಜಾತಿಯ ಜನಗಳನ್ನು ತನ್ನ ಶಿಷ್ಯರನ್ನಾಗಿ ಸ್ವೀಕರಿಸಿ, ಅವನ್ನು ತನ್ನಷ್ಟೇ ಛಲಾಢ್ಯರನ್ನಾಗಿ ಅವರಲ್ಲಿ ಕವಿತ್ವವನ್ನು ಅಂಕುರಿಸಿದ ತತ್ವಪದಗಳ, ವಚನಗಳ ಬೀಜವನ್ನು ಬಿತ್ತಿ ಜನಮನಗಳ ತಿದ್ದಲು ನಾಡಿನಾದ್ಯಂತ ಪಸರಿಸಿದ ಇವರ ಕೀರ್ತಿ ಶಿಷ್ಯಬಳಗಕ್ಕೂ ಇತ್ತು. ಅನೇಕ ವರ್ಷಗಳ ತಮ್ಮ ಜೀವನವನ್ನು ಕಡಕೋಳದಲ್ಲಿ ಕಳೆದು ಸಗರನಾಡಿನ ಮೂಲೆಮೂಲೆಗೂ ವಿಚಾರ ಧಾರೆಗಳನ್ನು ಬಿತ್ತರಿಸಿದ ಶಿವಯೋಗಿ. ಜನಗಳಲ್ಲಿ ಮನೆಮಾಡಿಕೊಂಡಿರತಕ್ಕ ಕಂದಾಚಾರ, ಭ್ರಷ್ಟಾಚಾರ ಅನೇಕ ಸಮಾಜದ ಶೋಷಣೆಗಳಿಗೊಳಪಟ್ಟ ಅವರ ಓರು ಕೋರುಗಳ ಅಂಕುಡೊಂಕುಗಳನ್ನು ತಿದ್ದಲು ಅನೇಕ ಕಷ್ಟನಷ್ಟಗಳನ್ನು ಅನುಭವಿಸಿ, ಕಂಡದ್ದು ಕಂಡಹಾಗೆ ಯಾವ ಮುಲಾಜಿ ಮುಪತ್ತು ಇಲ್ಲದೆ, ನಿಷ್ಠುರವಾಗಿ ಹೇಳಿದ ಏಕೈಕ ಸ್ವರ ವಚನಕಾರರು. ಮಡಿವಾಳಪ್ಪನವರು ಇವರ ತಪಸ್ಸಿನ ಬಲ ಕಾಯಕ ಜೀವನ ಕಂಡು ಜನರಿಂದ ಇವರು ಅಪ್ಪಾ ಮಡಿವಾಳಪ್ಪ, ಮಡಿವಾಳೇಶ್ವರ ಎಂದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕರೆಯಿಸಿಕೊಂಡರು. ಇವರು ತಮ್ಮ ಜೀವನದುದ್ದಕ್ಕೂ ಕಂಡದ್ದನ್ನುಕಂಡತೆ ಸ್ವಅನುಭವದಿಂದ 1750 ತತ್ವ ಪದಗಳನ್ನು ಹಾಗೂ ವಚನಗಳನ್ನು ನಿಜಲೀಲಾಮೃತ ವಚನಗಳೆಂದು ರಚಿಸಿದರು. ಇವರ ಹಾಡುಗಳನ್ನು ಅನೇಕ ಸ್ವಾರ್ಥಿಗಳು ಕೃತಿ ಚೌರ್ಯಗೊಳಿಸಿ ನಾಮಾಂಕಿತ ಬದಲಿಸಿ, ತಾವೇ ರಚಿಸಿದರೆಂಬಂತೆ ಸೃಷ್ಟಿಸಿ, ಜನಗಳಿಗೆ ಮರುಳುಗೊಳಿಸಿದ ಅನೇಕ ಉದಾಹರಣೆಗಳು ಕಂಡುಬರುತ್ತವೆ. ಇನ್ನೂ ಮುಂದೆ ಇಂಥಾ ತಪ್ಪುದಾರಿ ತುಳಿಯದಂತೆ ಸ್ವಬುದ್ಧಿಯಿಂದ ವಿಚಾರಿಸಿ, ಇವರ ಕೃತಿಗಳನ್ನು ಕಳ್ಳತನಮಾಡದೆ ನಡೆದರೆ ಅದೇ ವರದಕ್ಷಿಣೆ.

ಈಗಾಗಲೇ ಮಡಿವಾಳೇಶ್ವರರ ತತ್ವಪದಗಳ ಪುಸ್ತಕ 6 ನೇ ಆವೃತ್ತಿ ಹೊರಗೆ ಬಂದಿದ್ದು, ಇದನ್ನು ಪೂಜ್ಯ ಶ್ರೀಗಳಾದ ನಾಲವಾರ್ದದ ತೋಟೇಂದ್ರ ಶಿವಾಚಾರ್ಯರ ಲಿಂಗ ಹಸ್ತದಿಂದ ಬಿಡುಗಡೆಗೊಳಿಸಿ, ತಮ್ಮ ಕೈಗೆ ಕೊಡುವ ಭಾಗ್ಯ ಈಗ ಒದಗಿಬಂದಿದೆ. ಕಡಕೋಳ ಮಠದ ಶಿಷ್ಯರಾದ ಗೌಡಪ್ಪಸಾಧು ಮಹಾರಾಜ ಇವರು ಸಂಗ್ರಹಿಸಿದ ಹಾಡುಗಳ ಸರಮಾಲೆಯೇ ಕೈವಾಲ್ಯ ವಾಕ್ಯಾಮೃತ ಎಂಬ ಗ್ರಂಥ ನಿಮ್ಮ ಕೈಗೆ ಸರಳ ಹಗುರವಾದಂತ ಬೆಲೆಗೆ ತಂದುಕೊಡುತ್ತೇವೆ. ಇದನ್ನು ಓದಿ ಜೀವನ ಕೃಷಿಗೊಳಿಸಿಕೊಳ್ಳಿರಿ. ಈ ಪುಸ್ತಕ ಮುದ್ರಣ ಅಚ್ಚುಕಟ್ಟಾಗಿ ಮುದ್ರಿಸಿದ ಶ್ರೀ ಶಿವಶಕ್ತಿ ಆಫ್‌ಸೆಟ್ ಪ್ರಿಂಟರ್ಸ್, ಭೀಮರಾಯನಗುಡಿ. ಮಾಲೀಕರಾದ *ಶ್ರೀ ಕಾಂತಯ್ಯ ಹಿರೇಮಠ* ಹಾಗೂ ಅವರ *ಸಿಬ್ಬಂದಿ ವರ್ಗದವರಿಗೆ* ದೇವರು ಯಶಸ್ಸು ನೀಡಲೆಂದು ಹಾರೈಸುತ್ತೇವೆ.

ಶ್ರೀ ಕ್ಷೇತ್ರ ಕಡಕೋಳ ಇತಿ ಆನಂತ ಆಶಿಷಃ

ದಿನಾಂಕ 12-12-2003

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪರಮ ಪೂಜ್ಯ ಶ್ರೀಶ್ರೀಶ್ರೀ ತೋಟೇಂದ್ರ ಶಿವಾಚಾರ್ಯ ಮಹಾಸ್ವಾಮಿಗಳು

ಸದ್ಗುರು ಶ್ರೀ ಕೋರಿಸಿದ್ಧೇಶ್ವರ ಮಹಾಸಂಸ್ಥಾನ ಮಠ,

ಶ್ರೀ ಕ್ಷೇತ್ರ ನಾಲವಾರ

ಶುಭಾಶೀರ್ವಚನ ಸಂದೇಶ

ಕಲಬುರ್ಗಿ ಜಿಲ್ಲೆಯ ಅನುಭಾವ ಕವಿ ತತ್ವಪದಕಾರ ಕಡಕೋಳ ಮಡಿವಾಳೇಶ್ವರರು ಕೇವಲ ಸಂತಮಹಾತ್ಮರಷ್ಟೇ ಅಲ್ಲ, ಕನ್ನಡ ನಾಡು ಕಂಡ ಅತ್ಯಂತ ಶ್ರೇಷ್ಟ ವೀರಶೈವ ವಾಗ್ಮೀಯಕಾರರಲ್ಲಿ ಒಬ್ಬರು. ಹನ್ನೇರಡನೇಯ ಶತಮಾನದ ನಂತರ "ನ್ಯಾಯ ನಿಷ್ಟುರಿ ದಾಕ್ಷಿಣ್ಯ ಪರನಾನಲ್ಲವಯ್ಯ ಲೋಕ ವಿರೋಧಿ ಶರಣನಾರಿಗೂ ಅಂಜುವದಿಲ್ಲ ಕೂಡಲ ಸಂಗಮದೇವರ ರಾಜ ತೇಜದಲ್ಲಿಪ್ಪನಾಗಿ ಎಂಬಂತೆ ನೇರ ನುಡಿದು ಸತ್ಯ ದರ್ಶನದ ಅವರ ಹಾಡುಗಳಲ್ಲಿ ಸಮಾಜವನ್ನು ತಿದ್ದುವ ಗುಣ ಅಡಕವಾಗಿದೆ.

ಮುಲಾಜಿಗೆ ಬಿದ್ದರೆ ಕೆಟ್ಟಿತ್ತು
ಗುರುರಾಯರಿಗೆ ಪೆಟ್ಟು ಹತ್ತಿತ್ತು

ಎನ್ನುವ ನುಡಿ ಮೇಲಿನ ಬಸವಣ್ಣನವರ ವಚನದ ನ್ಯಾಯ ನಿಷ್ಠುರಿತನಕೆ ಸಾಕ್ಷಿಭೂತವಾಗಿಡೆ. ಶ್ರೀ ಮಡಿವಾಳೇಶ್ವರರು ಈ ಭೂಮಿಯ ಮೇಲೆ ಮಹಾತ್ಮರಾಗಿಯೆ ಹುಟ್ಟಿ ಬಂದವರಲ್ಲ ಈ ಜಗತ್ತಿನ ನೋವು, ಸಂಕಟಗಳ ನಂಜನ್ನು ಉಂಡು ನಂಜುಂಡನಾದವರು ನಿಂದೆ, ಅಪಮಾನಗಳಿಗೆ ಹೆದರಿ ಬೆನ್ನು ತೋರಿಸದೆ ಎದುರಾಗಿ ಈಸಿ, ಇದ್ದು ಜಯಿಸಿದವರು. ತಾವು ಕಂಡೂಂಡ ಅನುಭವಗಳನ್ನೆ ಅನುಭಾವವಾಗಿಸಿ, ತತ್ವಪದಗಳನ್ನಾಗಿ ಹಾಡಿದವರು. ಅತಿಯಾದ ಮಡಿವಂತಿಕೆ, ಶೀಲ, ಆಚಾರಗಳನ್ನು ಮಾಡುವವರನ್ನು ಕಂಡು

ಮುಡುಚಿಟ್ಟಿನೊಳು ಬಂದು ಮುಟ್ಟಿ ತಟ್ಟಿ ಅಂತೀರಿ
ಮುಡುಚಿಟ್ಟು ಎಲ್ಲ್ಯಾದ್ಹೋಳಣ್ಣಾ

ಎಂದು ಕೇಳಿದವರು, ತನ್ನ ತಾನು ತಿಳಿದಮೇಲೆ ಇನ್ನೇನಿನ್ನೋ ಎಂದು ಆತ್ಮ ಶೋಧನೆ ಮಾಡಿಕೊಂಡವರು " ಏನು ನಡೆದಾದೋ ಮುಂದೇನು ನಡಿತಾದೊ" ಎಂದು ಭೂತ, ಭವಿಷ್ಯ, ವರ್ತಮಾನಗಳನ್ನೆಲ್ಲಾ ಹೇಳಿ ತ್ರಿಕಾಲಜ್ಞಾನಿಯಾದವರು. " ಯಲೆರೋ, ಯಲೆರೋ ಕೆಡಬ್ಯಾಡಿರೋ ನಿಮ್ಮ ಒಡಲೊಳಗೆ ಶಿವ ಹಾನ ನೋಡಿರೋ " ಎನ್ನುತ ಈ ಲೋಕದ ಜನರನ್ನು ಎಚ್ಚರಿಸಿದವರು ಇಂಥ ಕಡಕೋಳದ ಮಡಿವಾಳೇಶ್ವರರು ಬಿದನೂರಿನಲ್ಲಿ ಜನಿಸಿ, ತಮ್ಮ ಹುಟ್ಟೆ ಒಂದು ಸಮಸ್ಯೆ ಆದಾಗ ಅದನ್ನು ಮೆಟ್ಟಿ ಮಹಾತ್ಮರಾದರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಲಬುರ್ಗಿಯ ಶರಣಬಸವೇಶ್ವರರ ಒಡಫಾಡಿಯಾಗಿ "ಶರಣಸಂತರೋಳ ಕೂಡುವುದೋ, ಯೋಗ ಸಾಧನೆ ಮಾಢುವದೋ" ಎಂದು ಕಡಕೋಳವನ್ನು ಕಾರ್ಯಕ್ಷೇತ್ರವನ್ನಾಗಿಸಿಕೊಂಡು, ಹನ್ನೆರಡನೇ ಶತಮಾನದಲ್ಲಿ ಅಣ್ಣ ಬಸವಣ್ಣನವರ ನೇತೃತ್ವದಲ್ಲಿ ಅನೇಕ ಶರಣ ಗಣ ತಿಂಥಣ್ಣಿಯೆ ನೆರೆದು ಅನುಭಾವ ಮಂಟಪದ ಮೂಲಕ ಅಂದು ವಚನ ಸಾಹಿತ್ಯವನ್ನು ರಚಿಸಿದಂತೆ ಕಡಕೋಳ ಮಡಿವಾಳೇಶ್ವರರ ನೇತೃತ್ವದಲ್ಲಿ ಜಾತಿ, ಮತ, ಪಂಥ ಭೇದವಿಲ್ಲದೆ ಬ್ರಾಹ್ಮಣರ ಕೈನೂರ ಕೃಷ್ಣಪ್ಪ, ಮುಸ್ಲಿಮ ಚಿನ್ನೂರ ಜಲಾಲ್ ಸಾಹೇಬ್, ಅಂಬಿಗರ ಕಡ್ಲೇವಾಡ ಸಿದ್ದಪ್ಪ, ತೆಲಗಬಾಳ ಹೂಗಾರ ರಾಮಪ್ಪ ಮುಂತಾದ ಅನೇಕ ವರ್ಗದ ಅನುಭಾವಿಗಳು ನೆರೆದು ಅಲ್ಲಿ ತತ್ವ ಪದಗಳ ಸ್ವರ ವಚನಗಳ ಸುಂದರ ಸಾಹಿತ್ಯವೇ ಸೃಷ್ಟಿಯಾಯಿತು.

ಎಲ್ಲರಿಗೂ ನೇತಾರರಾದ ಶ್ರೀ ಮಡಿವಾಳೇಶ್ವರರು ತಮ್ಮ ಆರಾಧ್ಯ ದೈವ ಚಿಣಮಗೇರಿಯ ಶ್ರೀ ಮಹಾಂತೇಶ್ವರರ ಅಂಕಿತನಾಮದೊಂದಿಗೆ ರಚಿಸಿದ ತತ್ವ ಪದಗಳು ಎಷ್ಟೊಂದು ಜನಜನಿತವೆಂದರೆ ಉತ್ತರ ಕರ್ನಾಟಕದಲ್ಲಂತೂ ಕಡಕೋಳ ಮಡಿವಾಳೇಶ್ವರರ ಹಾಡುಗಳನ್ನು ಹಾಡದ ಗಾಯಕರಿಲ್ಲ ಅವರ ಹಾಡುಗಳಿಲ್ಲದೆ ಭಜನೆ, ಸಂಕೀರ್ತನೆ, ಸಂಪನ್ನಗೊಳ್ಳುವದಿಲ್ಲ ಎನ್ನುವಷ್ಟು ಅವು ಜನಜನಿತ ಅಷ್ಟೇ ದಿಟ್ಟ ಹಾಗೂ ನೇರ ನುಡಿಗಳಿಂದ ಪ್ರಸ್ತುತ ಪ್ರಚಲಿತ.

ಶ್ರೀ ಶರಣಬಸವೇಶ್ವರರ ಹಾಗೂ ನಾಲವಾರದ ಶ್ರೀ ಕೋರಿಸಿದ್ಧೇಶ್ವರರಂಥ ಮುಂತಾದ ಮಹಾತ್ಮರ ಸಮಕಾಲೀನರಾದ ಶ್ರೀ ಮಡಿವಾಳೇಶ್ವರರು ಅಂದು ರಚಿಸಿದ ತತ್ವಗೀತೆಗಳ ಸಂಗ್ರಹವಾದ "ಕೈವಲ್ಯ ವಾಕ್ಯಾಮೃತ" ಎನ್ನುವ ಗ್ರಂಥವು ಈಗಾಗಲೇ ಅಣಜಗಿಯ ಗೌಡಪ್ಪ ಸಾಧು ಎನ್ನುವರಿಂದ ಸಂಗ್ರಹಗೊಂಡು ಐದು ಮುದ್ರಣ ಗಳನ್ನು ಕಂಡು ಹಲವು ವರ್ಷಗಳ ನಂತರ ಮತ್ತೆ ಆರನೇ ಮುದ್ರಣದೊಂದಿಗೆ ಕಡಕೋಳ ಮಠದ ಪ್ರಸ್ತುತ ಮಠಾಧೀಶರಾದ ಶ್ರೀ ಷ.ಬ್ರ. ರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಪುನಃ ಮುದ್ರಿತ ಗೊಳ್ಳುತ್ತಿವುದು ಹರ್ಷದಾಯಕವಾದ ವಿಚಾರವಾಗಿದೆ. ಪೂಜ್ಯರಾದ ರುದ್ರಮುನಿ ಸ್ವಾಮೀಜಿ ಯವರು ತಮ್ಮ ಶ್ರೀಮಠದ ಮೂಲಕ ಹಲವಾರು ಕ್ರೀಯಾಶೀಲ ಕಾರ್ಯಗಳನ್ನು ನೆರವೇರಿಸಿಕೊಂಡು ಹೋಗುತ್ತಿರುವಂತೆ ಕರ್ತೃ ಶ್ರೀ ಮಡಿವಾಳೇಶ್ವರರ ಅಮೂಲ್ಯ ಸಾಹಿತ್ಯವನ್ನು ಪ್ರಕಟಿಸಿ, ಪ್ರಚಲಿತಗೊಳಿಸುತ್ತಿರುವುದು ಅಭಿಮಾನದ ಸಂಗತಿಯಾಗಿದೆ. ಸಮಾಜಕ್ಕೆ ಸಂಜೀವಿನಿಯು ಸಾಧಕರ ಕೈ ದೀವಿಗೆಯು ಗಾಯಕರ ಗಮಕಿಗಳ ಗಾಯನ ತರಂಗಿಣಿಯು ಆಗಿ ಶ್ರೀ ಮಡಿವಾಳೇಶ್ವರರ ವಿರಚಿತ ಕೈವಲ್ಯ ವಾಕ್ಯಾಮೃತ ಕೃತಿಯು ಸರ್ವರ ಕಾಮಧೇನು ಕಲ್ಪವೃಕ್ಷವಾಗಿ ಕೈವಲ್ಯವನ್ನು ಕರುಣಿಸಲಿ ಎಂದು ಹಾರೈಸುತ್ತೇವೆ.

ಶ್ರೀ ಕ್ಷೇತ್ರ ನಾಲವಾರ — ಇತಿ ಆನಂತ ಆಶಿಷಃ

ದಿನಾಂಕ 2-12-2003

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಶ್ರೀ ಗುರು ಮಹಾಂತಯೋಗಿನೇ ನಮಃ ॥

ಶ್ರೀ ಕಡಕೋಳ ಮಡಿವಾಳ ಯೋಗಿಗಳ ಸಂಕ್ಷಿಪ್ತ ಜೀವನ ಚರಿತ್ರೆ

ಶ್ರೀ ಗುರುವೆ ಪರಮದೈವವೆಂದು ಪ್ರಥಮದಲ್ಲಿ ಸ್ತುತಿಸಿ, ಪಾರ್ವತೀ ಪರಮೇಶ್ವರರನ್ನು ಪ್ರಾರ್ಥಿಸುತ್ತೇನೆ. ಸರ್ವ ವಿಘ್ನಗಳನ್ನು ನಿವಾರಿಸುವ ವಿಘ್ನೇಶ್ವರನನ್ನು ಧ್ಯಾನಿಸಿ ಶಿವ ಸಾಕ್ಷಾತ್ ರೂಪದಿಂದ ಮೆರೆಯುವ ಪುರಾತನರನ್ನು ನೆನೆಸುತ್ತೇನೆ. ಅಲ್ಲದೆ ಯಾವಾಗಲೂ ಶಿವ ಶಿವ ಎಂದು ಧ್ಯಾನಿಸುತ್ತಿರುವ ಶಿವ ಭಕ್ತರನ್ನು ವಂದಿಸುತ್ತ ಅವರಿವರೆನ್ನದೆ ಎಲ್ಲರನ್ನು ಕಾಯ, ವಾಚಾ, ಮನಸ್ಸಿನಿಂದ ಧ್ಯಾನಿಸಿ, ವಂದಿಸಿ ನನ್ನ ಇಷ್ಟಾರ್ಥವನ್ನು ಕೈಗೂಡಿಸಿ ಮೋಕ್ಷ ಪದವಿಯನ್ನು ಕೊಟ್ಟು ಪಾಲಿಸಬೇಕೆಂದು ಬೇಡಿಕೊಳ್ಳುತ್ತೇನೆ.

ಮಹನಿಯರೆ, ಪರಮಾತ್ಮನ ಪರಮಾವತಾರಿಗಳಾದ ಕನ್ನಡ ಕವಿತಿಲಕ ವೀರಶೈವ ಷಟ್‌ಸ್ಥಲ ತತ್ವ ವೇತ್ತರಾದ ಮಹಾಜ್ಞಾನಿ ಶ್ರೀ ಮಡಿವಾಳಯೋಗಿಗಳ ಜನ್ಮಸ್ಥಾನ ಬಿದನೂರು, ಗುರುಸ್ಥಾನ ಚಿಣಮಗೇರಿ. ಇವರು ಮಹಾಂತಸ್ವಾಮಿಗಳವರ ವಾಕ್ಯ ಪ್ರಸಾದದಿಂದ ಹುಟ್ಟಿದವರು. ಇವರು ಮಹಾಂತಸ್ವಾಮಿಗಳ ಮರಿ ದೇವರು. ಇವರಿಗೆ ಮಹಾಂತಸ್ವಾಮಿಗಳು ಮಡಿವಾಳನೆಂಬ ಹೆಸರಿಟ್ಟು ಇವನು ದೊಡ್ಡವನಾದ ಮೇಲೆ ನನ್ನ ಮಠಕ್ಕೆ ತಂದು ಒಪ್ಪಿಸಬೇಕೆಂದು ಹೇಳಿದರು. ಅವರ ಆಜ್ಞೆಯ ಪ್ರಕಾರ ಮಡಿವಾಳರಿಗೆ 12 ವರ್ಷ ವಯಸ್ಸು ತುಂಬಲು ಅವರನ್ನು ಮಹಾಂತಸ್ವಾಮಿಗಳ ಮಠಕ್ಕೆ ಕರೆದುಕೊಂಡು ಬಂದು ಬಿಟ್ಟರು. ಇವರು ಬರುವದರಲ್ಲಿಯೇ ಶ್ರೀ ಮಹಾಂತೇಶ್ವರರು ಲಿಂಗೈಕ್ಯರಾಗಿದ್ದರು.

ಶ್ರೀ ಮಹಾಂತೇಶ್ವರರ ತರುವಾಯ ಅವರ ಕರಸಂಜಾತರಾದ ಶ್ರೀ ಗುರು ಬಸವ ದೇವರು ಶ್ರೀ ಮಡಿವಾಳರಿಗೆ ಶ್ರೀ ಮಹಾಂತೇಶ್ವರರೇ ನಿನ್ನ ಗುರುಗಳು. ಅವರ ವಾಕ್ಯ ಪ್ರಸಾದದಿಂದ ಹುಟ್ಟಿದ ನೀನು ಅವರನ್ನೇ ಪೂಜಿಸಿ ಮುಕ್ತಿ ಪಡೆಯೆಂದು ಹೇಳಿದರು. ಅವರ ಹೇಳಿಕೆಯಂತೆ ಗುರುಮಾಹಂತೇಶ್ವರರ ಪೂಜೆಯನ್ನೆಸಗುತ್ತ ಕೆಲವು ಕಾಲ ಕಳೆಯುತ್ತಿರಲು ಒಂದು ದಿವಸ ಸ್ವಪ್ನದಲ್ಲಿ ಬಂದು ಶ್ರೀ ಅರಳಗುಂಡಿಗಿ ಶರಣಬಸವೇಶ್ವರರು ನಿನಗೆ ಅಯ್ಯಾಚಾರ ಮಾಡಿಸುವರೆಂದು ಹೇಳಿದಂತಾಗಲಾಗಿ ಅದನ್ನೇ ನಂಬಿಕೊಂಡು ಮಡಿವಾಳರು ಶ್ರೀ ಶರಣಬಸವೇಶ್ವರರಲ್ಲಿಗೆ ಬಂದು ಪ್ರಾರ್ಥಿಸಿಕೊಂಡರು. ಆಗ ಶರಣರ ಪ್ರಯತ್ನದಿಂದ ಮಡಿವಾಳರಿಗೆ ಅಯ್ಯಾಚಾರವಾಗಿ ಪಟ್ಟ ಚರಾಧಿಕಾರವಾಯಿತು. ಮಡಿವಾಳರಿಗೆ ಹುಟ್ಟಿದ ಹನ್ನೆರಡು ವರ್ಷಗಳಲ್ಲಿಯೇ ಪೂರ್ವದ ಬ್ರಹ್ಮಜ್ಞಾನೋದಯವಾಗಿತ್ತು. ಅದು ಹೇಗಂದರೆ: ಅಯ್ಯಾಚಾರ ಮಾಡುವ ಕಾಲಕ್ಕೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀ ಶರಣರ ಕ್ರಿಯಾಮುರ್ತಿಗಳಾದ ಹಳೆಪೇಟ ಬಸಯ್ಯನವರು ಅನಂತ ರೀತಿಯಿಂದ ಕಾಡಿದರು. ಆಗಲೆ ನಾಲ್ಕು ತಾತ್ವಿಕ ಪದಗಳನ್ನು ಮಾಡಿರುವರು. ಅವುಗಳನ್ನು ಈ ಕೈವಲ್ಯದಲ್ಲಿ ನೋಡಿರಿ ಆ ಮೇಲೆ ಇವರು ಚಿಣಮಗೇರಿ ಗುಡ್ಡದಲ್ಲಿ ಹನ್ನೆರಡು ವರುಷ ತಪಸ್ಸು ಮಾಡಿ ಗುರುಮಹಾಂತೇಶ್ವರರ ಅನುಗ್ರಹವಾಗಲಾರದ ಕಾರಣ ಅಲ್ಲಿಂದ ಶ್ರೀ ಶೈಲಕ್ಕೆ ಬಂದು ಮತ್ತೂ ಹನ್ನೆರಡು ವರುಷ ಕಠಿಣ ತಪಸ್ಸು ಮಾಡಿ ತೂರ್ಯದಿಂದ ಕಮರೀಕೊಳ್ಳದಲ್ಲಿ ಹಾರಿಕೊಳ್ಳಲು, ಆಕ್ಷಣಕ್ಕೆ ಮಹಾಂತಯೋಗಿಗಳು ಪ್ರತ್ಯಕ್ಷರಾಗಿ ಮಡಿವಾಳರ ಶಿರದ ಮೇಲೆ ಕರವಿಟ್ಟು ವರವನ್ನು ಅನುಗ್ರಹಿಸಿದರು.

ಶ್ರೀ ಮಡಿವಾಳರು ಗುರುವಿನ ವರಾನುಗ್ರಹವನ್ನು ಪಡೆದುಕೊಂಡು ಕಡಕೋಳಕ್ಕೆ ಬಂದು ತನ್ನ ಅನುಭಾವ ಲೀಲೆಯಿಂದ ಅನೇಕ ಮಹಾತ್ಮೆಗಳನ್ನು ತೋರಿಸಿ ಕಡಕೋಳ ಗುಡ್ಡದಲ್ಲಿ ಬಯಲಾದರು. (ಅಂದರೆ ಜೀವಂತವಾಗಿ ಗವಿ ಹೊಕ್ಕರು.) ಇವರು ವಚನ ಮತ್ತು ಪದ್ಯಾತ್ಮಕ ಗ್ರಂಥಗಳನ್ನು ಬರೆದಿದ್ದು ಅವು ಸಂಪೂರ್ಣ ದೊರೆಯದಾಗಿವೆ. ಇವರು ಬರೆದ ಮಹಾಂತ ನೀಜಲೀಲವೆಂಬ ವಚನ ಗ್ರಂಥದಲ್ಲಿ ಭಾವನಿರ್ವಯಲಸ್ಥಲದ ಕಡೇ ವಚನದಲ್ಲಿ ನಿಜಪದಗಳು ವಚನಗಳು ಕೂಡಿ 1750 ಒಟ್ಟು ಲೆಕ್ಕ ಹೇಳಿರುವರು. ಅವು ಎಲ್ಲಿರುವವೆಂಬುದು ತಿಳಿಯದಾಗಿದೆ. ನಮಗೆ ಸಿಕ್ಕಷ್ಟು ಸಂಗ್ರಹಿಸಿ ಪ್ರಕಟಿಸಿದ್ದೇವೆ.

ಶ್ರೀ ಮಡಿವಾಳ ಯೋಗಿಗಳು ಅರಳಗುಂಡಿಗಿ ಶರಣಬಸಪ್ಪನವರ ಹತ್ತರವೇ ಇರುತ್ತಿದ್ದರು. ಒಂದು ದಿವಸ ಶ್ರೀ ಶರಣ ಮಡಿವಾಳರು ಕೂತು ಮಾತಾಡುವ ಕಾಲಕ್ಕೆ ಮಹಾರೋಗದಿಂದ ಬಳಲುತ್ತಿರುವ ಆ ಉರ ಪೋಲೀಸಗೌಡನ ತಂಗಿ ಭಾಗಮ್ಮನು ಬಂದು ಸಾಷ್ಟಾಂಗ ನಮಸ್ಕಾರ ಮಾಡಿದಳು. ಆಗ ಶರಣರು ಯಾಕೆ ಬಂದಿಯಮ್ಮಾ ಎಂದು ಕೇಳಲಾಗಿ. ಆಗ ಭಾಗಮ್ಮನು ನಾಯಿ ಮುಟ್ಟಿದ ಗಡಿಗೆಯಂತೆ ನನ್ನ ಜನ್ಮ ವ್ಯರ್ಥವಾಗಿದೆ, ಗುರುದೇವಾ ನನ್ನನ್ನು ಉದ್ಧಾರಮಾಡಬೇಕೆಂದು ಪ್ರಾರ್ಥಿಸಿಕೊಂಡಳು. ಆಗ ಶರಣರು ಮಡಿವಾಳರೆ ನಿಮ್ಮಿಂದ ಈಕೆಯ ಬೇನೆ ಪರಿಹಾರವಾಗಬೇಕೆಂದು ಹೇಳಲಾಗಿ ಮಡಿವಾಳರು ಶರಣರ ಅಪ್ಪಣೆಯಾದರೆ ಆಗಲಿ ಎಂದು ಆಕೆಯ ಶರೀರದ ಮೇಲೆ ಹಸ್ತ ಎಳೆದು ತನ್ನ ಜಿಹ್ವೆಯಿಂದ ಬೇನೆ ಕಳೆದರು. ಕೂಡಲೆ ಭಾಗಮ್ಮಾ ನನ್ನ ಜನ್ಮ ಪಾವನ ಮಾಡಿದ ಮಡಿವಾಳಯೋಗಿಯೆಂದು ಅನಂತ ರೀತಿಯಿಂದ ಸ್ತೋತ್ರ ಮಾಡುತ್ತ ಅವರಲ್ಲಿಯೇ ಇದ್ದು ಸೇವೆ ಮಾಡಹತ್ತಿದಳು.

ಈ ಸುದ್ದಿಯನ್ನು ಕೇಳಿ ಸಹಿಸಲಾರದ ನಿಂದಕರು ಭಾಗಮ್ಮನ ಅಣ್ಣನಾದ ಮಲ್ಲಪ್ಪಗೌಡನಿಗೆ ಇಲ್ಲದ್ದೊಂದು ಹೇಳಿ ಅವನಿಂದ ಶರಣರಿಗೂ ಮಡಿವಾಳರಿಗೂ ಬಾಯಿಗೆ ಬಂದಂತೆ ಬೈಯಿಸಿದರು. ಈ ರೀತಿಯಾಗಿ ಅಯ್ಯಾಚಾರದ ಸಲುವಾಗಿ ಹಾಗೂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗೌಡನ ತಂಗಿಯ ಸಲುವಾಗಿ ಘನ ಜಗಳಗಳಾದವು. ಆವಾಗ ಪರಮಾತ್ಮನು ಶ್ರೀ ಶರಣರ ಸ್ವಪ್ನದಲ್ಲಿ ಬಂದು ಕಲಬುರ್ಗಿಗೆ ಹೋಗಬೇಕೆಂದು ಅಪ್ಪಣೆ ಮಾಡಲಾಗಿ ಇಬ್ಬರೂ ಅಲ್ಲಿಂದ ಜಾಗಾಬಿಟ್ಟು ಶರಣರು ಕಲಬುರ್ಗಿಗೆ ಮಡಿವಾಳರು ಕೋಣಸಿರಸಿಗೆ ಹೊರಟರು.

ಮಡಿವಾಳರು ಕೋಣಶಿರಸಿಗಿಯಿಂದ ಜಂಬೇರಾಳಕ್ಕೆ ಬಂದು ಜಂಬುಲಿಂಗನ ಗುಡಿಯೊಳಗೆ ವಾಸಮಾಡಿದರು. ಭಾಗಮ್ಮನು ಅರಳಗುಂಡಿಗಿಯಿಂದ ಪ್ರತಿನಿತ್ಯ ಬಂದು ಸೇವೆ ಸಲ್ಲಿಸುತ್ತಿದ್ದಳು. ಒಂದು ದಿವಸ ವಿಪರೀತ ಮಳೆಬಂದು ದೊಡ್ಡಹಳ್ಳ ತುಂಬಿ ಬಂದದ್ದರಿಂದ ಭಾಗಮ್ಮನು ಹೊತ್ತು ಮುಳುಗುವವರಗೂ ನೋಡಿದರೂ ಮಳೆ ನಿಲ್ಲಲಿಲ್ಲ, ಹಳ್ಳ ಇಳಿಯಲಿಲ್ಲ, ಈ ದಿವಸ ಗುರುವಿಗೆ ಯಡಿ ವಯ್ಯಲಿಲ್ಲವೆಂದು ಕೂಡಲೆ ಯಡಿಮಾಡಿಕೊಂಡು ಅದೇ ವೇಳೆಯಲ್ಲಿಯೇ ದಾರಿ ಹಿಡಿದಳು. ಆಗ ಗೌಡನು ನೋಡಿ ಇಂತಹ ವೇಳೆಯಲ್ಲಿ ಮತ್ತು ತುಂಬಿ ಸೋಸುವ ಹಳ್ಳದಲ್ಲಿ ಅಪ್ಪನಿಗೆ ಹೇಗೆ ಯಡಿ ಒಯ್ಯುತ್ತಿಯವ್ವಾ! ಎಲ್ಲಿಯ ಅಪ್ಪ ಎಲ್ಲಿಯ ಮಗಳು, ಈಗ ಹೋದರೆ ಸತ್ತು ಹೋಗುವೆ ಎಂದನು. ಆಗ ಭಾಗಮ್ಮ ಸಾ ಸತ್ತರು ಚಿಂತೆಯಿಲ್ಲ ನಾನು ಹೋಗುತ್ತೇನೆಂದು ದಾರಿಹಿಡಿದಳು.

ಆಗ ಗೌಡನು ತನ್ನ ನಾಲ್ಕುಜನ ಮನುಷ್ಯರನ್ನು ಕರೆಸಿ ಭಾಗಮ್ಮಾ ಇಂಥ ಕತ್ತಲದಲ್ಲಿ ಜಂಬೇರಾಳಕ್ಕೆ ಹೋದಳು. ಹಳ್ಳದಲ್ಲಿಯ ನೀರು ಬಹಳವಿದ್ದು ಆನೇ ಹೋಗಲು ಸಾಧ್ಯವಿಲ್ಲ, ಆದ್ದರಿಂದ ನೀವು ಸಪ್ಪಳಿಲ್ಲದೇ ಹೋಗಿ ಅಲ್ಲಿ ಆಗುವ ಸುದ್ದಿಯನ್ನು ತಿಳಿದುಕೊಂಡು ಬರ್ರಿ ಎಂದು ಹೇಳಿದನು. ಗೌಡನ ಅಪ್ಪಣೆಯ ಪ್ರಕಾರ ಮನುಷ್ಯರು ಕೂಡಲೇ ಹೋಗಿ ಹಳ್ಳದ ದಂಡೆಯ ಮೇಲೆ ನಿಂತು ನೋಡಲು, ಭಾಗಮ್ಮನು ಗಂಗಮ್ಮನಿಗೆ ನಮಸ್ಕಾರ ಮಾಡಿ, ಅಪ್ಪ ಮಡಿವಾಳರಿಗೆ ಎಡಿಯನ್ನು ಒಯ್ಯುವೆನು ದಾರಿಬಿಡು ತಾಯಿ ಎಂದಳು. ಆಗಿಂದಾಗಲೇ ನೀರು ಬಯಲಾಯಿತು. ಭಾಗಮ್ಮಾ ಹಳ್ಳ ದಾಟಿದಳು. ಇದನ್ನು ಕಂಡು ಘಾಬರಿಗೊಂಡ ಮನುಷ್ಯರು ಓಡಿಬಂದು ಗೌಡನಿಗೆ ಹೇಳಿದರು. ಕೇಳಿದವರೆಲ್ಲರೂ ಸೋಜಿಗವೆಂದರು. ಭಾಗಮ್ಮಾ ಹೋಗಿ ಮಡಿವಾಳರಿಗೆ ಉಣಿಸಿ ನಮಸ್ಕಾರ ಮಾಡಲು, ಹೇಗೆ ಬಂದಿ ಹಾಗೆ ಹೋಗಮ್ಮಾ ಎಂದು ಆಶೀರ್ವಾದ ಮಾಡಿದರು. ಭಾಗಮ್ಮಾ ತಿರುಗಿ ಬಂದು ನಮಸ್ಕಾರಮಾಡಿ ದಾರಿ ಕೊಡಮ್ಮಾ ಗಂಗಮ್ಮಾ ಎಂದು ಪುನಃ ಪ್ರಾರ್ಥಿಸಿದಳು. ನೀರು ಬಯಲಾಯಿತು. ಹಳ್ಳದಾಟಿ ಭಾಗಮ್ಮ ಮನೆಗೆ ಬಂದು ಸೇರಿದಳು. ಊರ ಜನರೇ ಆಶ್ಚರ್ಯಗೊಂಡರು.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಈ ರೀತಿಯಾಗಿ ಇವರ ಪ್ರಭಾವವು ಹೆಚ್ಚುತ್ತಿರಲು, ಕಡಕೋಳ ಗೌಡರು ಜಂಬೇರಾಳಕ್ಕೆ ಬಂದು ಮಡಿವಾಳರನ್ನು ಕರೆದುಕೊಂಡು ಹೋದರು. ಸುರಪುರ ದೊರೆಯು ಇವರನ್ನು ಕರೆಯಿಸಿ, ಅವರನ್ನು ವೈಭವದಿಂದ ಮೆರೆಯಿಸಿ, ಎಷ್ಟೋ ಇನಾಮು ಭೂಮಿಯನ್ನು ಹಾಕಿಕೊಟ್ಟರು.

ಈ ರೀತಿಯಾಗಿ ಇವರ ಸಂಪೂರ್ಣ ಚರಿತ್ರೆ ಹಾಗೂ ಮಹಾತ್ಮೆಗಳನ್ನು ತಿಳಿದು ಕ್ಕೊಳ್ಳಬೇಕಾದರೆ ಅವರ ಪುರಾಣವನ್ನು ನೋಡಬೇಕು. ಅವರ ಪುರಾಣವು ಸಾಸನೂರ ಪಡದಪ್ಪನವರಲ್ಲಿ, ಚಬನೂರಲ್ಲಿ ಚನ್ನಬಸ್ಸಪ್ಪನ ಮಗ ಹುಚ್ಚಪ್ಪನ ಮನೆಯಲ್ಲಿ ಮತ್ತು ಕೋರವಾರ ಮಹಾಂತಯ್ಯನವರ ಮಠದಲ್ಲಿ ಇರುತ್ತದೆ. ಬಲ್ಲವರು ತರಿಸಿ ತಿಳಿದು ಕೊಳ್ಳಿರಿ. ಸಾಧು ಭೀಮಪ್ಪನವರು ಇದ್ದ ವೇಳೆಯಲ್ಲಿ ಮಡಿವಾಳ ಯೋಗಿಗಳ ಪುರಾಣ ಹಚ್ಚಿದರು. ಕಡಕೋಳ ಮುರಿಗೆಪ್ಪನವರು ಪುರಾಣ ಹೇಳುತ್ತಿದ್ದರು. ಆ ಸಮಯಕ್ಕೆ ಈ ಮಹನೀಯರ ಮಹತ್ವಗಳನ್ನು ಸಂಪೂರ್ಣ ಕೇಳಿದೆನು ಇಲ್ಲಿ ನನಗೆ ನೆನಪಿದ್ದ ಮಟ್ಟಿಗೆ ಸಂಕ್ಷಿಪ್ತವಾಗಿ ಬರೆದಿರುವೆನು. ಇವರ ಇನ್ನುಳಿದ ಎಷ್ಟೋ ಮಹತ್ವಗಳು ಪುರಾಣದಲ್ಲಿ ಬಂದಿರುವದಿಲ್ಲ. ಪುರಾಣದಲ್ಲಿ ಗೌಡನ ತಂಗಿ ತುಂಬಿದ ಹಳ್ಳ ದಾಟಿದ ವಿಷಯ ಬಂದಿಲ್ಲ. ಮತ್ತು ಗೌಡನ ಸತಿಯನ್ನು ಮಡಿವಾಳರಿಗೆ ಒಪ್ಪಿಸಿದ್ದು ಬಂದಿಲ್ಲ. ಇವೆರಡು ವಿಷಯಗಳನ್ನು ನನಗೆ ಕಡಕೋಳ ಮುರಿಗೆಪ್ಪನವರು ಹೇಳಿದರು. ಅವರು ಹೇಳಿದಂತೆ ಬರೆದಿರುವೆನು. ಅದೇನಂದರೆ:

ಅರಳುಗುಂಡಿಗೆ ಗೌಡ ಮಲ್ಲಪ್ಪನಿಗೆ ಹಿರೇಬೇನೆ ಸೇರಿತ್ತು ಎಲ್ಲಿ ತೋರಿಸಿದರೂ ಹೋಗಲಿಲ್ಲ. ಆಗ ತಂಗಿ ಭಾಗಮ್ಮನಿಗೆ ನಿನ್ನ ಗುರು ಮಡಿವಾಳರಿಗೆ ಹೇಳಿ ನನ್ನನ್ನು ಉದ್ಧಾರಮಾಡಿಸಮ್ಮ ಎಂದು ಹೇಳಿದನು. ಆಗ ಭಾಗಮ್ಮಾ ನನ್ನಿಂದಾಗುವದಿಲ್ಲ. ನೀನೆ ಹೋಗಿ ಸಾಷ್ಟಾಂಗ ನಮಸ್ಕಾರಮಾಡಿ ಬೇಡಿಕೊ ನಿನ್ನ ಪುಣ್ಯವಿದ್ದಂತೆ ಆಗುವದೆಂದು ಹೇಳಿದಳು. ಆಗ ಗೌಡನು ನಾನು ಅವರಿಗೆ ಮುಖ ತೋರಿಸುವಂತಿಲ್ಲ. ಅವರಿಗೆ ಆಡಬಾರದ ಮಾತುಗಳನ್ನಾಡಿದ್ದೇನೆ. ಮನಸ್ಸಿಗೆ ಬಂದಂತೆ ಬೈದಿದ್ದೇನೆ. ಆದ್ದರಿಂದ ಸರ್ವಥಾ ನಾನೊಬ್ಬನೇ ಹೋಗುವದು ಸಾಧ್ಯವಿಲ್ಲವೆಂದನು. ಆಗ ಭಾಗಮ್ಮನು ನಿನ್ನ ಮನಸ್ಸಿನಲ್ಲಿಯ ಸಂಕಲ್ಪವನ್ನು ತೊಳೆದುಕೊಂಡು ಹೋಗಿ ಅವರ ಪಾದವನ್ನು ಘಟ್ಟಿಯಾಗಿ ಹಿಡಿ, ಅವರು ಹೇಳಿದಂತೆ ದೃಢದಿಂದ ನಡಿ, ಮನವನ್ನು ಘಟ್ಟಿಮಾಡಿಕೊ ಎಂದು ಹೇಳಿದಳು. ಆಗ ತಂಗಿಯ ಮಾತುಗಳಿಗೆ ಗೌಡನು ಒಪ್ಪಿಕೊಂಡು ತಂಗಿಯ ಸಂಗಡವೇ ಹೋಗಿ ಮಡಿವಾಳರ ಪಾದಗಳಿಗೆ ಅಂಗಳದಲ್ಲಿಯೇ ಸಾಷ್ಟಾಂಗ ಹಾಕಿದನು. ಭಾಗಮ್ಮನೂ ನಮಸ್ಕರಿಸಿದಳು. ಆಗ ಮಡಿವಾಳರು ಮಜ್ಜಿಗೆ ಮಾಡು ತ್ತಿದ್ದುದನ್ನು ಬಿಟ್ಟು ಬಂದು ಭಾಗಮ್ಮಾ ಅಂಗಳದಲ್ಲಿ ಬಿದ್ದವರಾರೆಂದು ಕೇಳಲು,

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾಗಮ್ಮಾ ತಾವೇ ವಿಚಾರಮಾಡಬೇಕೆಂದು ಹೇಳಿದಳು. ಆಗ ಮಡಿವಾಳರು ಏಳಪ್ಪ ಗೌಡ ಈ ಧೂಳೊಳಗೆ ಏಕೆ ಬಿದ್ದಿರುವಿ? ಈ ಭಾರ ನಮ್ಮ ಮೇಲೇಕೆಂದರು. ಕೂಡಲೆ ಗೌಡನು ಹೇ ಗುರುವೇ ಸೋತು ಬಂದಿರುವೆ. ನಿನ್ನ ಪಾದಕ್ಕೆ ಹೊಂದಿರುವೆ ನಾಯಿ ಮುಟ್ಟಿದ ಗಡಿಗಿಯಂತೆ ನನ್ನ ಜನ್ಮವು ಪಾಪಮಯವಾಗಿದೆ. ನನ್ನನ್ನು ಉದ್ಧರಿಸಿ ಕಾಪಾಡ ಬೇಕೆಂದು ಬೇಡಿಕೊಂಡನು. ಆಗ ಮಡಿವಾಳರು ಛೀ, ನನ್ನಿಂದ ಸಾಧ್ಯವಿಲ್ಲ ಎಲ್ಲಿಗಾದರೂ ಹೋಗಿ ಬಲ್ಲವರಿಗೆ ತೋರಿಸು, ಎದ್ದು ಹೋಗು ಎಂದು ಹೇಳಿದರು. ಆಗ ಗೌಡನು ಯಾರಿಂದಲೂ ಈ ಬೇನೆ ಕಳೆಯಲು ಸಾಧ್ಯವಿಲ್ಲ ನೀವೆ ಇದನ್ನು ಕಳೆಯಲು ಸಮರ್ಥರು. ನನ್ನ ಸಕಲ ಸಂಪತ್ತುಗಳು ನಿಮ್ಮವೇ ಇರುವವು. ಬೇಕಾದುದನ್ನು ಬೇಡಿರಿ. ಕೊಡಲು ಸಿದ್ಧನಿದ್ದೇನೆ. ನನ್ನನ್ನು ಮಾತ್ರ ಉದ್ಧಾರ ಮಾಡಿರೆಂದು ಪುನಃ ಪರಿಪರಿಯಿಂದ ಪ್ರಾರ್ಥಿಸಿದನು. ಕೂಡಲೆ ಮಡಿವಾಳರು ನಿನ್ನ ಮನದೊಳಗಿನ ಸಂಕಲ್ಪ ಹೋಗಿಲ್ಲ, ಮತ್ತು ಬೇಡಿದ್ದನ್ನು ಕೊಡುವದು ಯಾರಿಂದಲೂ ಸಾಧ್ಯವಿಲ್ಲ ಸುಮ್ಮನೆ ಹಂಬಲಿಸಬೇಡ ಹೋಗು ಎಂದರು. ಆಗ ಗೌಡನು ಗುರುವೇ ಮನದೊಳಗಿನ ಸಂಕಲ್ಪ ತೊಳೆದು ಬಂದಿದ್ದೇನೆ. ಬೇಡಿದ್ದನ್ನು ಕೊಡಲು ಪ್ರತಿಜ್ಞೆ ಮಾಡುತ್ತೇನೆ. ನನ್ನ ಜನ್ಮ ಪಾವನ ಮಾಡಿರೆಂದ ಬೇಡಿಕೊಳ್ಳಲು, ಮಡಿವಾಳರು ಒಳ್ಳೇದು ನಿನ್ನ ಸತಿಯಳನ್ನು ನಮಗೆ ಕೊಡು ನಿನ್ನ ಬೇನೆ ಹೋಗುತ್ತದೆ. ಎಂದ ಕೂಡಲೆ ಗೌಡನು ಆಗಲಿ ಗುರುವೆ ಎಂದು ಮಡಿವಾಳರಿಗೆ ವಚನ ಕೊಟ್ಟು ನಮಸ್ಕಾರ ಮಾಡಿ ತನ್ನ ಸತಿಯಿದ್ದ ಅರಳಗುಂಡಿಗಿಗೆ ಹೋಗಿ ನಡೆದ ಸಂಗತಿಯನ್ನೆಲ್ಲ ಹೆಂಡತಿಗೆ ತಿಳಿಸಿ ನೀನು ಈ ದಿವಸ ಮಡಿವಾಳರ ಹತ್ತಿರ ಹೋಗಿ ನನ್ನ ವಚನ ಉಳಿಸಬೇಕೆಂದು ಕೇಳಿದನು. ಕೂಡಲೆ ಗೌಡನ ಸ... ಎ ನಿಮ್ಮ ಆಜ್ಞೆಯಂತೆ ನಡೆಯುವೆನು. ನನ್ನನ್ನು ಕೊಟ್ಟಾದರೂ ನಿಮ್ಮ ಬೇನೆ ಯನ್ನು ಕಳೆದುಕೊಳ್ಳಿರಿ. ನಿಮ್ಮ ಬೇನೆ ನಾನು ಸಹಿಸಲಾರೆ. ನನ್ನ ಜನ್ಮ ಪಾವನ ವಾಯಿತೆಂದಳು. ಗೌಡನು ಸತಿಯನ್ನು ಕರೆದುಕೊಂಡು ಕಡಕೋಳಕ್ಕೆ ಹೋಗಿ ಸತಿಯಳನ್ನು ಮಡಿವಾಳರಿಗೆ ಒಪ್ಪಿಸಿ, ನಮಸ್ಕಾರ ಮಾಡಿದನು. ಆಗ ಮಡಿವಾಳರು ಗೌಡ! ನಿನ್ನ ಮನಸ್ಸನ್ನು ಪರಿಕ್ಷಿಸಲು ನಿನ್ನ ಸತಿಯನ್ನು ಬೇಡಿದೆನಷ್ಟೆ! ನಮಗೇತಕ್ಕೆ ಬೇಕು! ನಿನ್ನ ಸತಿಯಳನ್ನು ನೀನು ಕರೆದುಕೊಂಡು ಹೋಗು. ನಿನ್ನ ಬೇನೆ ನಿವಾರಣೆಯಾ ಗುವದೆಂದರು. ಕೂಡಲೆ ಗೌಡನು ಗುರುವೇ ಕರೆದುಕೊಂಡು ಹೋಗುವದಿಲ್ಲ, ಕೊಟ್ಟ ವಚನ, ಇಟ್ಟ ಭಾಷೆ ತಪ್ಪಲಾರೆನು ನನ್ನ ಬೇನೆ ಹೋಗಲಿ, ನನ್ನ ಸತಿಯು ನಿಮ್ಮ ಸೇವೆಯಲ್ಲಿರಲಿ ನಿಮಗೆ ನಾನು ಬಹಳ ಕಾಡಿದೆನು, ಕ್ಷಮಿಸಿರಿ. ನನ್ನ ಪಾಪ ಕಳೆಯಿರೆಂದು ಬೇಡಿಕೊಂಡನು. ಮಹನೀಯರನ್ನು ಕಾಡಿದವರ ಗತಿಯು ಹೇಗಾಗುವದು ಎಲ್ಲರೂ ತಿಳಿದುಕೊಳ್ಳಿರಿ ಸತ್ಪುರುಷರನ್ನು ನಿಂದಿಸಬೇಡಿರಿ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆ ಗೌಡ್ತಿಗೆ ಬಸಪ್ಪಗೌಡ, ಖ್ಯಾತಪ್ಪಗೌಡ, ಸಿದ್ಧಲಿಂಗಪ್ಪಗೌಡ ಎಂಬ ಮೂರು ಜನ ಮಕ್ಕಳಿದ್ದು ಆಕೆ ಬರುವಾಗ ಬೆನ್ನ ಹತ್ತಿ ಬಂದರು. ಎಷ್ಟು ಹೇಳಿದರೂ ವಾಪಸ ಹೋಗಲಿಲ್ಲ. ಬಸಪ್ಪಗೌಡನಿಗೆ ಗೌಡಕಿಯ ಪಟ್ಟಾ ಆಗುವದಿತ್ತು. ಅವನಿಗೆ ಮರಣ ಬಂತು ಖ್ಯಾತಪ್ಪ ಹೋಗಲಿಲ್ಲ. ಮಡಿವಾಳರು ಸಿದ್ಧಲಿಂಗಪ್ಪನಿಗೆ ಅಯ್ಯಾಚಾರ ಮಾಡಿ ಮರಿದೇವರೆಂದು ನಾಮಕರಣ ಮಾಡಿದರು. ಬಸವಲಿಂಗವ್ವ ಗೌಡ್ತಿ ಬರುವ ಕಾಲದಲ್ಲಿ ಮೂರು ತಿಂಗಳು ಗರ್ಭಿಣೆಯಿದ್ದುದರಿಂದ ನವಮಾಸ ತುಂಬಿ ಹೆಣ್ಣು ಮಗಳನ್ನು ಹಡೆದಳು. ಆ ಕೂಸಿಗೆ ಅಕ್ಕಮ್ಮನೆಂದು ಹೆಸರಿಟ್ಟರು.

ನಿಜವಾದ ಸಂಗತಿ ಹೀಗಿರುವದು. ಮಡಿವಾಳನ ಮಕ್ಕಳು ಖರೆ ಆಗಿದ್ದರೆ ಅರಳಗುಂಡಿಗೆ ಗೌಡನ ಮನೆದೇವರ ಹೆಸರು ಇವರಿಗೆ ಯಾಕೆ ಇಟ್ಟರು. ನಿಂದಕ ನೀಚ ಜನರು ಸುಳ್ಳೇ ಮನ ಬಂದಂತೆ ಮಾತಾಡುತ್ತಿರುವರು. ಮಡಿವಾಳರು ಮಹಾ ಬ್ರಹ್ಮಜ್ಞಾನಿಗಳು. ಇಂಥವರು ಇಂತಹ ಕೆಲಸಗಳನ್ನು ಮಾಡುವರೆ! ಎಂದಿಗೂ ಸಾಧ್ಯ ವಿಲ್ಲ. ಮಡಿವಾಳರು ಮಾಡಿದ ಪದಗಳು ಘನವಾದವುಗಳಿವೆ. ಅವುಗಳಲ್ಲಿ ಒಂದೆರಡನ್ನು ಇಲ್ಲಿ ಉದಾಹರಿಸುವೆ.

ಪಟ್ಟ ಚರಮೂರ್ತ್ಯೆಂತೀರಿ। ಪರಮಾತ್ಮನ ನೆನಿತೀರಿ॥ ಪರನಾರಿ ಸ್ನೇಹ ಮಾಡಿ ಗುಡ್ಡದ ಮಹಾಂತಗ ಹಾಕತೀರಿ॥ ವಿರಕ್ತರಪ್ಪ ಜಂಗಮರಪ್ಪ। ಕೇಳಲಿಕ್ಕೆ ಬರತಾರ ಹೇಳೋ ನಮ್ಮಪ್ಪ॥ ಹೇಳದಿದ್ದರೆ ನಿಮ್ಮ ಗೋಳ ನೋಡಪ್ಪ। ಸೋದರಳಿಯ ಚನ್ನಬಸ ವಣ್ಣ ಬರತಾನಪ್ಪ॥ ಪ॥ ಆದಿ ಅನಾದಿ ಅಳಿದವರಪ್ಪ। ಮರ್ತ್ಯದೊಳಗೆ ಕರ್ತೂ ಮಾಡು ವರಪ್ಪ॥ ಮಾಡದಿದ್ದರೆ ಪಾತಕರಾಗುವರಪ್ಪ। ವಿರಕ್ತರೆಂಬುದು ಪುಟ್ಟತಲ್ಲಪ್ಪ॥ 1 ॥ ವಿರಕ್ತರಂದರೆ ಮೂರಕ್ಷರಪ್ಪ। ಮೂರು ಮೂಲಿಗೆ ಮೂರು ಲೋಕಾದವಪ್ಪ ॥ ಮೂರೇಳು ಯುಗವನ್ನು ಮುಚ್ಚಿ ಹಾಕ್ಯಾದಪ್ಪ। ನಿಮುತ್ಯನ್ವೆಸರ್ಯಾರಿಟ್ಟಾರೇಳೋ ನಮ್ಮಪ್ಪ ॥ 2 ॥ ಮರ್ಕಟ ಬುದ್ಧಿಯವರು ವಿರಕ್ತರಪ್ಪ। ವಿರಕ್ತ ಮಠದೊಳು ತೊಟ್ಟಿಲ ಕಟ್ಯಾರಪ್ಪ॥ ಇಂಥವರು ವಿರಕ್ತರು ಹೌದೇನಪ್ಪ। ಗುಡ್ಡದ ಮಹಾಂತೇಶ। ಹಚ್ಯಾನೋ ತಪ್ಪ ॥ 3 ॥

ಈ ರೀತಿಯ ಮಹತ್ತರ ವಾಕ್ಯಗಳನ್ನು ಇದೇ ಕೈವಲ್ಯಾಮೃತದಲ್ಲಿ ನೋಡಿ ಕೊಳ್ಳಿರಿ. ಸುಳ್ಳಲ್ಲ, ನುಡಿದಂತೆ ನಡೆದರೆ ಇದೇ ಜನ್ಮ ಕಡಿ ಒಂದೇ ಕಡತಕ್ಕೆ ಮೂರು ತುಕಡಿ ಎಂದು ಹೇಳಿದರು. ಮಾಯಿಯ ಗಂಡ ಮಡಿವಾಳರೆಂದು ಬಿರುದು ಸಾರಿರುವ ರು. ಇಂಥ ಮಹನೀರಿಗೆ ಕುಂದು ಇಡುವ ಮಂದ ಬುದ್ಧಿ ಮಾನಗೇಡಿ ಜನರಿಗೆ ನರಕ ತಪ್ಪಲಾರದು. ತಿಳಿಯಿರಿ. ತಿಳಿದು ನಡೆಯಿರಿ. ಮುಕ್ತಿ ಪಡೆಯಿರಿ. ಸತ್ಯ, ಸತ್ಯ, ಶ್ರೀ ಓಂ.

ತಮ್ಮ

ಮಡಿವಾಳರ ಮರಿಮೊಮ್ಮಗನೆನಿಸಿದ

ಗೌಡಪ್ಪ ಸಾಧು ಕಡಕೋಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಮರಣೆ



ಪರಮ ಪೂಜ್ಯ ಲಿಂ. ಶ್ರೀ ವೀರೇಶ್ವರ ಶಿವಯೋಗಿಗಳು
ಶ್ರೀ ಮಡಿವಾಳೇಶ್ವರ ಮಹಾಮಠ, ಕಡಕೋಳ

ಶ್ರೀ ಮಡಿವಾಳೇಶ್ವರ ಮಠದ ಪೀಠಾಧಿಪತಿಗಳಾಗಿ ಅನೇಕ ಪವಾಡಗಳನ್ನು ಮಾಡಿ, ಬಂಜೆಯರಿಗೆ ಮಕ್ಕಳನ್ನು ನೀಡಿ, ನೀರಿಲ್ಲದೆ ಸ್ನಾನವನ್ನು ಮಾಡಿಸಿ, ಬಡವರಿಗೆ ವರವನ್ನಾಗಿ, ಧೀನ ದಲಿತರಿಗೆ ಕಲ್ಪವೃಕ್ಷವಾಗಿ ತಮ್ಮ ಜೀವನದುದ್ದಕ್ಕೂ ಮಠದ ಹಾಗೂ ಶಿಷ್ಯರ ಏಳಿಗೆಗಾಗಿ ಹಗಲಿರಳು ಶ್ರಮಿಸಿದ ಮಹಾನುಭಾವ ಮಹಾಮಹಿಮರಿವರು. ಇಂತಹ ಪುಣ್ಯ ಪುರುಷರ ಸ್ಮರಣೆಗಾಗಿ ಈ ಕೃತಿಯನ್ನು ಅವರಿಗೆ ಸಮರ್ಪಿಸಲಾಗಿದೆ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಓಂ ಶ್ರೀ ಗುರು ರೇವಣಸಿದ್ದೇಶ್ವರಾಯ ನಮಃ ॥

ಪಡುವಡಿ ಸೂತ್ರ ಬಾಳೇಹಳ್ಳಿ ಸಿಂಹಾಸನಪೀಠ ಶ್ರೀ ಚಿಣಮಗೇರಿ
ಚೌಡಾಪುರದ ನಡುಶೀಮಿ.ಗುಡ್ಡದ ಮಹಾಂತಯೋಗೀ ಸ್ಥಲ.
ಆ ಮಹಾಂತಯೋಗಿಗಳ ಶಿಷ್ಯರಾದ

ಕಡಕೋಳ ಮಡಿವಾಳ ಯೋಗಿಗಳು ರಚಿಸಿದ

ಕೈವಲ್ಯ ವಾಕ್ಯಾಮೃತ

॥ ಶ್ರೀ ಗಣಪತಿ ಸ್ತೋತ್ರ ॥

1ನೇ ಪದ

ನಮೋ ಏಕ್ಹದಂತಾ। ಹೇರಂಬಾ ಗಣನಾಯಕಾ ॥ ಪ ॥ ಮದಗಜಮುಖಿತಾ। ಮಧುಕರವೃತ್ತಾ। ಸದರ ಸಕಲಶಾಸ್ತ್ರನೀನೆ ಉದ್ದಾರ್ಥಾ ॥ 1 ॥ ಇಂದೂರ ಗಮನ । ಶಿಂಧೂರ ವದನ । ಕಂದ ಸಹೋದರ ನೀ ದಯಸಾಗರ ॥ 2 ॥ ಶುಲಭ ಚಿಣಮಗೇರಿ । ಸಲೆ ಮಹಾಂತೇಶನ । ಕುಲವು ಪಾವನ ಮೂರ್ತಿ ನೀನೆ ಮುಕ್ಯಾಗರ ॥ 3 ॥

2ನೇ ಪದ

ನಮೋ ನಮೋ ಲಂಬೋದರ । ಶ್ರೀ ದೇವರ ॥ ನಮೋ ನಮೋ ಲಂಬೋದರ ॥ ಪ ॥ ಅತಿಹಿತ ಗಾತ್ರ । ಯತಿ ನುತ ಪಾತ್ರ ॥ ರತಿಹಿತ ಗರ್ವಾವಾನ ಗಜಾನನ ॥ 1 ॥ ಭುವನಕೆ ಭದ್ರ । ಶೀವನ ಪ್ರಸಿದ್ಧ ॥ ಕವಿಜನದೇವ ಧರ್ಮತೋರೊ ಪ್ರೇಮ ॥ 2 ॥ ಗುರುವೆ ಮಹಾಂತೇಶ । ಶರಣ ಗಣೇಶ ॥ ಸುರಪತಿ ಶೌರೀನಾಥ ಗೌರಿಸುತ ॥ 3 ॥

3 ನೇ ಪದ

(ಸ್ವಯಂಭು ಪರಬ್ರಹ್ಮನ ಲೀಲದೊಳಗೆ ವೇದಾಂತ ಮೂಲ ಸ್ಥಲದ ಅನುಭವದ ಪದ)

ದೇವರ ದೇವ ॥ ಲಾಲಿಸು ವಿಜ್ಞಾಪನ । ಸತ್ತು ಹೋಹುದು । ಹುಟ್ಟಿಬಾಹುದು । ಭಾವಿಕರಿಗೆ ಇದು । ಭಾವಿಸಬಾರದು । ನಾವು ನೀವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಯಂಬೋದೆಲ್ಲಿಹುದು ॥ ಪ ॥ ಸತ್ತುಚಿತ್ತಾದರೆ । ಚಿತ್ತು ಹತ್ತಾಯಿತು । ಹತ್ತು ವಂದುಗೂಡಿ ಹಲವಾಯಿತು ॥ ಮತ್ತೆ ಹಲವು ಹತ್ತು । ಹತ್ತು ಚಿತ್ತಾಗಲಿಕ್ಕೆ । ಚಿತ್ತು ಸತ್ತಿದ್ದು ಹುಟ್ಟಿಲ್ಲಾಯಿತು ॥ 1 ॥ ಚಿತ್ತು ಚಿತ್ತಾಗಲಿಕ್ಕೆ ಚಿತ್ತು ಚಿದ್ರೂಪವಾಯಿತು। ಚಿತ್ತು ಪಟ್ಟವಾಗೆ ಚಿತ್ತೆಲ್ಲವು ಸತ್ತುವಿನ ನಾಮ । ಚಿತ್ತುವಿಗಿಲ್ಲಾಯಿತು ॥ ಹತ್ತುಕಿದ್ದ ನಾಮ ಹಲವಿಗೆಲ್ಲಿಹವು ॥ 2 ॥ ಮುತ್ತ್ಯಾನ ನಾಮ ಮೊಮ್ಮಗನಿಗೆಂಬೆ ಸಾಕ್ಷಿ । ಚಿತ್ತಿನಿಂದೆ ಹುಟ್ಟಿಸರ್ವವು ಸತ್ತಿತ್ತು । ನಿತ್ಯಾ ನಿಜಾನಂದ ಶ್ರೀ ಮಹಾಂತಯೋಗಿ । ಮತ್ತೇ ಹುಟ್ಟಿ ಹುಟ್ಟಿ ಸತ್ತೆ ಸತ್ತಿತು ॥ 3 ॥

4ನೇ ಪದ

ನೋಡು ನೋಡಮ್ಮಾ । ವಿಶ್ವತಾ ಪರಬ್ರಹ್ಮಾ ॥ ಮಾಡಬಾರದು ಸುಳ್ಳೆ ಮನದೊಳಗ್ಹಮ್ಮಾ ॥ ಪ ॥ ಮೊದಲೆ ನಿರ್ಲಕ್ಷವೇ । ನಿಲವಾಗಿತ್ತು । ಅದರೊಳಗೆ ಅದರಂತಾದೆ ಸತ್ತು ॥ ಬಿದರಿಸದಿರುವದಿಲ್ಲೆನಿಸುವ ಚಿತ್ತು । ಅದು ಕಸಕಸಿ ಸಹಸ್ರ ಪಾಲೆನಿಸಿತ್ತು ॥ 1 ॥ ನೆನವುದೋರಲು । ತನಗಾಯಿತ್ತನ್ನಂಗ । ನೆನವು ಇಮ್ಮಡಿಸಿತಾ ಕೂಡಲಸಂಗ । ತನಗಿದರಿಲ್ಲಾದಿದ್ದ ಮಹಾಲಿಂಗ । ಚಿನುಮಯ ಪ್ರಭೆ । ಚಿದ್ರೂಪ ತರಂಗ ॥2॥ ಎಲ್ಲಾ ಸ್ವರೂಪವಾದದ್ದು ಆ ಸತ್ತೆ । ಹೊಲ್ಲೊಳ್ಳೆಂಬುದು । ಅದಕಿರಿತ್ತೆ । ಇಲ್ಲಾಗದಿರಲದು । ಭವಕೆ ತಾ ಬಿತ್ತೆ । ನಲ್ಲ ಮಹಾಂತನ ಅರವು ಅತ್ತತ್ತೆ ॥ 3 ॥

5ನೇ ಪದ

ಕಪ್ಪು ಕಡೆಗೊತ್ತಿ । ಬಿಳ್ಪೀಲರಿದೊ । ಕಪ್ಪೆತಾ ಬಿಳ್ಪಾಗೆ ತಪ್ಪಲರಿದೋ ॥ ಪ ॥ ಕತ್ತಲೆಯ ಮನೆಯೋಳು । ಹತ್ತಿಸಿದೆ ಜ್ಯೋತಿಯನು । ಸುತ್ತಪ್ರಭೆ ಕಾಳು ತನ್ನೋತ್ತಿಲಿಹುದೋ ॥ ಹತ್ತೇ ಬರಲೆಣ್ಣೆ ಪ್ರಣುತ್ತತ್ತಿ ಬತ್ತ್ಯುರಿದರೆ ಯತ್ತೋಯಿತು ಜ್ಯೋತಿ । ತಮ ಮುತ್ತು ತಿಹುದೋ । 1 । ಕತ್ತಲೆಯು ತಿಳಿದು ತಾ । ಬಿತ್ತರದಿ ಬೆಳಗಾಗಿ । ಬತ್ತಿ ಪ್ರಣುತೆಣ್ಣ್ಯಗ್ನಿ ವತ್ತಲೇಕೊ ॥ ಗೊತ್ತು ತಿಳಿಯದೆ ತನ್ನ । ಎತ್ತ ಹುಡುಕಿದರೇನು । ಚಿತ್ತವೆ ನಿಜವೆಂಬೊ ಚಿತ್ತಾವೆ ಸಾಕೋ ॥ 2 ॥ ಘನ ಉಳಿದು ಅಣುನಾಗೆ । ಅಣುವುಳಿದು ಘನವಾಗೆ । ಘನಕೆ ಅಣು । ಅಣುಕೆ ಘನ । ಅಣಕವಾಹುದೊ ॥ ಘನ ಚಿನುಮಗೇರಿ । ಧೊರಿ ಅಣುಮಹಾಂತೇಶ್ವರನ । ಘನವೇ ಸವದಣುವಾಗೆ । ಅಣು ಘನವಾಹುದೋ ॥ 3 ॥

6ನೇ ಪದ

ವಾಯಿ ಇಲ್ಲದೆ ಬಂದೇವು ಯನ್ನಲು । ಮಾಯಾದ ಬನದೊಳಗೆ ॥ ತಾಯೆಲ್ಲಿ ಕಾಣದೆ । ಆ ಉ ವೂಾಯನೆ । ವಾಯಿಟ್ಟು ಹಂಸಾಗಿ ಯೋವೂಾಯೆಂದೆಶಿಗೆ ॥ ಪ ॥ ಅವನಿಯಲ್ಲವು ಮಾಡಿದೆ । ಅವನಿಯೋಳ ಅವಯಂಗಳೊಡಗೂಡಿದೆ । ಅವನಿಯಂಗಳೊಡಗೂಡಿ ಅವನಿಯಲ್ಲವು ಮಾಡಿ । ಅವನೆಂಬವನೀ ಬಲ್ಲೆ । ಅವನೆಂಬೋದರಿಯೇ ॥1॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೋಡಿದೆಲ್ಲವ ಸೂಡಿದೆ । ನೋಡಿದರೋಳು । ಗಾಡಿಗಾರಿಕಿ ಬೇಡಿದೆ । ಗಾಡಿಗಾರಿಕಿ ಬೇಡಿ । ನೋಡಿದ್ದೆಲ್ಲವು ಸೂಡಿ ॥ ನೋಡಾದು ನೋಡಿದೆ! ನೋಡಿದುದರಿಯೇ ॥ 2 ॥ ಮೃಡಮಹಾಂತೇಶ್ವರನಾಡಿದೆ । ಆ ಮೃಡನೋಳು ಮಡಿವಾಳ ಬಿದ್ದೆ ಮಾಡಿದೆ। ಮಡಿವಾಳ ಬಿದ್ದೆಮಾಡಿ॥ ಮೃಡ ಮಹಾಂತೇಶ್ವರನಾಡಿ। ಮೃಡನಾಗೆ । ಮೃಡನಾದೆ । ಮೃಡನಾಗೋದರಿಯೇ ॥ 3 ॥

7ನೇ ಪದ

ಅಳಳಳಳಳಳಳಾವು ಮಾ । ಈ ಅವು ನೋಡಿಕೊಂಡು । ಹಾಲ ನಾಡಿಗೆಲ್ಲಾ ನೀಡಮ್ಮಾ ॥ ಪ ॥ ಮೂಗ ಪೀತ ಬಾಯಿ ಸ್ವೇತ । ಕಣ್ಣ ರಕ್ತ । ಬಣ್ಣ ಮೈಮ್ಯಾಗ । ಕಪ್ಪಮಾಸ ಕಾಲ ಕಿವಿ । ಬಾಲ ಬೂದ ಆದನು ॥ ಯೋಗಿಗೆ ಒಂಭತ್ತು ಸೋಗು ಕೊಂಬಿನೊಳಗೆ ತೋರುತಾದೆ । ಕೋಗಿಲದ ಹಾಗೆ ಕೂಗಿ ತನ್ನ ತಾನೆ । ಕರೆವು ತಾದಮಾ ॥ 1 ॥ ಹಾಲವಿಟ್ಟು ಮೊಸರು ಮಾಡು । ಮೊಸರುವುಳಿಸಿ ಬೆಣ್ಣೀ ತೆಗೆದು । ಬಾಲಿ ಬೆಣ್ಣೀ। ಕಾಯ್ದು ತುಪ್ಪ ಪೂರ ಕುಂಭ ತುಂಬಮ್ಮಾ ॥ ತಾಲಿ ತುಂಬ ತುಪ್ಪ ಮಾರದೆ । ಚೀಲ ತುಂಬ ರೂಪಾಯಿ ಮಾಡು । ಚೀಲಮುಟ್ಟದೆ । ತಾಳಿ ಮೂಗುತಿ । ವಾಲಿಮಾಡಿಸಿಕೊಳ್ಳುಮ್ಮಾ ॥ 2 ॥ ಪುಚ್ಚಿಲುಚ್ಚಿ ಬಿದ್ದಮೇಲೆ ಕೆಚ್ಚಿಗೆ ಕೈಯಿಕ್ಕುರು ಮೆಲ್ಲನೆ । ಕಚ್ಚುಗೊಡದೆ ಕರುವಿಗೆ ಮೊಲೆ । ಪಚ್ಚಿಕಾಲ್ದಳಿ ಹಾಕು ಮಾ । ಎಚ್ಚರಿರಲಿ ಲತ್ತಿ ವದ್ದಿತು । ಮಚ್ಚಿದಾನು ಮಹಾಂತದೇವ । ಹುಚ್ಚಿಯಿವಳೆಂದು । ರಚ್ಚಿಗಿಕ್ಕಲು ನಿನ್ನ ನಿಚ್ಚನುಡಿವವರ್‍ಯಾರಮ್ಮಾ ॥ 3 ॥

8ನೇ ಪದ

ಸ್ವಯವಾಗದಗಣಿತ । ಭವಭಾವ ಜಗನ್ಮಯನೆನಿಸುವ। ತಾ ಶಿವಾಧವ ॥ಪ॥ ತನುಮನಧನ। ತ್ರಿವಿಧನು । ವಂಚನಿಲ್ಲದೆ । ಘನ ಗುರುನಿಮಗೆ। ಸಮರ್ಪಿತೆಂದು । ಮನೆಗೆ ಕರೆದೊಯ್ದು ಗುರುವಿಗನುಗೊಳಿಸಿರ್ದ ಮುನ್ನ। ಮನವಿಕಾರ ದೋಳಿಹ । ಬಿನುಗು ಮಾನವಗೆ ಸ್ವಯ ॥ 1 ॥ ಕೊಟ್ಟದ್ದು ಕೊಟ್ಟು । ಕೊಂಡು ಕೊಟ್ಟು । ಕೊಂಡದ್ದು ಕಡಿಗಿಟ್ಟು। ಕೆಟ್ಟಾರು ನಿಜತತ್ವವೆಂದು ॥ ಕೊಟ್ಟದ್ದು ಕೊಟ್ಟು। ಕೊಂಡು ಕೊಟ್ಟದ್ದು ಕೊಟ್ಟೇವೆಂದು । ಕೊಟ್ಟ ಮಾತಾಡುವ ಕೆಟ್ಟ ಮಾನವಗೆ ಸ್ವಯ ॥ 2 ॥ ಸ್ವಯಪರ ಗುರುಚಾರ । ವಯವಾದ ನಿಜನಿರ್ವಯಲೆಂಬೊ । ಅನಾದಿ ವಸ್ತು ಬಲ್ಲೆವೆಂದು ॥ ದಯಮುಕ್ತಿ ಮೂಲೆಂಬೋ ಭಯಗೆಟ್ಟು। ಮಹಾಂತಗೆ ಕ್ರಿಯ ಕಲ್ಪಿಪ ಮಾಯಮಯದ ಮಾನವಗೆ ಸ್ವಯ ॥ 3 ॥

9ನೇ ಪದ

ದಾವ ಪಥ। ದಾವ ನೆಲೆ । ದಾವ ಸುಖ ಬಲ್ಲಿ ॥ ಮೂವರೊಂದಾದನುವು । ತಿಳದರ್‍ಹೇಳಿಲ್ಲಿ ॥ ಪ ॥ ಬ್ರಹ್ಮದಿಂದವೆ ಜಗವೋ । ಜಗವಂದಿದವೆ ಬ್ರಹ್ಮೋ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬ್ರಹ್ಮಜಗದಿಂ ನೀನೋ । ನಿನ್ನಿಂದ ಜಗಬ್ರಹ್ಮೋ ॥ ಬ್ರಹ್ಮನೀ ಜಗವೋ । ಜಗವು ನೀನೆ ಬ್ರಹ್ಮೋ । ಬ್ರಹ್ಮವೆ ತಾ ಜಗವೋ । ಈ ಜಗವೆ ತಾ ಬ್ರಹ್ಮೋ ॥ 1 ॥ ಜೀವದಿಂದವೆ ಅರುವೋ । ಅರುವಿನಿಂದಲೆ ಜೀವೊ । ಜೀವ ಅರುವಿಲಿ ತನುವೋ । ತನು ಅರುವಿಲಿ ಜೀವೋ ॥ ಅರುತನು ಜೀವೋ । ಜೀವತನು ಅರುವೋ । ಅರುವೆ ತಾ ಜೀವೋ । ಜೀವೆ ತಾ ಅರುವೋ ॥ 2 ॥ ಬುಡದಿಂದೆ ನಡು ಕಡೆಯೋ ಕಡೆಯಿಂದ ನಡುಬುಡವೋ । ಬುಡವೆ ನಡುಕಡೆಯೋ । ಈ ಕಡೆಯೋ ನಡು ಬುಡವೊ । ಪಡವಿಯೋಳು ಮೆರೆವ ಕಡಕೋಳ ವಾಸ । ಮಹಾ ಮಹಾಂತನ ವಾಕ್ಯವೋ । ವಾಕ್ಯ ಮಡಿವಾಳನೋ । ಮಡಿವಾಳನ ನಾಮೋ ನಾಮ ಮಡಿವಾಳನೋ ॥ 3 ॥

10ನೇ ಪದ

ಯಲ್ಲ ಸ್ವರೂಪವು ತಾನೆಲ್ಲ । ಬ್ರಹ್ಮವೆಂಬುದೆ ಸೊಲ್ಲ । ಬಲ್ಲೆ ಬಲ್ಲೆನೆಂಬುದೆ । ಭ್ರಮಿಹೊಲ್ಲ । ನಾನುನೀನಿಲ್ಲ । ನಲ್ಲೆವೇದಾಗಮ ಓದಿದ ಜಾಣ । ಸುಪ್ರವೀಣ । ಪೌರಾಣ । ಬಹುರಾಣ । ನಿಜವೆಂದಿಗಿಕಾಣ ॥ ಪ ॥ ಮಾಯಿಯೆಂಬುದೆ ಮಹಾಕಾಳಿ । ಗಾಳಿಗೋಪಾಳಿ । ಬಾಯಿಗೆ ಬಂದದ್ದೆ ಭುಪಾಳಿ । ರೂಪಿಲ್ಲದವಾಳಿ ॥ ನ್ಯಾಯ ಅನ್ಯಾಯವಾಯೀತು । ಆದದ್ದಾಯಿತು । ಮೋಹವ ಮಾಯಿತು । ಸುಮ್ಮನೆ ಸೂಯಿತು । ಸುಳುವಿಲ್ಲದೆ ಹೋಯಿತು ॥ 1 ॥ ಸೂರ್ಯನ ರೂಪ ಸ್ವಲ್ಪಾಕಾರ । ಬಿಸಲು ಅಪಾರ । ಕಾರ್ಯಕಾರಣ । ಕೀರಣ ಕೂರ । ಇದು ತೋರಿ ತೋರ ॥ ಹೋರ್‍ಯಾ ಎಲ್ಲರಿಗೂ ಮಾಡಿದ ಹೊತ್ತು । ಅವನ ಗೊತ್ತು ಯಾವಲ್ಲಿತ್ತು । ನನ್ನ ಪತ್ತು । ತನಗಿಷ್ಟಿಲ್ಲ ಹೊತ್ತು ॥ 2 ॥ ಓ ಎಂಬುವದೊಂದೇ ಮಂತ್ರದ ಮೂಲ । ಷಡು ಶಾಸ್ತ್ರದ ಜಾಲ । ಆಯಿತಾ ಕಸಕಸಿ ಸಹಸ್ರ ಪಾಲ । ಅದು ಅವಶ್ಯ ಲೀಲ । ಏ ಐ ಎಂಬೋ ಅರುವು ಮಹಾಂತೇಶಾ । ಮಹೇಶಾ । ಸುಪ್ರಕಾಶ । ಸ್ವಪ್ನ ನಿವೇಶಾ ॥ 3 ॥

11ನೇ ಪದ

ಇಲ್ಲೆ ಅಧಿಕ ವಸ್ತು । ಇಲ್ಲೆ ಅಧಿಕನಲ್ಲೆ । ಸುಳ್ಳೆ ಚಿಂತಿಲಿಂದೆ । ಅಲ್ಲಲ್ಲೆ ಹುಡಿ ಕ್ಯಾಡಿದೆನ್ಯಾಕೆ ॥ ಪ ॥ ಹಸರು, ಹಳದಿ, ಕೆಂಪು । ಕರಿದು ಮಿಸುಪ ಬಳಿದು । ಮಿಶ್ರ ವರ್ಣ । ಪಸರಿಸಿರ್ಪ । ಪ್ರಭೆಗಳದೇ । ಶಿವ ನನ್ನ ಮೂಗುತಿ ಮುತ್ತು ॥ 1 ॥ ಕಾಸು ಕೊಟ್ಟರೇಸೋಯಂಬಾ । ಭಾಷೆಯುಂಟು । ಆಶೆಯು ಎಷ್ಟು । ಭೂಷಣಕೆ ಮೇಲಾದಂತ । ಮಾಸಿ ತಾಳಿ ಕರಮಣಿ ದಾರ ॥ 2 ॥ ಮೆಚ್ಚಿ ಬಿದನೂರ ಮಡಿವಾಳಾಖ್ಯ । ಮುಚ್ಚಿಕೊಟ್ಟ ಪಚ್ಚದುಂಗುರ । ಎಚ್ಚರಿಲ್ಲದ ಹುಚ್ಚನಾನೆ ಬಚ್ಚಿಟ್ಟನೀ ಕರಡಗಿಯೊಳಗೆ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

12ನೇ ಪದ

ಅಲ್ಲ್ಯಾಕೊ ಹುಡುಕುತಿ । ಇಕೋ ಇಲ್ಲ್ಯಾದೋ ಮುಕುತಿ । ಬಲ್ಲೆ ಬಹು ಹರ ಕಥಿ । ತಿಳಿವಲ್ಲಿ ನೀನೆಲೆ ಕೋತಿ ॥ ಪ ॥ ಆಶಿ ಮಡಿದು ನೋಡೆ । ನಿರಾಸಿ ಹಿಡಿದು ಮಾಡೆ । ಪಾಶಿ ವಿಭವದೀಡೆ । ಉಲ್ಲಾಸಿಯ್ಯಾಗೋದು ಪಾಡೆ ॥ 1 ॥ ನಾನು ನೀನು ನೀನೆ । ಮತ್ತೆ ನೀನು ನಾನು ನಾನೆ । ನಾನು ನೀನು ತಾನೆ । ಆಕೋ ತಾನೆ ನಾನು ನೀನೆ ॥ 2 ॥ ಭಾವೇ ಎರಡು ನೋಟ । ನೀ ಭಾವಿಸು ವಂದೆ ಕೂಟ ॥ ಜೀವ ಪರಮರವಾಟ । ಮಹಾದೇವ ಮಹಾಂತನಾಟ ॥ 3 ॥

13ನೇ ಪದ

ಮಾಡೋ ನಿಃಕಾಮದ ಭಕ್ತಿ । ನಿನಗಾಗುವದು ಆ ನಿಜಮುಕ್ತಿ ॥ ಬ್ಯಾಡೊ ಪರರ ಉಕ್ತಿ । ತಿಳಿಬೇಗ ನೀನಿನ್ನ ಯುಕ್ತಿ ॥ಪ॥ ನಿರ್ವಾಂಚಕನಾದ ಶಿಷ್ಯ । ಅವ ಮರುಳ್ಯಾಕಾದ ಮನುಷ್ಯ ॥ ಪೂರ್ವಾರ್ಜಿತ ಭವಿಷ್ಯ । ಈಗ ತೀರಿಸಿ ಕಳಿವನಾಯುಷ್ಯ ॥ 1 ॥ ಉಂಡದ್ದು ಉಣಲಿಬ್ಯಾಡ । ಉಣವಲ್ಲದ್ದು ಬಯಿಸದು ಕೇಡ ॥ ಕಂಡದ್ದು ಕಾಣಲ್ಲದು ಪಾಡ । ಕಾಣಿಸದ್ದುಡುಕುದೇನಾದೆಗೂಡ ॥ 2 ॥ ಇದ್ದದ್ದಿತ್ತಾಲ್ಲಾದು ಕಾಜಿ । ಇದ್ದದ್ದೋಗುದುದೆತ್ತಾದು ಪಾಜಿ । ಇದ್ದದ್ದಿದ್ದದ್ದೆ ಪೂಜಿ ಇಲ್ಲದಿಲ್ಲದ್ದೆ ಮಹಾಂತನ ಸಹೂಜಿ ॥ 3 ॥

14ನೇ ಪದ

ಆವ ಭಯವು ಇನ್ನೆನವಗ । ಮಾಯಾ ನಿರ್ಮಾಯನಾದಾವಗ ॥ ಸಾವುದು ಹುಟ್ಟುದು ಜೀವ ಭಾವ ಭ್ರಮೆ । ಸಾವೇನು ಸಾಹ್ಯವೇನು । ನೋವೇನವಗ ॥ ಪ ॥ ಏನೇನು ನಿಲ್ಲದಲೊಂದು । ಏನೋ ತಾನಾಯತೊಂದು ॥ ಜ್ಞಾನ ಜ್ಞಾನವು ಯೋಗಭೋಗವು ತಾನದು । ಹುಸಿಹುಸಿಯಂದರಿದವಗ ॥ 1 ॥ ಸ್ಥಾಣುವಿನೋಳು ತಸ್ಕಾರತಾನು । ಕಾಣಿಸಿಕೊಳ್ಳುವದನುಮಾನವೇನು ॥ ಪ್ರಾಣ ಪ್ರಪಂಚವು । ಅಣುರೇಣು ಮಹಾತ್ಮವು । ಮೂಣದೆ ಹುಸಿ ಕನಸೆಂದರಿದವಗ ॥ 2 ॥ ಇದ್ದದ್ದಾಗತಾದ ಹ್ಯಾಂಗ । ಅದು ಇಲ್ಲದ್ದಾಗುವದು ಹ್ಯಾಂಗ । ಇದ್ದದ್ದಾಗದು ಇಲ್ಲದ್ದಾಗದು । ಇದ್ದಿದ್ದಿಲ್ಲಲ್ಲಿಲ್ಲೆಂದರಿದವಗ ॥ 3 ॥ ಭಯಯೆಂಬುವ ಶಿವನಾಮಿ । ಹುದು । ಭಯಯೆಂಬ ಅಂಜಿಕೆಯಲ್ಲಿಹುದೊ ॥ ಭವ ಭವ ಶಂಕರ ಸೋೀಯೆಂಬೊ ಹರಹರ ಶಿವ । ಅಲ್ಲಾ ಅಲ್ಲಾಯಂದರಿದವಗ ॥ 4 ॥ ದೇಶಕಥಿಕ ಸುರಪೂರದೇಶ ಕಡಕೋಳ ಗುಡ್ಡದ ಮಹಾಂತೇಶ । ಕೊಡುವರ ಬಿಡದನುಭವ ಕರುಣಾಮೃತ । ಪಡೆದುಕೊಂಡು ಉಂಡಿಲ್ಲಾದವಗ ॥ 5 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

15ನೇ ಪದ

ಆಯಾಸ ಅಣುಯಿಲ್ಲಾವ್ವೋ। ಸದ್ಭಾವಿಗೆ ಭ್ಯಾಯದ ಭಮಿಯಿಲ್ಲವ್ವೋ। ಕಾಯ ಕುಜಕಜ್ಯಾದಿ ಶಾಖಿ। ಯ್ಪಾಪಾಯಗುಣ॥ ಪರ್ನರ್ಾಶಿ ಪವನದಿ॥ ಛಾಯ ವಡಿಯದೆ ಕಡಿದು। ಡ್ಡಾದಿಯ ನ್ಯಾಯದಂತಿರೆ। ಸ್ಥಾಣುವಾದರೆ॥ಪ॥ ಕಾಲು ಮುಂದಾಗಿ ಹುಟ್ಟಿ। ಸಿದ್ಧರು ಕೂಡಿ। ಮೂಲಮಂತ್ರ ಹಿಡಿದು। ಘಟ್ಟಿ ಸಾಲು ದಿಕ್ಕಪನೆ ಕಟ್ಟೀ। ಸಂಶಯದ ಆ ಸ್ಥೂಲ ಭೀತಿಯನೆ ಅಟ್ಟೀ॥ ಆ ಲಿಂಗ ಜನ ಹಚ್ಚಿ ತನ್ನನುಪಾಲ ಪಣುಜನ। ಪಣುಜ ಮುದುಗಿದ ಕೀಲ ಬಗಿದು ಈ ನೆಲೆ ನನಗಿದು। ಈ ಸಂವಿಧಾನ ತಗಿದರೇ॥1॥ ಮೇಲುಗಿರಿಯನ್ನೆ ನೋಡಿ। ಅಲ್ಲಿಗೆ ಹೋಗಿ ಮೇಲೊಂದು ಗಡಹಾ ಮಾಡಿ। ಕಿಲಲಾಕಾರವ ತೋಡಿ। ಧಾನ್ಯಾದಿಯ ಚಾಲ ಸಂಗ್ರಾಹನೆ ಕೂಡಿ॥ ಕೀಲಿ ಜಡಿದಗಸಿಗಳ ಎಡ್ಡಿ। ಸಕೀಲದರಿ ಚಲಿಸುತಲಿ ವೀರರ ಮಾಲಿಗಳನೋಲ್ಸೆಸಿ। ಈ ಭೂಪಾಲರಿಗೆ। ತಾ ಪಾಶ್ಚಾನಾದರೆ॥2॥ ತನ್ನರಮನಿಯೊಳಗೆ। ಆರರಿಯದ। ಮುನ್ನಿರ್ದವರ ಹೊರ ವಳಗೆ। ನನ್ನಿಂದಾಗವಿಗೆ। ಹೋ ಹೇಳಲಾಯಿನ್ನು ಬಾರದು ಕವಿಗೆ॥ ತನ್ನ ಆಜ್ಞೆಯ ಮೀರಿಯೋ ಚೆಪ್ಪನ್ನ ದೇಶವು ಮುನಿದು ಮುತ್ತಲು। ಜೆನ್ನ ಗುಡ್ಡದ ಮಹಾಂತ ಗವಿಗೆ। ನೀ ಬಿನ್ನಿಲ್ಲದೆ ಸಿಗದೆ ಹೋದರೆ॥3॥

16ನೇ ಪದ

ಮಾಡುವದ್ಯಾತಕೋ ನೀ ಅವಿಶ್ವಾಸವ॥ ಸೋಸಿ ನೋಡೋ ಶ್ರೀ ಗುರುವಾದ। ಸ್ವತಾರ್ಥ ಸಾವಸವ॥ಪ॥ ಶ್ರದ್ಧನಿಷ್ಠಿ। ದಷ್ಟ ಅಷ್ಟ ಅಷ್ಟಾಗದೆ। ಹೋ। ಅಷ್ಟಾಗದ್ದೆ। ಹಾ। ಅಷ್ಟಾಗದೆ। ಭಕ್ತಮಹೇಶಾಹುದೆ। ಅಷ್ಟಾಗದೆ ಭಕ್ತ ಮಹೇಶಾಹುದೆ। ಬುದ್ಧಿವಂತ। ಸಂತ ಅಂತಾದರೆ। ಸಾವಧಾನವು ಬಾರದೇ। ಅಂತಾದರೆ ಸಾವಧಾನವು ಬಾರದೇ॥ ಸಿದ್ದಿ ಸಲದೆ ಅನುಭಾವಾನಂದವು। ಶುದ್ಧವಾಗದು। ಶಿವಸುಖ। ಯೇಕಾದಶವೋ। ಸಾರಸವೋ। ಸಮರಸವೋ ಮಹಾ ಜಸವೋ। ಬಹು ಹಸವೋ। ಬಹು ಹಸವೋ ಬ್ಯಾಡಕೆಡಬ್ಯಾಡ॥1॥ ಭುವನ ಭೋಗರಾ ತ್ಯಾಗ। ತ್ಯಾಗಾಗದೆ। ಹೋ ತ್ಯಾಗಾಗದೆ ಹಾ ತ್ಯಾಗಾಗದೆ। ಮೋಕ್ಷಾ ಪೇಕ್ಷಾಹುದೇ। ಭವದ ಸಂಗ ಭಂಗ ಹಿಂಗಿಸಿದರೇ। ಅಂಗವು ಲಿಂಗಾಗದೆ ಹಿಂಗಿಸಿದರೆ। ಅಂಗವು ಲಿಂಗಾಗದೆ। ಅವರ ಸೊಮ್ಮು ಅವರಿಗೆ। ವಿವರಿಸಿದಾಗಳೆ॥ ಅವರಿವ ನಾವೂ ನೀವು ನೋವೂ। ಸಾವುದೊಂದೋ। ಯನ್ನುಂದೋ। ನೀದಂದೋ। ಬಹು ದುಂದೋ। ಮಹಾ ಚಂದೋ। ಮಹಾ ಚಂದೋ। ಬ್ಯಾಡ ಕೆಡಬ್ಯಾಡ॥2॥ ಅರುವು ಕುರುವು ಪರವು। ಮರವಾಗದೆ। ಹೋ। ಮರವಾಗದೆ। ಹಾ ಮರವಾಗದೆ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಜೀವನ್ಮುಕ್ತಾಹುದೆ । ಮರಹಾಗದೆ ಜೀವನ್ಮುಕ್ತಾಹುದೆ । ಶರೀರ ಧರ್ಮ । ವರ್ಮ । ಕರ್ಮಿಲ್ಲಾದರಾ । ನಿಜ ತಾನಾಗದೇ । ಕರ್ಮಿಲ್ಲಾದರಾ । ನಿಜ ತಾನಾಗದೇ । ಮರೆವ ಛಿಣಮಗೇರಿ ।। ಗುರುಮಹಾಂತೇಶನ । ಪರಮ ಸ್ವಯಂ ಬ್ರಹ್ಮವು ತಾನಿಹುದೋ । ಯಲೋ ಸರ್ವೋ । ಯಲ್ಲೋ ಚಿದ್ಬಯಲೋ । ಮಹಾಬಯಲೊ ನಿರ್ವೈಲೊ । ನಿರ್ವೈಲೊ । ಬ್ಯಾಡ ಕೆಡಬ್ಯಾಡ ।। 3 ।।

17ನೇ ಪದ

ಇಲ್ಲಿ ಅಳಿಯದೇ । ತಿಳಿಯದೆಂದಿಗೇ । ನೀ ಬಲ್ಲಗುಬಾ ನನ್ನೊಂದಿಗೆ ।। ಸಲ್ಲದು ಸುಖ ದುಃಖ ಸರಿಗಣಾದವರಿಗೆ । ಇಂದಿಗೆ ನಾಳೆಂದಿಗೆ । ನಿಮ್ಮ ತಂದೀಗೆ ।। ಪ ।। ಅಜ ಹರಿ ಹರರಾದಂದಿಗೆ । ಆ ನಿಜವು ತಿಳಿಯೆಬಂದೀ ಯನ್ನೊಂದಿಗೇ ।। ಕುಜನ ಕುಹಕ ಕಮಲ ತಿಳಿಯಲದವರಿಗೆ । ಇಂದಿಗೆ ನಾಳೆಂದಿಗೇ । ನಿಮ್ಮ ತಂದೀಗೆ ।। 1 ।। ಸ್ಥಾಣು ಚೋರ ನ್ಯಾಯದಂದೀಗೆ । ಕಣ್ಣ ಕಾಣಬೇಕೆಂದಿಯನ್ನೊಂದಿಗೇ ।। ಜಾಣ ವಿವೇಕ ವಿಚಾರಿಲ್ಲದವರಿಗೆ । ಇಂದಿಗೆ ನಾಳೆಂದಿಗೆ ನಿಮ್ಮ ತಂದೀಗೆ ।। 2 ।। ಹಗ್ಗ ಹಾವಿನ ತ್ರಾಂ ಬಂದಿಗೆ । ನಿ ಹಿಗ್ಗಿಗ್ಗಿ ಬಂದಿ ಯಿನ್ನೊಂದೀಗೆ ।। ಕಗ್ಗುಮನದ ಮಲಿನವಳಿಯಲ್ಲದವರಿಗೇ । ಇಂದಿಗೆ ನಾಳೆಂದಿಗೆ । ನಿಮ್ಮ ತಂದೀಗೆ ।। 3 ।। ಪಾರಿವುಳವೆ ಕೇಳ್ಬೇಕೆಂದಿಗೇ । ನೀ ಹಾರೈಸಿ ಬಂದಿಯನ್ನೊಂ ದಿಗೆ ।। ಸಾರ ಶ್ರೀ ಗುರು ಶೇಷ ಸೇವಿಸದವರಿಗೆ । ಇಂದಿಗೆ ನಾಳೆಂದಿಗೆ । ನಿಮ್ಮ ತಂದೀಗೆ ।। 4 ।। ಮೃಢ ಮಹಾಂತಪುರ ಮಹಾನಂದೀಗೆ । ಮುಕ್ತಿ ಪಡೆಯಲು ಬಂದಿಯನ್ನೊಂದಿಗೆ ।। ಜಡ ಜಲ ಮೃಗ ತೃಷಿ ಅರಿಯಲದರಿಗೇ ಇಂದಿಗೆ ನಾಳೆಂದಿಗೆ । ನಿಮ್ಮ ತಂದೀಗೆ ।। 5 ।।

18ನೇ ಪದ

ಆಯಾತವಾಯಿತೇ । ಪ್ರಮಥರಿಗೆ ।। ಪ್ರಭುವಿನ । ತಿಳಿ ಪೂರ್ಣನುಭಾವ ।। ಪ ।। ಕಾಯವೆ ಕಾಣ ಬಂದಸ್ಥಿ ಮೂಲ । ಕರ್ಮ ನಿರ್ಮಲಕೆ ತನ್ನನುಕೂಲ ।। ಸ್ವಾಯಾತ ಮಾಡ್ಗಂಜಿ । ಗೊಂಗಡಿಗೆ । ನಾಡ ಮಾತಿನೋಳಾದೆ । ಶೀಲ ಶೂಲ ।। 1 ।। ಶಿವನ ನಿಜ ತಿಳಿವದೆ ಮಹಾಜ್ಞಾನ । ತಿಳಿಯದವನಾದರ್ಯಾತರ ಜ್ಞಾನ ।। ಭವ ಭವಯೆಂಬುದೆಲ್ಲ್ಯಾದೆಲ್ಲರಿಗೆ । ಭ್ರಾಂತಿ ಕಲ್ಪನಿಗಾಯಿತನುಮಾನ ।। 2 ।। ಸರ್ವ ರೂಪಿಗೆ ಶೂನ್ಯಾದಿ ದೈವ । ಶೂನ್ಯಾ ಸಂಪದ ನೀಗ್ಯಾವಜೀವ ।। ನಿರ್ವಯಿಲಾದ ಮಹಾಂತನಿಗೆ । ಮರವರಿವದಕ್ಕೆಲ್ಲಾದ ಥಾವ ।। 3 ।।

19ನೇ ಪದ

ತಾವೆರಡೊಂದಾದ । ಸುಖ ಸಾಮ್ರಾಜ್ಯ ।। ಮುವ್ವರೊಂದಾದನುಭವವೇ ಸಾಯುಜ್ಯಾ ।।ಪ।। ಸಾಲೋಕ್ಯ । ಸಾಮೀಪ್ಯ । ಸಾರೋಪ್ಯ ಪೇಕ್ಷಾ ।। ಚಿಲಾಳ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೀಯಾಳ ಚಂಗಳಿ ಸಾಕ್ಷಿ ॥ 1 ॥ ಚಿತ್ತು ಚಿದ್ರೂಪಾದರದು । ಬಹುಘೋರ । ಚಿತ್ತು ಚಿತ್ತಾದರೆ । ಚಿನ್ಮಮಕಾರ ॥ 2 ॥ ಬಲ್ಲನೋ ಮುಕ್ತೆಂದರೇ ಹಿರ್‍ರನೇ ಹಿಗ್ಗಿ ॥ ಪೆಲ್ಲನೆ ಬರವಲ್ಲಿ ಸರ್‍ರನೆ ಸಗ್ಗಿ ॥ 3 ॥ ಕಂಶ ಬೆಟ್ಟದ ಕಿಂದ ಕಿವಿ ಬೆಟ್ಟಗಳವೊ ॥ ಕಂಡುಂಡವನೆ ಬಲ್ಲ । ಅದರ ಆಳಲ ಬಳಲವೋ ॥ 4 ॥ ಕೆಡವೆನವ ವಬ್ಬಿಯನು ಪ್ರಮಾಣೇ ॥ ಗುರ್ತಿಡವೆಂದು ತೆರಿಯಗೊಂಡರೇ ತನ್ನ ತ್ರಾಣೇ ॥ 5 ॥ ತಾ ನಿರಾಳಾಗೋದೆಂದೆಂದಿಂಗೆ ಅರಿಯ ॥ ನೀ ನಿರಾಳಗೆಂಬೋದೆಂದೆಂದು ಮರಿಯ ॥ 6 ॥ ಸತ್ಕರ್ಮವೆಂದು ಮಾಡುವ ಬೆಟ್ಟದಷ್ಟು ॥ ದುಷ್ಕರ್ಮವಾಗುದು ಸುಖವಿಲ್ಲೆಳ್ಳೊಷ್ಟು ॥ 7 ॥ ಒಳ್ಳೇದ್ದೊಲ್ಲಾದ ಮೇಲ್ಲೊಲ್ಲೊಳ್ಳಾಹುದೇ ॥ ಕಳ್ಳ ನಾಣ್ಯವ ಕಳವಳಿಕ್ಯಾಗದಿಹುದೇ ॥ 8 ॥ ಅಲ್ಲೆಂಬೋ ಶಬ್ದದರ್ಥಾಗದನರ್ಥ ॥ ಬಲ್ಲನೋ ಮಹಾಂತಪುರ ಮಹಾಂತ ಸಮರ್ಥ ॥ 9 ॥

20 ನೇ ಪದ

ಹಾಡೋದೆ ಹಾಡೋ ನೀ ಕಿಸುಬಾಯಿ ದಾಸ ॥ ಮಾಡೋದೆ ಮಾಡೋ । ಪ್ರಪಂಚವು ರಾಸ ॥ಪ॥ ಎಲ್ಲರಿಗಾಗದು ಆ ನಿಜ ಮುಕುತಿ । ಬಲ್ಲವನಿಗೆ ಆಗಾಗದೆಂದೀಗಿಕುತಿ ॥ 1 ॥ ಕೇಳೆನಂದವನಿಗಿ । ಕಿವಿ ಕಿವಡಾಯಿತು । ಹೇಳೆನಂದವನಿಗಿ । ಬಾಯ್ಗಿ ಬರದ್ದೋಯ್ತು ॥ 2 ॥ ನೋಡೆನಂದವನಿಗೆ । ನಯ ನಿಲ್ಲದಾಯ್ತು ಕೂಡೆನಂದವನಿಗಿ । ಮೈಯಿಲ್ಲದ್ದೋಯ್ತು ॥ 3 ॥ ಕಾಮವಿದ್ದವನಿಗೆ । ಕಾಮಿನಿಯಿಲ್ಲ । ಕಾಮಿನಿದ್ದವನಿಗೆ ಕಾಮ ತಾನಿಲ್ಲ ॥ 4 ॥ ಅರವತ್ತಾರು ಕೋಟಿ । ಕರಣಂಗಳ್ಹಿಂಗೇ ॥ ಕುರುವಿಟ್ಟು ಹೇಳೂದಕ್ಕೆ । ಕೇಳೋಂದಿನ್ಯಾಂಗೆ ॥ 5 ॥ ಗುರುವಿಗೆ ಗುರುವಾಗೋ । ಗುಪ್ತವಿನ್ಯಾಕೋ । ಮರವಿಗೆಮರವಾಗಿ ಮರೆತಿರಬೇಕೊ ॥ 6 ॥ ಕೆಳಗಾಗಿ ಮೇಲಾಗಿ । ಸರಿಯಾಗಬೇಕೋ ॥ ಒಳಗಾಗಿ ಹೊರಗಾಗಿ । ನಡು ಉಳಿವದ್ಯಾಕೋ ॥ 7 ॥ ಮನಸು ಮನ್ನಿಸಿಕೊಂಡು ಮಾಡುವದು ಪಾಡೋ॥ ಮನಸುಕಿನಸುಕೊಂಡರದು ಬಹು ಕೇಡೋ ॥ 8 ॥ ಪೊಡವಿಯೊಳಧಿಕ ಮಹಾಂತಪುರವಾಸ । ಮಾಗುರು ಮಡಿವಾಳಾಖ್ಯನ । ವಾಕ್ಯ ಬಹು ಕಾಸ ॥ 9 ॥

21 ನೇ ಪದ

ಭ್ರಮಿ ಹತ್ತೀ । ಭಮಿ ಹತ್ತಿ ಭ್ರಮಿ ಹಾಡಿರೊ ಪರಿಯಂತರ ನಿಮಗೀದು ॥ ಪ ॥ ಮಾನ್ಯವಂತ ಮಾನುಣಿ । ಸತ್ಕುಲ । ಧನಧಾನ್ಯ । ಅನ್ನ ಸಂಪನ್ನ । ಸೌಖ್ಯರಿಗೆ । ಭ್ರಮಿಯಿಲ್ಲ। ಭ್ರಮಿಯಿಲ್ಲ । ಭ್ರಮಿಯಿಲ್ಲ ॥ ಮಾನವಂತ ಮಾನುಣಿ । ಸತ್ಕುಲ । ಧನಧಾನ್ಯ । ಅನ್ನ ಸಂಪದವನಳಿದವರಿಗೆ ॥ ಭ್ರಮಿ ಹತ್ತಿ। ಭ್ರಮಿ ಹತ್ತಿ । ಭ್ರಮಿ ಹಾಡಿರೋ ಪರಿಯಂತರ ನಿಮಗೀದು ॥ 1 ॥ ರೂಪ ವಿದ್ಯೆ। ತಪ। ನಿಷ್ಠಿ । ನಿಧಾನ । ಸುಲಾಪ್ತ। ಸತ್ಯ । ಸತ್ಕ್ರಿಯ । ಸಜ್ಜನರಿಗೆ । ಭ್ರಮಿಯಿಲ್ಲ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭ್ರಮಿಯಿಲ್ಲ ॥ ರೂಪವಿದ್ಯೆ । ತಪನಿಷ್ಠೆ । ನಿಧಾನ ಸುಲಾಪ ? ಸತ್ಯ ಸತ್ಕ್ರಿಯನಳಿದವಗೆ ॥ ಭ್ರಮಿಹತ್ತಿ । ಭ್ರಮಿ ಹತ್ತಿ । ಭ್ರಮಿಹಾಡರೋ ಪರಿಯಂತರ ನಿಮಗಿದು ॥ 2 ॥ ಶಾಂತ ಪೂಜ್ಯ । ಸದ್ಗುಣ ಸಂತಾನ । ಮಹಾಂತ ರಾಜ । ತೇಜದೋಳಿರುವರಿಗೆ । ಭ್ರಮಿಯಿಲ್ಲಿ । ಭ್ರಮಿಯಿಲ್ಲ । ಭ್ರಮಿಯಿಲ್ಲ ॥ ಶಾಂತ ಪೂಜ । ಸದ್ಗುಣ ಸಂತಾನ । ಮಹಾಂತ ರಾಜ ತೇಜವನಳಿದವರಿಗೆ ॥ ಭ್ರಮಿಹತ್ತಿ । ಭ್ರಮಿಹತ್ತಿ । ಭ್ರಮಿ-ಹಾಡಿರೋ ಪರಿಯಂತರ ನಿಮಗಿದು ॥ 3 ॥

22 ನೇ ಪದ

ಬ್ಯಾಡೋ ಹೋಗಲೆ ಪ್ರಾಣಿ । ನಿಜ ನೀನೆಂದಿಗೆ ಕಾಣಿ ॥ ಕೂಡಿ ಕಾಡುವ ಧಾಣಿ । ಭಾವ ಭೇದವು ಮಾಣಿ ॥ ಪ ॥ ಆಶಿ ಎಳ್ಳಷ್ಟಿಲ್ಲ । ರೋಷ ಬಿಟ್ಟವನಲ್ಲ । ಈಶನಾಗುದು ಬಲ್ಲ । ದಾಸನಾಗಲಿಕ್ಕೊಲ್ಲ ॥ 1 ॥ ಮಡದಿ ಮಕ್ಕಳ ಜಟ್ಟು । ಕಡದೆಂಬ ಮನಸಿಟ್ಟು । ಒಡೆಯರೊಡವಿಯ ಕೊಟ್ಟು । ನಡಿಯ ಸಂಶಯ ಬಿಟ್ಟು ॥ 2 ॥ ಸಹವಾಸ ಬಿಡುವಲ್ಲ । ಸಾವಧಾನ ಹಿಡಿವಲ್ಲ ॥ ಸೇವಕಾಗುದು ಬಲ್ಲ । ಸೇವೆಮಾಡಲಿಕ್ಕಿಲ್ಲ ॥ 3 ॥ ನೀತಿ ಹೇಳಲು ಬಲ್ಲ । ಮಾತುಕೇಳಲಿಕ್ಕಿಲ್ಲ ॥ ಜಾತಿ ಭೇದವ ವಲ್ಲ । ಸೂತಕ ಬಿಡುವಲ್ಲ ॥ 4 ॥ ಮಾಯಿ ಅಳಿಯಲು ಬಲ್ಲ । ಕಾಯ ಗುಣ ಕಳಿವಲ್ಲ । ಆಯಾಸವು ಬಿಡಲೊಲ್ಲ । ಪಾಯಾಸವು ಉಣ ಬಲ್ಲ ॥ 5 ॥ ಏಕಭಾವವು ಬಲ್ಲ । ಕಾಕಗುಣ ಕಳಿವಲ್ಲ । ಜೋಕಲಿರುವದು ಬಲ್ಲ । ಲೋಕ ದುಪಕಾರವಿಲ್ಲ ॥ 6 ॥ ಬಲ್ಲೇನೆಂಬುದು ಬಲ್ಲ । ಇಲ್ಲೆಂಬೋದಿನಿತಿಲ್ಲ ॥ ನಲ್ಲ ಮಹಾಂತನ ಬಲ್ಲ ನಲ್ಲನಾಗಲಿಕ್ಕಿಲ್ಲ ॥ 7 ॥

23 ನೇ ಪದ

ಮಾಯಿ ತಾ ತನ್ನರವು । ಅರಿಯದಲ್ಲ । ಬಾಯಿ ಬಿಡುತಲಾದೆ ಮೂರ್ಲೋಕವೆಲ್ಲ ॥ ಪ ॥ ತಾನೆ ತನ್ನರಿಯದಿದ್ದರೆ । ತನಗೆ ಗತಿಯಿಲ್ಲ । ತಾನೆ ತನ್ನರಿವದಕೆ ಬಾರದಲ್ಲ ॥ ತಾನೆ ತನ್ನರಿವದಕೆ ಗುರುವಾಗಿ ಶಿಷ್ಯ ಆಗಿ । ತಾನೆ ಬಂದರುವು । ಅರುವಿಸದೆ । ಅರುವು ಅರಿವುದಲ್ಲ ॥1॥ ಅರು ಅರಿತ ಗುರುವರನು । ಹೇಳಿದ್ಹಾಂಗೆ ಕೇಳಿದರೆ । ಅರು ಅರಿದು । ಆ ಶಿಷ್ಯ ನಿಜಮುಕ್ತನಾಗುವನು ॥ ಅರುವಿಸುವ ಅರುವು । ಅರಿಯದೆ ಹೋದರಾ ಮುನುಷ್ಯ । ಪರಿಪರಿಯ । ಭವ ಬಂಧಮರವಿಯಲ್ಲಿಹನು ॥ 2 ॥ ಅವನೊಂದು ಹೇಳಿದರೆ । ಇವನೊಂದು ಕೇಳಿದರೆ । ಅವೇಕ ವಿವೇಕ । ಸುವೇಕ ಆಗಲಿಲ್ಲ ॥ ಭುವನದೊಳೊಪ್ಪುವ ಕಡಕೋಳ ವಾಸ ಮಹಾ ಮಹಾಂತ ಮಡಿವಾಳನವನೆ ಇವ । ಇವನೆ ಅವಯೆಂದರಿಯಲಿಲ್ಲ ॥ ಭವ ಭ್ರಮಿ ಹೋಗಲಿಲ್ಲ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

24 ನೇ ಪದ

ಇಲ್ಲೆ ಆದುದಿದೆಯಂದು । ಸೊಲ್ಲಿದ ಶ್ರೀ ಗುರು ಬಂದ । ನಲ್ಲೆ ನೀ ನೋಡಲಿ ಇಂದು । ಎಲ್ಲವು ಮನಸ್ಸಿಗೆ ತಂದು ॥ ಪ ॥ ಏನು ಇಲ್ಲದೇನೊ ತಾನೆ । ಏನಾದರೇನನುಮಾನೆ ॥ ಮಾನುಣಿ ಮಾಜುದೇನೆ । ನಾನಿನ್ನಗ್ಹೇಳೊಂದೆನೆ ॥ 1 ॥ ಇಲ್ಲಾ ದುದ್ದಾದುದ್ದೊಂದೇ ಕೋಟಿ । ಎಲ್ಲಾಗಿಲ್ಲಾಯಿತು ಲೂಟಿ ॥ ಬಲ್ಲವರಿಗೆ ಹೇಳೊ ಸೂಟಿ । ಇಲ್ಲಾಯಿತದಕೇನು ಸಾಟಿ ॥ 2 ॥ ಹರಹರಕಾದುದೊಂದೆ ಹಲವು । ನೆನವಿಗೆ ಬಂದುದೊಂದೆ ಬಲವು ॥ ಕುರುವು ಅರವು ಪರವು ಹುರುವಾದುದ್ದೆ ನಿಲವು । ವರಗುರು ಮಹಾಂತೈಕ್ಯ ಸ್ಥಲವು ॥ 3 ॥

25 ನೇ ಪದ

ಧನವು ಗಳಿಸಬೇಕು ಇಂಥಾದು । ಈ ಜನರಿಗೆ ತಿಳಿಯದಂಥಾದ್ದು ॥ ಅನುದಿನ ಅಜಹರಿ ಮುನುಮುನಿಗಳೆಲ್ಲ । ಹೌದು ಹೌದು ಹೌದೆಂಬಂಥಾದು ॥ ಪ ॥ ಕೊಟ್ಟರೆ ಹೋಗಂಥಾದು । ಅದು ಇಟ್ಟರೆ ತೀರಂಥಾದು॥ ಕಟ್ಟಿದ ಗಂಟು ಬೈಯಲೊಳಗಿಟ್ಟರೆ । ಮುಟ್ಟಲಿಬಾರದಂಥಾದು ॥ 1 ॥ ಕರ್ಮಬಾರದಂಥಾದು । ಆದರ ಮರ್ಮವು ತೋರದಂಥಾದು ನಿರ್ಮಳವಾದ ಮನಕೆ ದಾನಧರ್ಮವನು ಮಾಡುವಂಥಾದು ॥ 2 ॥ ಮರುವಿಗೆ ಬಾರದಂಥಾದು । ನಿಜ ಅರುವಿನಲ್ಲಿ ಇರುವಂಥಾದು । ಮರುವು ಕಳೆದು ಶ್ರೀ ಗುರು। ಮಹಾಂತೇಶನ ಕರುಣದಿಂದ ಕಾಯುವಂಥಾದು ॥ 3 ॥

26 ನೇ ಪದ

ಹುಡುಕಿಕೊಳ್ಳೊ ಮಹಾಜ್ಞಾನ । ಅದು ನಿನ್ನ ಕೂನ । ಬಹುನಿದಾನ । ಹುಡುಕಿಕೊಳ್ಳೊ ಮಹಾಜ್ಞಾನ ॥ ಬಿಡದೆಮಾಡೊ ನಿಜಧ್ಯಾನ । ಅನುಸಂಧಾನ ಅಮೃತಪಾನ ॥ ಪ ॥ ಜೀವ ಮನವು ತನು ತನ್ನ । ಇದು ಅಂಬುದ್ಯಾವದ್ದೇಳೊ ನಮ್ಮಣ್ಣ । ಕಾಯವಿದ್ದರೆ ನಿನ್ನ ಕೊಂಡ್ಯೆವರ‍್ಯಾರು । ಸಂಪನ್ನ । ಭಾವಿಸಿಕೋ ನೀಮುನ್ನ ಸದ್ಭಾವ ಚಿಂತರನ್ನ ॥ 1 ॥ ನೋಡೊ ನೋಡೊ ಎಲ್ಲ । ನೋಡಿದರೆ ತೋರಿಸಿಕೊಡುತಾದಲ್ಲ । ನೋಡಿದ್ದೆ ನೋಡುವದೆಲ್ಲ । ನೋಡಿದ ನೆನಪ್ಹೋಗಿಲ್ಲ ॥ ಕೂಡಿದ ಸತಿ ಬದಿಲಿಲ್ಲ । ಶಶಿನ ಬಾಡಿತ್ಯಾಕೋ ಹುಚುಮಲ್ಲ ॥ 2 ॥ ಸ್ವಪನ ಸುಳುವು । ಸುಳ್ಳಲ್ಲ । ತನಗಿಪರಿತಾಯಿತು ಖರೆಯಿಲ್ಲ । ಜಪತಪ ಸಮಾಧಿಗಳೆಲ್ಲ । ನೋಡಿಕೋ ಅಪರಂಪಾರೆ ಸೊಲ್ಲ ॥ ಸಪರೆ ಮುಪರೆ ದಗದಲ್ಲ ಸುಖ ದುಃಖ ಚುಪಾಸಿಕೊಂಡವನೆ ಬಲ್ಲ ॥ 3 ॥ ಮಾಯಿಯೆಂಬುದೆ ಅಧಿಕಾರಿ । ಆದರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಾಯಸದ್ಯಾಕೆ ಮಾರಿ । ಚ್ಚಾ್ಯಯದ ಶಿಶುವಿಗೆ ದೋರಿ । ನೀ ಪ್ರಾಯಕ್ಕೊಂದಿಸು ತಾರಿ ॥ ತಾಯಿ ತಂದಿ ಹಿತ ಬಾರಿ ಇದರೊ ನ್ಯಾಯವಾಗುವುದು ಬ್ಯಾರಿ ॥ 4 ॥ ಬೆಡಗಿನ ಮಾತೇನಲ್ಲ । ಗುರುಕೃಪೆ ಪಡಕೊಂಡವನೆ ಬಲ್ಲ । ಮೃಡಮಹಾಂತದರೊಳಗಿಲ್ಲ ॥ ಬಿಜನೂರ ಮಡಿವಾಳ್ಯೋಗಿ ಅಪುಟಲ್ಲ । ಜಡ ತೋರಿಕಿ ಜಗಕೆಲ್ಲ ಹುಸಿ ಹುಸಿ ಕಡೆತನಕೆ ವಂದಿಲ್ಲ ॥ 5 ॥

27 ನೇ ಪದ

ಏಸೋಬನ ಲೀಲೆಯಿದು ಐ ಸೋಜಿಗ ಬಂಗಾಲೆ । ಸುಸೀತು ಸುಸುಮ್ನೋ ಸುಳಿಗಾಳೆ । ಹೆಸಲ್ದ ಹೋಯಿತು ಕುಂಡಲೆ ॥ ಪ ॥ ತಾಸುಳ್ಳು ಖರೆಯಿಲ್ಲ । ನೀ ಸುಳ್ಳ್ಯಾಕೊ ಮುಲ್ಲ ॥ ದ್ಯಾಸಕ್ಯಾವನು ತರಲಿಲ್ಲ । ಏಸೋ ಕಾಲಾದಿತಲ್ಲ ॥ 1 ॥ ನಾಸುಳ್ಳು ಸಹಜಾದ । ನೀ ಸುಳ್ಳ್ಯಾಕೋ ವಾದ । ನಿಶ್ಶೂನ್ಯವಾದುದ್ದೆ ನಾಲ್ಕು ವೇದ । ವಾಸನ ಹೋದುದ್ದೆ ಹಾಸಾದ ॥ 2 ॥ ಆಗಮಗಳೋದಿ ನಾಳೆ ಕೇಳಿಗ ಹಾಯ್ದಿತು ಗೂದಿ ॥ ಹೋಗುದು ಬರುವದು । ತಿಳಯಲಿಲ್ಲ ಹಾದಿ । ಕೂಗಿ ಹೇಳಿತ್ತು ಗುರುಭೋಧಿ ॥ 3 ॥ ಬ್ರಹ್ಮಾಂಡಾದುದ್ದೆಲ್ಲ । ಪರಬ್ರಹ್ಮವು ಮಾಡಿಲ್ಲ ॥ ಹಮ್ಮ ಹಾರಸಿದವನೆ ಬಲ್ಲ । ನಮ್ಮನ ಹಡದವಳ್ಯಾವಳಿಲ್ಲ ॥ 4 ॥ ಮೋಕ್ಷಕೆ ಮಹಾಂತಯೋಗಿ । ತಾ ದೀಕ್ಷಿಕ ಮಡಿವಾಳನಾಗಿ । ಸೋಹಂ ಸೋಹಂ ಎಂಬುದು ತಾನೆ ಪೋಗಿ । ಸಾಕ್ಷಾತ ತಾನಿದ್ದುದು ಇಲ್ಲದಾಗಿ ॥ 5 ॥

28 ನೇ ಪದ

ನಿವಾಳಿಸುವೆ ದೇಹ । ನೀವಾಳಿಸುವೆ ದೇಹ । ಭವಾಳಿಯೋಳಾದ ನಾಹಂ । ದಿವಾಳಿಸುವೆ ದೇವಾ ॥ ಪ ॥ ಇಳೆಯೋಳು ಸ್ತ್ರೀ ಮಾಯಿ । ಹಳಿದು ತೆರಿದಾರು ಬಾಯಿ । ಹೊಳೆವ ಕುಚಗಳ ಛಾಯಿ । ಯಳೆಯ ತೆಂಗಿನಕಾಯಿ ॥ 1 ॥ ಯೋಗಿ ಯೋಗೆಂದರಣ್ಣ । ಮೂಗಿಗಿ ಹಚ್ಚಿತೊ ಸುಣ್ಣ ॥ ಸೋಗ್ಯಾದ ಮೈಬಣ್ಣರಾಗ ನಿಂಬೆಯ ಹಣ್ಣ ॥ 2 ॥ ಕಾಮದ ಮದದಬ್ಬು । ತಾಮಿಸಿಗಳ ಮಬ್ಬು । ಕೋಮಲಾಂಗನೆ ರಬ್ಬು । ರಾಮು ರಸದಾಳಿ ಕಬ್ಬು ॥ 3 ॥ ಇಳೆಯಡಬಲಕಿಟ್ಟ । ಕಳೆಗಂಡಯರಡಿಟ್ಟ । ತಳಗಿ ತುಂಬಿಗಿ ಕೊಟ್ಟ । ಕೊಳ್ಳುವ ಮಹಾಂತನಳವಟ್ಟ ॥ 4 ॥

29 ನೇ ಪದ

ಆರು ತನಗೇನಂದರೇನು । ಆಗೋ ಸಮಾಧಾನ ॥ ದೇವನು ತಾನಾದ ಮೇಲೆ । ವಾಸನ ಹೋದದ್ದೇ ಖೂನ ॥ ಪ ॥ ಅರಿಯದೆ ಅಜ್ಞಾನಿ ಮೊದಲು ಎಲ್ಲರೊಂದೆಯಾಗಿ ॥ ಇಲ್ಲದ್ದೊಂದು ಮಾತು ಕೇಳಿ । ಬಲ್ಲೆನೆಂಬುದು ನೀಗಿ ॥ ಸೊಲ್ಲಿ ಸೊಲ್ಲಿನಲ್ಲಿ ಒಬ್ಬ ಖುಲ್ಲರ ಹೊಟ್ಟೆಯ ಸೀಳಿ ॥ 1 ॥ ಹತ್ತು ಮಂದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕೂಡಿ ಒಂದು । ಗೊತ್ತಿಗೆ ಹೋಗಲಾಗಿ ॥ ಸತ್ತದ್ದೊಂದು ಕಂಡು ಅವರು । ಮುಕರಿ ಕೊಂಡರು ಬೇಗಿ । ಉತ್ತಮನೊಬ್ಬ ವಲ್ಲೆವಲ್ಲೆಂದರೆ । ಸತುತ್ತದ್ದೆಂಬುದೇಕಾಗಿ ॥ 2 ॥ ಮಡಲೋಳಾತ್ಮ ನೀನೆ ಸರ್ವ । ಒಡೆಯನಿಲ್ಲದಲ್ಲೋಗಿ । ಬುಡನಡು ಕಡೆಗಾಣಟಿ ಯಮ ನರಕದ । ಮಡುವಿಗೆ ಬಿದ್ದರು ಹೋಗಿ ॥ ಮೃಡಮಹಾನಂದದಾಚಲಾನೋ ಮಹಾಗುರು । ಮಹಾಂತಯೋಗಿ ॥ 3 ॥

30 ನೇ ಪದ

ಅಲಗರ್ಜಿ ಅನುಭೋಗ । ತಳಳಳ ಎನ್ನಿರಿ । ಈ ಇಂದ್ರಜಾಲ । ಮಹೀಂದ್ರಜಾಲ । ಬಲು ಮನಸಿಗಿ ತಂದಿರಿ ॥ ಪ ॥ ಏನೋ ತಾನೊಂದಾಗಿ। ತಾನೊಂದು ಹಲವಾಗಿ । ಏನೊ ತಾನೊಂದಾದಮೇಲೆ । ನಾನೀನೆಂಬುದ ನ್ಯಾಯೋ ॥ 1 ॥ ಎತ್ತು ಮನಿಗೆ ಬಂತು । ಹತ್ತು ಹೋಳಿಗಿ ತಿಂತು ॥ ಸತ್ತು ಹೋಗದು ಹೋಗಲಿಲ್ಲ ॥ ಸತ್ತ ಸತ್ತೆಂಬುದನ್ಯಾಯೋ ॥ 2 ॥ ದಿಂಡರಕೆ ಉರಳಲಿ ಹೋದೋ । ಕಂಡೆನು ಬಂದವನಾದೊ ॥ ಕೊಂಡದೊಳಗೆ ಬೀಳುವ ಹೆಣ್ಣಿನ । ರಂಡ್ಯಾಗುವದೊಂದನ್ಯಾಯೋ ॥3॥ ನಾ ಹೆಚ್ಚು ನೀ ಹೆಚ್ಚು । ತಾ ಹೆಚ್ಚು। ಕಲಗಚ್ಚು॥ ಈ ಹುಚ್ಚು ಹೋಗುವತನಕ । ಮೋಕ್ಷ ಬಯಸುವದ ನ್ಯಾಯೋ ॥ 4 ॥ ತೆಲಗಾಣಲಿ ತೇಲಿಸಿಕೊಂಡಿ । ಮಲಗಾಣರಿ ಹೂಳಿಸಿಕೊಂಡಿ ॥ ಹೊಲಿ ದೇಹ ಸಿದ್ಧಿಸಿಕೊಂಡಿ । ಬಲು ಮಹಾತ್ಮ್ಯೆಂಬುದು ಅನ್ಯಾಯೋ ॥ 5 ॥ ಕಡ್ಡೀನೆ ಗುಡ್ಡವಾಯ್ತು । ಗುಡ್ಡಾವೆ ಕಡ್ಡಿಯಾಯ್ತು। ಗೊಡ್ಡ ಬಂಗಾಲೀಯ ಮಾಯಾ। ವಡ್ಡಿ ಬೇಡ. ವದನ್ಯಾಯೋ ॥ 6 ॥ ಅಪರೂಪ ಜ್ಞಾನ ಶಕ್ತಿ। ಅಪರೂಪ ಶಕ್ತಿ ಯುಕ್ತಿ। ಅಪರೂಪ ಮುಕ್ತಿದೋರಿತು । ಅಪರೂಪ ಜಪವೆಂಬ ದೊಂದನ್ಯಾಯೋ ॥ 7 ॥ ಪೊಡವಿಯೋಳು ಬಿದನೂರ । ವಡೆಯ ಮಹಾಂತನ ಸಾರ । ಕೊಡುವೆನು ಸವಾಲ ಹಾಕೊ । ತಡಮಾಡುವ ದೊಂದನ್ಯಾಯೋ ॥ 8 ॥

31 ನೇ ಪದ

ಭೂಪತಿಗಳು ಮೆಚ್ಚಿ। ಅರಸುಖ ತನಗಾಯ್ತು । ತಾಪೂರ್ಣ ಸುಖವಿಲ್ಲ ದ್ದೋಯಿತ್ತೋಯಿತ್ತೋಯಿತೋ । ಆ ಪರಬ್ರಹ್ಮವುನೊಲಿದರೇನಾಯ್ತು । ಈ ಪರಿಭವವೆಲ್ಲ ಹೋಹಿತ್ತೋಯಿತೋ ॥ ಪ ॥ ಕಾಮಕಾಮ ಗೋಷ್ಠಿ ಗೋಷ್ಠಿ ವಿಶ್ವಾಸ ವಿಶ್ವಾಸಮಾಡಿ । ಬಾಳಮಂದಿ ನೋಡಿ ಸತ್ತ ಸತ್ತ ಅತ್ತೆ ಹೋದಾರೋ । ಏನು ಆದರ ಒಮ್ಮೆ ಆಗಲಿ। ಲಗ್ಗಿ ಚಂಡ ಬುರ್ಜಿನಾಟ ಹೌದೆ ಹೌದಾದರಾಗಲಿ । ಅಲ್ಲೇ ಅಲ್ಲಾದರಾಗಲಿ ॥ 1 ॥ ತಾ ವಂಚನಿಲ್ಲದೆ । ತನಗೆ ನಂಬಲು ಗುರು । ಮರಣಾವೇ ಮಹಾನ್ಸ್ವಾಮಿ ಮಾಡಿಕೊಟ್ಟಾ ॥ ತಾ ವಂಚನಾದರೇ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ತಿರಗಿ ನೋಡೆ ನಂದರಿಲ್ಲಾ । ತಾ ಮಾಡಿದಷ್ಟಷ್ಟು ಸುಟ್ಟೇಬಿಟ್ಟಾ ॥ 2 ॥ ದೇಶಕಧಿಕವಾಧ ಬಿದನೂರಪ ವಾಸ । ಮುಡಿವಾಳ ತಂದಿ ಮಹಾಂತೇಶನ್ನೊಗಳುತ । ಕಡಕೋಳ ಗುಡ್ಡಕ್ಕೆ ನಿಂತೇ । ಏಸು ಅನುಭವಿಗಳು ಸಂಸಾರ । ಸುಳ್ಳೆ ಸುಳ್ಳೆ ಮಾಡಿಹೋದರು । ಈಸು ಪದಗಳು ಮಾಡಿ ಹಾಡಿ ನೋಡಿ ಸುಳ್ಳು ಖರೇಕ ತಂದೆ ॥ 3 ॥

32 ನೇ ಪದ

ನಿಃಶಬ್ದ ಬ್ರಹ್ಮನೆಂಬುವ ಶೃತಿಯಿದು ತಿಳಿದಿತೇನ್ರಯ್ಯಾ । ತಿಳಿದರೆ ದೊರಣಿ ಹೇಳ್ರಯ್ಯಾ ॥ ನಿಃಶಬ್ದ ಶಬ್ದ ಅವಾಚ ವಾಚ । ನಿಃಕಾರಣ ಕೇಳ್ರಯ್ಯಾ ॥ ಪ ॥ ಬುದ್ಧಿ ಸುಬುದ್ಧಿ ಕುಬುದ್ಧಿ ಮೂರಿವು । ನಂಬಿಗೇನ್ರಯ್ಯಾ ॥ ಶಿವ ಶಿವ ಸಿದ್ಧಾಂತ ಶುದ್ಧವಾದಮೇಲೆ । ಹಂಬಲವ್ಯಾಕ್ರಯ್ಯಾ ॥ 1 ॥ ಜ್ಞಾನಸ್ಥ ಅಜ್ಞಾನವಾದ ಮೇಲೆ ಯೋಗವು ಯಾಕ್ರಯ್ಯಾ ॥ ಶಿವ ಶಿವಾ ಮಾನಪಮಾನಾಗುವಂಥ ಮಾನ್ಯಗಳ್ಯಾಕ್ರಯ್ಯಾ ॥ 2 ॥ ಧರ್ಮ ಅಧರ್ಮವಾಗುವದು । ಅದ್ಯಾತಕಯ್ಯಾ ॥ ಶಿವ ಶಿವಾ ಕರ್ಮ ಅಕರ್ಮವಾಗುವದು ಅದೇನ್ರಯ್ಯಾ ॥ 3 ॥ ಹುಟ್ಟುವದೆ ಭವ ಬೆಳೆಯುವದೆ ಬಂಧವು । ಸಾಯುವದೇ ಸಕಲಕೇ । ಸಾಕ್ಷಿಯಯ್ಯಾ ॥ ಶಿವ ಶಿವಾ । ಹುಟ್ಟೋದು ಬೆಳಿವದು । ಸಾಯುದೇ ಸತ್ತೆ ಮೋಕ್ಷವಯ್ಯಾ ॥ 4 ॥ ಗುರು ಮಹಾಂತೇಶನು । ಮುಡಿವಾಳಲ್ಲೆನು । ಬೆಳಗಿನ ಕನಸಯ್ಯಾ ॥ ಶಿವ ಶಿವಾ । ಜಡ ತೋರಿಕಿ ಜಡರಳಿಯರದೃಶ ಬಡಿವಾರ ಮನಸಯ್ಯಾ ॥ 5 ॥

33 ನೇ ಪದ

ನೋಡೋ ನಿರ್ಬೈಲೊಳು ಹುಸಿನಿಲವು । ತಾನಾಯಿತು ಹಲವು । ಮಾಡುವ ದ್ಯಾತಕೆ ಕುಲಛಲವು । ಎಲ್ಯಾದ ಫಲಪದವು ॥ ಪ ॥ ರೂಪ ತಾನಾಯಿತು । ಚಿದ್ರೂಪ । ಶುಕ್ಲ ಶ್ರೋಣಿತ ಕೂಪ ॥ ತಾಪಾತ್ರಯದ । ಮೂಪ ಸಂತಾಪ ಎಲ್ಯಾದ ಸುಖರೂಪ ॥ 1 ॥ ಜೀವನ ನಿರ್ಜೀವನ ಸ್ವಭಾವ । ಅದಕೆಲ್ಲಾದ ಸಾವ ॥ ದೇವಾದಿದೇವನವನ್ಯಾವ । ತಿಳಿತೇನುಭಾವ ॥ 2 ॥ ಒಡಲಾತ್ಮದೊಳಗೆ ತಾಮನಸು । ಆಯಿತು ಬಹು ದಿನಸು । ಮೃಡಮಹಾಂತೇಶ್ವರ ನೆಂದೆನಿಸು । ಕನಕರಿಸುವ ಕನಸು ॥ 3 ॥

34 ನೇ ಪದ

ಕೊಂಬು ಹೊಲಿಯಂದೊ । ಏಕಾಂತ ಬಿರುದು ನಿಮ್ಮದೊ ಶ್ರೀ ಮಹಾಂತ ॥ ಪ್ರಜಾ ಪರರದೊಳು ನಿಂತ । ಹೊಡೆದ ಪರರರ ತಿಳಿಸಿದ ಅದರಂತ ॥ ಪ ॥ ಮೊದಲವೇನಿತ್ತೊ ಅಖಂಡ । ಮೂಲ ಮಾಯಿ ಮಾಡಿದ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಂಡ ॥ ಓಂಕಾರವದರಿತು ಆಕ್ರತಂಡ । ಜಗಹುಟ್ಟಿತು ತಂಡ ತಂಡ ॥ 1 ॥ ಮಸಳಿಮಾರಿ ಮಾಯಿಯ ದಂಡ । ಬಾಣಸೊಕ್ಕಿ । ಸುರದಾವ ಗುಂಡ । ದಸಿಗಿ ಬಾಯಿಬಿಡು ವದಕಂಡ। ವಸುಧಿವಳಗ ಏನಿದು ಭಂಡ ॥ 2 ॥ ಅಂಧಕಾರ ಎದ್ದಿತು ಗಾಳಿ । ಮುಚ್ಚಿಕೊಂಡಿತೊ ಕೆಂದೂಳಿ ॥ ಆಗುತೈತ್ರಿ ಜಗದೊಳು ಹೋಳಿ । ಬಿದರ ಹಿಡಿದೆನೋ ಮಹಂತನ ಕಾಳೀ ॥ 3 ॥

35 ನೇ ಪದ

ನಿಲಕಿಸಿಕೋ ಮೇಲಾದ ಕಾಯಿ । ಕೆಳಗ್ದಲಿಬೀ ತೆರಿವದ್ಯಾತಕೆ ಬಾಯಿ ॥ ಮೇಲಿರುವದು । ಅದು ತಿಳಿಕಾಯಿ ॥ ನೀಸುಳ್ಳೆವ್ಯರ್ಥ ಮಾಡಬೇಡ ಈ ಕಾಯಿ ॥ ಪ ॥ ಒ ದೇ ಬೇರಿಗೆ ಮೂರೆಲೆಯಾಗಿ । ಅದರೊಳ್ದಿಂದಿಗಿಪ್ಪತ್ತೈದು ಶಾಖೆ ಗಳಾಗಿ । ಮುಂದೆ ಮುವ್ವತ್ತಾರು ಆಗಿ ॥ ಇದರನುಭವ ತಿಳಿದವ ಶಿವಯೋಗಿ ॥ 1 ॥ ಹಣ್ಣಿನೊಳು ರಸ ಪೂರ್ಣ ತುಂಬ್ಯಾದ । ಆ ಹಣ್ಣು ಕಾಯ್ಕೊಂಡು ಒಂದು ಗಿಳಿಯಾದ । ಕಣ್ಣಿಟ್ಟು ನೋಡು ಕಾಳಿಸುತಾದ । ಇದು ಅಣ್ಣಪ್ಪಗಳಿಗೆಲ್ಲ ಬಲ್ಲಾದ ॥ 2 ॥ ನೆಲ ಜಲ ತೇಜ ವಾಯು ಆಕಾಶ । ಅದರೊಳಗ ಕಾಣಿಸುತಾದೋ ಆದೇಶಾ । ಸಲೆ ಕಲ್ಪವೃಕ್ಷ ಶ್ರೀ ಮಹಾಂತೇಶಾ । ಇದರನುಭವ ತಿಳಿದವ ಜಗದೀಶಾ ॥ 3 ॥

36 ನೇ ಪದ

ಒಂದು ದೊಡ್ಡ ಸಭೆಯಲ್ಲಿ ಯಾವ ಸಮಯದವರೆಂದು
ಮಡಿವಾಳರನ್ನು ಕೇಳಲು ಮಡಿವಾಳರು ಹಾಡಿದ ಪದ.

ಮೂರು ಸಮಯದೊಳು । ಶಿವಸಮಯದವರೋ ನಾವು ॥ ಮೂರು ಸಮಯದೊಳಗೇ ಶಿವನ ಭಜಿಸುವರಡಿಗೆ ॥ ಪ ॥ ಮೂರು ಸಮಯದತಿಗೇ । ಬೇರೊಬ್ಬ ಪರವಸ್ತು ॥ ಬ್ಯಾರಿಲ್ಲೊ ಏಕೊಸಾಕ್ಷಿ । ತಾರಕವಾದಮೇಲೆ ॥ 1 ॥ ಮೂರು ಲಿಂಗದ ಮಂತ್ರ । ಸಾರೆಲ್ಲ ವಂದೆ ವಂದೆ । ಯೇರ್ಹಿಡಕೊಂಡ್ಹೋಗಿ ಶಿವನ ಇರುವ ಕಂಡೆನು ನಾನು ॥ 2 ॥ ಗುರುಹಿರಿಯರಿಗೇ ಭೇದ । ಅರವು ಮರವು ಒಂದೆ ॥ ಪರಕೆ ಪರವಾದ ಮಹಾಂತ ಪರಬ್ರಹ್ಮನೊಳು ಬೆರಿದ ॥ 3 ॥

37 ನೇ ಪದ

ಘರ್ಜನ ಮಾತಾಡುವದ್ಯಾಕೊ । ನಿಜ ಗುರ್ತದ ಪರ್ಜೀಗೆ ಕೈಹಾಕೋ ॥ ಅರ್ಜಿ ಸದ್ಗುರುವಿಗೆ ಕೊಡಬೇಕೊ । ಅವರ ಮರ್ಜಿ ತಿಳಿದು ಬಾಣ ಬಿಡಬೇಕೊ ॥ ಪ ॥ ಬಾಡ್ಯಾಕ ಬಿದ್ದರ ಕೆಟ್ಟೀತು । ನಮ್ಮ ಒಡಿಯರಿಗೆ ಸಿಟ್ಟು ಹುಟ್ಟೀತು । ಬಡವ ರೊಟ್ಟಿಮೇಲ ಕಾಲ ಕೊಟ್ಟೀತು । ನಡ ನದಿಯೊಳು ಕೈಯ ಬಿಟ್ಟೀತು ॥ 1 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶಿವಶರಣರ ಬ್ಯಾಕರಿ ಹೀರ್ರಿ। ಭವಭವಾ ತಿರುಗುವದು ಮರ್ತೀರಿ। ನೇಮನಿತ್ಯ ತವನಿಧಿ ತರ್ತೀರಿ।. ಈ ಲೋಕದಪರ ಮಾತು ಕೇಳಿ ಕೆಡ್ತೀರಿ ॥ 2 ॥ ದಾರ ಗೊಡವಿ ನಮಗೇನಾದರಿ। ಗುರು ತೋರಿದ್ ಹಾದಿಯೊಳಗಿರಬೇಕರಿ ॥ ಮಾರ ಹರ ಮಹಾಂತನ ವಲಿಸಬೇಕರಿ। ವೀರಶೈವ ಮಾರ್ಗವು ತೋರಬೇಕರಿ ॥ 3.॥

38 ನೇ ಪದ

ನೀ ಕಡಂರೆ ನಿನ ನೆಲಿಗಾಣುವದೊ। ನೀನೆ ಕಂಡು ನೋಡಮೆ ॥ ನೀನೆ ಕಂಡು ನೋಡಮೆ। ಬಹುಹಾವೆ ಕೃತಿ ಬ್ಯಾಡಮೆ ॥ ಪ ॥ ಹೆಣ್ಣು ಹೊನ್ನು ಮಣ್ಣು ಮೂರು। ಆಶಿಬಿಟ್ಟು ನೋಡಮೆ। ಆಶಿಬಿಟ್ಟು ನೋಡಮೆ। ನೀನಾಶಿ ಬಿಟ್ಟು ನೋಡಮೆ। ಪನ್ನಗಶೈನನ ಗುರ್ತು ಇಲ್ಲೆ ಕಾಣ್ತಾದ ನೋಡಮ್ಮೆ ॥ 1 ॥ ಅಷ್ಟಾವರಣದಾಗಿನ ಮಾತು। ಆಚಾರಕ ತರಬ್ಯಾಡಮೆ ॥ ಆಚಾರಕ ತರ ಬ್ಯಾಡಮೆ। ಬಹು ವಿಚಾರಿಸಿ ನೀನೋಡಮೆ। ಬಹು ವಿಚಾರಿಸಿ ನೀನೊಡಮೆ ॥ 2 ॥ ಗುರುವಿನ ಗುಲಾಮ ಆಗೂತನಕ। ಗೌಪ್ಯದೊಳು ಸುಳಿ ದಾಡಮೆ। ಗೌಪ್ಯದೊಳು ಸುಳಿದಾಡಮೆ। ಗುರು ಮಹಾಂತೇಶನ ಬದಿಲಾಡಮೆ। ಗುರುಮಹಾಂತೇಶನ ಬದಿಲಾಡಮೆ ॥ 3 ॥

39 ನೇ ಪದ

ನೀನು ತಿಳ್ಕೀದರ ತಿಳೀತೆ। ತಿಳಿಯದಿದ್ದರೆ। ತಿಳಿಯುವದುಳೀತೆ ॥ ಭಾವಿಸಿ ಕೊಂಡರೇನಳೀತೆ। ಭಾವಿಸದಿದ್ದರೇನುಳೀತೆ ॥ ಪ ॥ ತಿಳದವನು ತಿಳದೇ ಇಲ್ಲ। ತಿಳಿಲಾರ್ದವ। ತಿಳಿದೇನು ಬಲ್ಲ ॥ ತಿಳಿದವರು। ತಿಳಿಲಾರ್ದವರು ಯಲ್ಲ। ತಿಳಿಯೆಂಬೋದಿದರೊಳಗಿಲ್ಲ ॥ 1 ॥ ಇದ್ದದ್ದು ಇಲ್ಲದ್ದು ತಿಳಿಯೋ। ಇದು ಎಲ್ಲರಿಗಿ ನೀರಹೊಳಿಯೋ ॥ ಬಲ್ಲೆನೆಂಬುದು ಅಳಿಯೋ। ಬಲ್ಲಾದರೆ ನೀ ಭವ ಕಳಿಯೋ ॥ 2 ॥ ದೇವ ಮಹಾಂತರಾಜಾ ಸದ್ಭಾವ ಹೇಳಿದ ಪೂಜಾ ॥ ಭಾವ ಭವದ ಬೀಜಾ ಸದ್ಭಾವನೆ ಸಾಯುಜ್ಯಾ ॥ 3 ॥

40 ನೇ ಪದ

ತಿಳಿಯೋ ಬೇಗನೆ ಕಳಿಯ ಬ್ಯಾಡಿದನು। ಈ ಜನ್ಮದ್ದದನು। ತಿಳಿಯೋ ಬೇಗನೆ ಕಳಿಯಬ್ಯಾಡಿದನು ॥ ತಿಳಿಯೋ ಬೇಗನೆ ಕಳಿಯ ಬೆಳಗಿನ। ಸುಳವಿನೋಳು ಹಲವಡಗಿ ಚಿತ್ತದಿ। ಬಲಿದ ಮನಸದು ಕಲಕಗೊಡದೆ। ನಿಲಕಿಸೋ ನಿಷ್ಕಲದ ನಿಜಸುಖವು ॥ ಪ ॥ ಜೋಡ ಹುಡಕಿಕೊಳ್ಳುವದೊಳಿತೇ। ಪಾಡಾಗುತೈತೆ। ರೂಢಿಯೊಳು ತಿರುಗುವದು। ಛಿ ಕಳತೆ। ಇನ್ನೆಲ್ಲಿ ತಿಳಿತೆ ॥ ಖೋಡಿ ಮರವಿದು ಯರಗಿ ಹಲವಿಗೆ। ಬೇಡಿಕೊಳ್ಳಲು ಪದಫಲಂಗಗಳು। ಪಾಡ ಒಬ್ಬರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಕಾಣಲಿಲ್ಲವು ನೀವು ಮಾಡಿದ ಸುಕೃತಪುಣ್ಯವು ॥ 1 ॥ ನಿನ್ನ ಬಿಟ್ಟು ಅರುವ ಇನ್ನೆಲ್ಲಿ ॥ ಶೃತಿಕೇಳ ಬಲ್ಲಿ । ನಲ್ಲನೊಬ್ಬ ಮಾಡಿಕೊಳವಲ್ಲಿ । ನೀ ತಿಳಿವದೆಲ್ಲಿ । ಬಲ್ಲಶರಣರ ನುಡಿನಡಿಗಿಯನು । ಸೊಲ್ಲಿ ಸೊಲ್ಲೀನಲ್ಲಿ ಅರುಹಿಡಿಯೊದೆಚ್ಚರ । ನಲ್ಲನೊಬ್ಬನ ಎಲ್ಲಿಕಾಣೆನು । ಒಲ್ಲೆನೆಂಬುತ ಬದಿಗಿ ಸಿಲ್ಕಿದಿ ॥ 2 ॥ ಅಂಗಜಾ ಗುಣಕಾಗಿ ಸಿಲ್ಕಿದಿಯೋ । ಇನ್ನೆಲ್ಲಿ ಫಲವೊ । ಆಯಾಸಗೊಳ್ಳುವದು ಯಮಪುರವೋ । ಘೋರಿಡುವದೆಲ್ಲವೊ ॥ ಮಾಯಮರ್ದನ । ಕಾಯರಹಿತನ ಉಪಾಯದಿಂದ ಅರು ಹಿಡಿಯೋ ಯಚ ಸಾರಿ ಹೇಳುವೆ । ಕೇಳೋ ಮಹಾಂತನ ದೂರಯಿಲ್ಲ । ತಿಳಿಯೋ ಇಲ್ಲೆ ॥ 3 ॥

41 ನೇ ಪದ

ಚಿಂತಿ ಎಂಬುದು ಬಹಳ ಘನವಾಗಲಿ । ಸಂತೋಷೆಂಬದು ತುಸು ಇಲ್ಲದ್ಹೋಗಲಿ । ಅಂತುಹಿಡದವರೆಲ್ಲ ಅಳದ ಹೋಗಲಿ । ಶಿವನಂತಃಕರುಣ ನಮಗೊಂದೆ ಉಳಿಯಲಿ ॥ ಪ ॥ ಅತ್ತಿ ಮಾವ ಭಾವ ಮೈದುನ ವ್ಯರ್ಥವಾಗಲಿ । ಸುತ್ತಮುತ್ತ ಬಂಧುಬಳಗ ಅತ್ತ ಹೋಗಲಿ । ಪ್ರಿತಿವುಳ್ಳವರ್ಹತ್ತು ಮಂದಿ । ಮಿಥ್ಯವಾಗಲಿ । ಹೆತ್ತ ತಾಯಿ ತಂದೆ ಮದಲ್ಗಿ ಸತ್ತ ಹೋಗಲಿ ॥ 1 ॥ ಐದ ಮಂದಿ ಅಣ್ಣ ತಮ್ಮರ ಕಣ್ಣಹೋಗಲಿ । ಕಣ್ಣಲಿ ಕಂಡಂತ ಹೊನ್ನ ಮಣ್ಣಾಗಲಿ । ಬಣ್ಣ ಬಿಡಗಿ ವುಡಗಿ ಚ್ಯಡಗಿ ಯಣ್ಣಿ ಮುಣಗಲಿ । ಉಣ್ಣುವಂತ ಅನ್ನದಾಗ ನೊಣಮುಗ್ಗಲಿ ॥ 2 ॥ ಸಡಗರ ಸಂಪತ್ತ ವಸ್ತವಡವಿ ಅಳಿದುಹೋಗಲಿ । ಮಡದಿ ಮಕ್ಕಳೆಲ್ಲರ್ಹೋಗಿ ಅಡವಿ ಸೇರಲಿ । ದಿಡಿಗಿನಿಂದ ನಡಿವಹಾದಿ ಯಡವಿಬೀಳಲಿ । ಹುಡುಗರೆಲ್ಲಾರು ಕೂಡಿ ಕೈ ಕೈ ಹೊಡೆದು ನಗವಲಿ ॥ 3 ॥ ಮೀರಿದವರ ಮೂರು ಮಂದಿನ ಮರಗಿ ನುಂಗಲಿ । ಸೇರದವರ ಆರುಮಂದಿನ । ಹಿರದ ಕೊಲ್ಲಲಿ । ಬ್ಯಾರೆ ಇವರ ಏಳ ಮುಂದಿನ ಠಾರ ಹೊಡೆಯಲಿ । ನಮಗ್ಯಾರಾರು ಇಲ್ಲದಂಗ ಒಬ್ಬನೆ ಉಳಿಯಲಿ ॥ 4 ॥ ಬಿಟ್ಟ ಬಂದ ಊರವಂದು ಕೆಟ್ಟುಹೋಗಲಿ । ಮುಂದ ತಟ್ಟು ಊರ ಮೇಲೊಂದು ತಟ್ಟ ಮುಚ್ಚಲಿ । ನಟ್ಟನಡುವಿದ್ದ ಊರವಂದು ಸುಟ್ಟಹೋಗಲಿ । ನಮ್ಮ ದಿಟ್ಟ ಮಹಾಂತೇಶನ ಪಟ್ಟಣವಂದೆ ಉಳಿಯಲಿ ॥ 5 ॥

ಇನ್ನೂ ಮುಂದೆ ಸ್ವಯಂಭು ಪರಬ್ರಹ್ಮನ ಲೀಲೆಯೊಳಗೆ ಮೂಲಮಾಯಿಯ ಮರವಿನ ವಿಸ್ತಾರದ ಕೇಳೋ ಚಮತ್ಕಾರದ ಲೀಲ, ಅಜ್ಞಾನಕ್ಕೆ ಶೂಲ, ಮರವೆಂಬೋ ಮಾಯಿಗೆ ಶಿಕ್ಷುಪದೇಶದ ಪದಗಳು.

42 ನೇ ಪದ

ಭಲೆರೆಮಾಯಾ ಬಲಿಸಿದಿ ಕಾಯ । ಬಲಿಗುಡದೊ । ನಿಜನ್ಯಾಯ । ನರರಿಗೆ । ಬಲಿಗುಡದೋ । ನಿಜನ್ಯಾಯ ॥ ಮಲಮೂತ್ರ ಕಾಯ ಮದಹೊತ್ತ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪ್ರಾಯ। ಬಲವಂತ ಬಲಿಕಲಿರ್ರಾಯೋ ನರರಿಗೆ। ಬಲವಂತ ಬಲಿಕಲಿರಾಯೋ॥ ಪ॥ ಶಿವಪಥ ಸಂಗ । ಸಿಗುವದು ಲಿಂಗ । ಭವಹರಿವದು । ಯಮನ್ಹಂಗೋ ನರರಿಗೆ । ಭವಹರಿವದು ಯಮನ್ಹಂಗೊ ॥ ಭುವನಡಿ ಸಂಗ । ಬುದ್ಧಿಯ ಮಂಗ । ಕವುಲ್ಹೊಡಿವನು । ಯಮನ್ಹಿಂಗೋ ನರರಿಗೆ । ಕವುಲ್ಹೊಡಿವನು ಯಮನ್ಹಿಂಗೋ॥ 1॥ ಕುಲಛಲ ದೋಸ್ತಿ। ಕುಹಕ ಜಾಸ್ತಿ। ನೆಲಿ ತಿಳಿಯುದಕಿಲ್ಲೋ ಹ್ಯಾಸ್ತಿ ನರರಿಗೇ । ನೆಲಿ ತಿಳಿಯದಕಿಲ್ಲೋ ಹ್ಯಾಸ್ತಿ॥ ಯಲುತೊಗಲಾಸ್ತಿ। ಯೆಂದಿಗಿದ್ದರೆ ನಾಸ್ತಿ। ನೆಲ ಮನಿಗ್ಹೋಗುದು ಸ್ವಾಸ್ತಿ । ನರಡಿಗೇ । ನೆಲಮನಿಗ್ಹೋಗುದು ಸ್ವಾಸ್ತಿ ॥ 2 ॥ ಕಡಿಯುವತಾರ ಹುಸಿ ಬೀಳುವರೆ ಮೃಡಮಹಾಂತೇಶನ ಸಾರೊ ನರರಿಗೇ। ಮೃಡಮಹಾಂತೇಶನ ಸಾರೋ ॥ ಮುಕ್ತಿ ಕೊಡುವನು ಧೀರ ಕುಲ ಉದ್ಧಾರ ನುಡಿವನು ಶಿವಶ್ಯಾಸ್ತರ । ನರರಿಗೇ । ನುಡಿವನು ಶಿವಶಾಸ್ತರ ॥ 3 ॥

ಭಾವಾರ್ಥ

ಈ ಮಾನವರನ್ನು ನೋಡಿ ಯಮನು ಹಿಗ್ಗುವನು. ಭ್ರಮಿಯೊಳಗೆ ಬಿದ್ದವರು ಆಶಿ ಹೇಳಿ ಪಾಶಿ ಮೊಡುವರು. ಇವರು ನನ್ನ ಹತ್ತರ ಬರುವರು. ಎಂದು ಆ ಯಮನು ಡಂಗುರ ಹೊಡಿಯುವನು. ಸುಜ್ಞಾನದಿಂದ ಶಿವಾಚಾರದಿಂದ ನಡಿಯಿರಿ. ಯಮನ ಕೈಯಾಗ ಸಿಗಬೇಡಿರಿ. ಭಲೆರೆ ಮಾಯಾ, ಏನಿದು ನ್ಯಾಯ, ತಿಳಿಗೊಡದು ನಿಜ ಇವರಿಗೆ, ನರರು ಮಾಯದ ಶರೀರಕ್ಕೆ ಮೆಚ್ಚಿ, ಈ ಜಗ ಆಗ್ಯಾದ ಹುಚ್ಚಿ, ತಿಳಿಗಚ್ಚಿ ಸುಳ್ಳಲ್ಲ: ಮಲಮೂತ್ರದ ಕಾಯ ಈ ಹೊಲಸ ದೇಹ, ಅನ್ನ ಉದಕದ ಮದ ಹೊತ್ತುದ್ದೇ ದೇಹಪ್ರಾಯ, ಇದಕಧಿಪತಿ ಕಲಿರಾಯ, ಅವನೆ ಯಮರಾಯ. ಯಮನ ಕೈಯಾಗ ಸಿಕ್ಕು ಬಿಡತೀರಲ್ಲೊ ಬಾಯ, ತಿಳಿ ಉಪಾಯ, ಶಿವಪಥ ಸಂಗ ಸಿಗುವದು ಲಿಂಗ. ಭವ ಹರಿವದು, ಯಮನ ಹಂಗ, ಬಿಟ್ಹೋಡುವವನು ಯಮ ಆಗಿಂದಾಗ, ತಿಳಿ ಮಂಗ, ಈ ಭುವನದ ಸಂಗ, ಬಲು ಮಂಗ, ಬುದ್ಧಿ ಕೆಟ್ಟು ಹೋಗುವದು, ಭ್ರಮಿಯೊಳಗೆ ಬಿದ್ದು ವದ್ಯಾಡುವರು, ಇವರನ್ನು ಕಂಡು ಯಮ ಹಿಗ್ಗುವನು, ಹಿಡಿದು ಜಗ್ಗುವನು, ಯಮ ಲೋಕಕ್ಕೆ ಎಳದೊಯ್ಯುವನು, ಬಡಿವನು, ಶಿಕ್ಷೆ ಕೊಡುವನು, ಯಮ ಕೂಗಿ ಹೇಳುವನು, ನರರಿಗೆ ಈ ಮಾನವರಿಗೆ, ಕುಲಛಲಕ್ಕೆ ಮೆಚ್ಚಬೇಡಿರಿ, ಕುಹಕ ಗುಣ ಬಡಿರಿ. ನಿಮ್ಮ ನೆಲೆ ತಿಳಿರಿ, ತಿಳಿಯದಕಿಲ್ಲೊ ಹ್ಯಾಸ್ತಿ, ಸುಳ್ಳೆ ಆಗ್ತೀರೊ ನಾಸ್ತಿ, ಈ ದೇಹ ಮಣ್ಣಾಗ ಕೊಳತ್ಹೋಗುವದು. ಆಗಿನಾಸ್ತಿ, ತಿಳಿರಿ ನಿಮ್ಮ ಸ್ವಾಸ್ತಿ, ಇದೇ ಕಡಿ ಅವತಾರ, ಮಹಾಂತನ ಪಾದ ಹಿಡಿಯುವವರು, ಮುಕ್ತಿ ಪಡಿಯುವರು.

43 ನೇ ಪದ

ಎಷ್ಟೋ ನಿನ್ನಗ ಮಾಯದ ಮರವು । ಇಷ್ಟಿಲ್ಲೇಳರವು । ಎಷ್ಟೋ ನಿನ್ನಗ ಮಾಯದ ಮರವು॥ ದುಷ್ಟ ದೃಷ್ಟಾಂತ ಹೇಳುವೆ ಭ್ರಷ್ಟ। ಯಾಕಿಷ್ಟ। ಭವ ನಷ್ಟ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಂಥಾದದರುಷ್ಟ॥ ಪ॥ ವನಿತೆ ಯನ್ನವಳೆಂದು ಮೆಚ್ಚಿ। ಬಣ್ಣ ಬಿಳಿದು ಹೊಚ್ಚಿ। ವನಪು ಮೈಯಾರಕೆ ಮೆಚ್ಚಿ। ನೀನದ್ಧವಳಿಚ್ಚಿ। ಮನದ ಗುಪ್ತಕೆಯೊಳು ಮುಚ್ಚಿ। ಇಟ್ಟವಳ ಬಚ್ಚಿ। ನಿನ್ನ ವಂಚಿಸಿ ಜಾರನಮಾಡಿ। ಮಾತಾಡಿ। ಮುದ್ದಾಡಿ। ರತಿಗೂಡಿ ಹೋಯಿತೋಡಿ। ಮನಿಹಾಳಮಾಡಿ ॥ 1 ॥ ಹಲವು ಸವಿಗೆ ಮನ ಸೋತಿ। ಮಾಡುಂಡು ಹೇತಿ। ತೆಲಿಗಿಯೇರಿತು ಒಂದು ರೀತಿ। ಅದು ಸತೀಗೆ ಸೋತಿ। ಚಲುವ ಮಗನ ಬೇಡಿ ನೂತಿ। ಅದು ಆಯಿತು ಖ್ಯಾತಿ। ಬಲಿದು ದೇಹಾಯಿತು। ಧಾತಾಯಿತು। ಸ್ರಮಕೇತು ಸತ್ತೀತು। ಮೈಬಾತು। ಹೊಲ ಹೊಲಸ ನಾತು ॥ 2 ॥ ಕೃಪಣತನದಲೊಂದು ಪಾಕಿ। ಪಾಕಿ ಕೂಡ್ಹಾಕಿ। ನೀ ಪೂರ್ಣದಿಂದುದ್ರಿವರಗಳು ಹಾಕಿ। ಒರಸಿಟ್ಟೇದಿ ರೋಕಿ। ಗುಪ್ತದಿಂದಿಟ್ಟೇದಿ ಜೋಕಿ। ಬರವಲ್ಲದು ಬಾಕಿ। ಅಪರಮಿತ ಮಹಾಂತನ ಲೀಲ। ತಿಳಿ ಮೂಲ ಅಸಲ್ ಭವಜಾಲ। ನೃಪ ತಸ್ಕರ ಅಗ್ನಿಪಾಲ ॥ 3 ॥

44 ನೇ ಪದ

ಯಪ್ಪ ಎಂಥ ಮರವಿಯೋ ಅಬ್ಬಾ। ಯಪ್ಪ। ಇದು ಎಂಥ ಮಾಯಿಯೋ ಅಬ್ಬಾ। ವಪ್ಪಿಲೆ ಕರೆದು ಮಕ್ಕಳಿಗೆ ಜತ್ತನೆಂದು। ಸಪ್ಪಳಿಲ್ಲದೆ। ಸತ್ತ ಸುದ್ದಿಲ್ಲದೆ ಯತ್ತ ಹೋದರು ನೋಡಿರೆಪ್ಪ। ಯಪ್ಪ ಎಂಥಾ ಮರವಿಯೊ। ಅಬ್ಬಾ। ಯಪ್ಪ ಇದು ಎಂಥಾ ಮಾಯಿಯೋ। ಅಬ್ಬಾ ॥ ಪ ॥ ದಾವ ಕಡಿಯಿಂದ ಬಂದಾನೋ। ಇಲ್ಲೆ ಇರುತ್ತಿದ್ದ। ದಾವಕಡೆಗೆ ಹೋದನೋ। ಸಾವು ತನಗೊಂದು ಇಲ್ಲದಿದ್ದರೆ। ಸೋಗು ತಾನಿನ್ನೆಷ್ಟು ಮಾಡುವ। ಕಾಯುವ ಅಧಿಕಾರ ತನ್ನಗಿದ್ದರೆ। ತನ್ನ ಕೊಲ್ಲುವ ತಾಕತೇನೋ ಯಪ್ಪ। ಯಂಥಾ ಮರವಿಯೋ। ಅಬ್ಬಾ। ಯಪ್ಪ ಇದು ಯಂಥಾ ಮಾಯಿಯೋ। ಅಬ್ಬಾ ॥ 1 ॥ ಸಾವೇ ಶ್ರೀ ಮಾತೂ ಸತ್ತು ಚಿತ್ತಾದೊ। ಸರ್ವರಿಗೆ ಸಾಕ್ಷಿ। ಜೀವ ಶಿವರೆಂಬುವದಲ್ಲಿ ಗೊತ್ತಾದೋ। ತಾವೆ ತಮ್ಮ ಪ್ರಯತ್ನದಿಂದೆ। ತಾವೆ ಕಂಡದ್ದು ಕಾಣಲ್ಯಾಕದು। ಭಾವ ಭಾವಿಸಿಕೊಳ್ಳಲರಿಯದೆ। ಹಾಗೆ ತಿಳಿದು ನೋಡೆನೆಂಬು ವರೋ ಯಪ್ಪ। ಎಂಥಾ ಮರವಿಯೋ ಅಬ್ಬ। ಯಪ್ಪ ಇದು। ಎಂಥಾ ಮಾಯಿಯೋ ಅಬ್ಬ ॥ 2 ॥ ಶಿವಶರಣ ಪುರಾಣ ಹಚ್ಚುವರೊ। ಹೇಳಿ ಕೇಳಿಕೊಳ್ಳಲು। ಅವರಿಗೇನು। ಇವರಿಗೇನಾದುದ್ದೊ ವ್ಯವಹಾರದಿ ಸಿಂತರಿಸೀ ತಂದ। ಧನಧಾನ್ಯಮಾಡಿ ನೀಡಿ ಉಣಿಸಿಕೊಟ್ಟಾರು। ಅವರು ರಿಣಕ್ಕೆ ಹೊಣೆ। ಇವರು ರಿಣಕ್ಕೆ ಹೊಣೆ। ಗಿರೀಯ ಕೊಳ್ಳಕ್ಕೆ ನರಿ ವಳ್ಳಿ ಸತ್ತಂತೇ। ಯಪ್ಪ ಯಂಥಾ ಮರವಿಯೋ ಅಬ್ಬ। ಇದು ಎಂಥಾ ಮಾಯಿಯೋ ಅಬ್ಬ ॥ 3 ॥ ಅಯ್ಯಗಳು ನಾವು ಎಂಬುವರೋ। ಅಯ್ಯಾಚಾರದ ಮಾಹಿತಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಯವೆಂಬುವರೋ । ಬೆಣ್ಣೆದದ್ದು ಬೇಯಲದು । ಸಿಹಿ ಕಹಿ ನೋಡಕ್ಕೊಂಡು ವಡಲ ತುಂಬಿಸಿಕೊಂಬವರೋ । ಅಯ್ನಗಳಾದ ಕೂಸವೇಸು ತಾವು ಅರಿಯರು । ಜನರ ಕೈಲೆ ಕಾಲ ಬೀಳಿಸಿ ಕೊಂಬುವರೋ । ಯಪ್ಪ ಎಂಥಾ ಮರವಿಯೊ । ಅಬ್ಬ । ಯಪ್ಪ ಇದು ಯಂಥ ಮಾಯಿಯೋ ಅಬ್ಬ ॥ 4 ॥ ವಿರಕ್ತರು ನಾವು ಎನಿಸಿಕೊಂಬುವರೊ । ಭಕ್ತರ ಕದ್ದು ತ್ರಿಸೂಲ ಕೊಂಬುವರೋ । ಭಾವಿಸದೆ ಬಗಿ ಹಾದೇ । ಮಹಾದೇವಪ್ಪನ ಮನವೇ ಹಾಕ್ಷಿ । ಜೀವ ಉಪಾಧಿಕರೇನು ಬಲ್ಲರು । ಸುಕೃರ ನರಕಯೆಂಬುವದೋ ಯಪ್ಪ । ಎಂಥಾ ಮರವಿಯೋ ಅಬ್ಬ । ಯಪ್ಪ ಇದು ಎಂಥ ಮಾಯಿಯೋ ಅಬ್ಬ ॥ 5 ॥ ದೇಶಿಕ ಚರಪಟ್ಟಗಳೊ । ಮೂರು ಮುದ್ರಿಗಳೋ । ಬೇಕಾದಷ್ಟು ಕಾಸಿಸಗೊಂಡು ಕೊಟ್ಟಾರೋ । ಈಶಗೈತನ ಆದದ್ದು ಹ್ಯಾಂಗ । ವೀರಶೈವ ರೋದುದು ಹಿಂಗ । ಸೋಸಿ ನೋಡದೆ ಸುಮ್ಮನೆ ಕಾಲವ ಕಳೆದು । ಅಹಂಕಾರದಿ ಕೆಟ್ಟಾರೋ ಯಪ್ಪ । ಎಂಥಾ ಮರವಿಯೋ ಅಬ್ಬ । ಯಪ್ಪ ಇದು ಎಂಥ ಮಾಯಿಯೋ ಅಬ್ಬ ॥ 6 ॥ ಹಡೆದವರಿವರೆಂದು ಅವರ ಶುಕ್ಲ ಶೋಣಿತದಿಂದೆ ವಡಲಾಗಿ ನೀ ಬಂದು । ವಡಹುಟ್ಟಿದವರಾದರೆ ಬಡದಾಡುವ ದಾವತ್ಯಾತಕೆ । ಅಡಗಿದ ಮಾತಲ್ಲ । ಕೈಗಡೆ ಕಣ್ಣಗಂಡು । ಕದ್ದಿ ಹಾರುವೇನಂದಿಯಪ್ಪ । ಎಂಥಾ ಮರವಿಯೋ ಅಬ್ಬ । ಯಪ್ಪ ಇದು ಎಂಥಾ ಮಾಯಿಯೋ ಅಬ್ಬ ॥ 7 ॥ ಹೊಲೆಯ ಬಂದರೆ ಹೊರಗ ಎಂಬುವರೊ । ಆ ಹೊಲೆಯ ನಿಂತರೆ । ಕುಲಜನೆಂದು ಮುದ್ದು ಕೊಂಬುವರೊ । ಹೊಲಸಿಗ್ಹೊಲಸು ಕಲಿಸಿಗೊಂಬುವರೊ । ಹೊಲಸದು ಒಳ್ಳೇದೆಂಬುವರೋ । ಸಲ್ಲುವರೇ ಸದ್ಗತಿಗೆ । ಮಾತ ಪಿತರ ಮಾನ ಅರಿಯರಿವರೊ ಯಪ್ಪ । ಎಂಥಾ ಮರವಿಯೋ ಅಬ್ಬ । ಯಪ್ಪ ಇದು ಎಂಥಾ ಮಾಯಿಯೋ ॥ 8 ॥ ಕುಲಗೋತ್ರ ಖರೆ ಆದರೆ । ಸುಳಿ ಸೂತ್ರ ಬಿಟ್ಟು ಹೊಲಿಯರನ್ಯಾತಕ ಹೋದರೋ । ಇದರ ಹೊಲಬನರವಿಸಿ ಕೊಟ್ಟಾ । ಸುಲಭ ಮಹಾಂತಪುರದ । ಮಹಾಂತಯೋಗಿ । ಇದರ ಹೊಲಬ ತಿಳಿದೇನಂದರ ಹೋಗಿ ಕಡಕೋಳ ಗುಡ್ಡ ಸೇರೋ ಯಪ್ಪ । ಇದು ಎಂಥಾ ಮರವಿಯೋ ಅಬ್ಬ । ಯಪ್ಪ ಇದು ಎಂಥಾ ಮಾಯಯೋ ಅಬ್ಬ ॥ 9 ॥

ಈ ಎರಡು ಪದಗಳ ಭಾವಾರ್ಥ

ಈ ಮಾಯಾ ಸಂಸಾರವು ಬಹಳ ಚಮತ್ಕಾರವಾಗಿರುವದು. ಮಾನವರು ಹೊಲಸಿನಿಂದ ಕೂಡಿದ ದೇಹವನ್ನು ಧರಿಸಿ, ಹೊಲಸಿನಲ್ಲಿಯೇ ಬಿದ್ದು ಹೊಲಸಿಗೆ ಮೆಚ್ಚಿಕೊಂಡು, ಈ ಹೊಲಸಿನ ಸಂಸಾರಕ್ಕಾಗಿ ಕಚ್ಚಾಡಿ ಹುಚ್ಚು ಹಿಡಿದಂತಾಗುವರು. ತಿಳಿದು ನೋಡಿದರೆ ಈ ದೇಹ ಬೆಳ್ಳಿ ಬಂಗಾರದ್ದೂ ಅಲ್ಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಜ್ರದಂತೂ ಅಲ್ಲೇ ಅಲ್ಲ. ಕೊಳೆತು ಹೋಗುವ ಈ ದೇಹದ್ದ ಮರ್ಮ ಎಷ್ಟೋ ಯುಗಗಳು ಗತಿಸಿದರೂ ಯಾರಿಗೂ ತಿಳಿಯಲಿಲ್ಲ. ತಿಳಿದವರು ಉಳಿದಿಲ್ಲ. ಅವರು ಈ ಭವಕ್ಕೆ ಬಂದಿಲ್ಲ ಸೂರ್ಯ ಚಂದ್ರರಿರುವವರೆಗೂ ಅವರ ಪೂಜೆ, ನಾಮಸ್ಮರಣೆ ಮಾತ್ರ ನಡೆಯುತ್ತವೆ. ಹೋದವರ ಸುದ್ದಿ ಇದ್ದವರಿಗೆ ಸುಳಿವಿಲ್ಲ. ಇದ್ದವರ ಸುದ್ದಿ ಹೋದವರಿಗೆ ಗೊತ್ತಿಲ್ಲ. ಒಬ್ಬ ಭೆಟ್ಟಿ ಒಬ್ಬರಿಗಿಲ್ಲ. ಇದು ಮತಿಗೇಡಿ ಮಾನವರಿಗೆ ತಿಳಿಯುವದು ಕಷ್ಟ. ಅವರಿಗೆ ಜನ್ಮ ಜನ್ಮಾಂತರದಲ್ಲಿ ಹುಟ್ಟುವದು ತಪ್ಪುವದಿಲ್ಲ. ಸುಮ್ಮ ಸುಮ್ಮನೆ ನಾವು ದೊಡ್ಡವರೆಂದು ಹಂಬಲಿಸಿ ಕೆಟ್ಟು ಹೋಗುವರು.

45 ನೇ ಪದ

ಸ್ವಪನ ಸುಖದ ಸ್ವಲ್ಪು ಮಾಯಿಗಲ್ಪುವದ್ಯಾಕೊ ಮೂಢ । ಸುಪತ ಶ್ರೀ ಗುರು ಸೇವಾದಿ ನಿಪುಣನಾಗಬೇಕೋ ಪಾಡ ॥ ಪ ॥ ಹೆಣ್ಣು ಹೊನ್ನು ಮಣ್ಣು ಮೂರರೋಳ್ಹೆಣ್ಣಿನ ಹಂಬಲೆಚ್ಚೋ ॥ ಯಲೋ ಕಣ್ಣು ಕಿಸ್ತು ನೋಡೋ । ಮೇಳಿನ ಬಣ್ಣದ ಬುರಕಿ ಉಚ್ಚೊ ॥ 1 ॥ ದುಂಡ ಮೊಲಿಯ ಮುಟ್ಟೋಗಿ । ಮುತ್ತಿನ ಚಂಡೋ । ಮಾಂಸದ ಪಿಂಡೋ । ಯಲೊ ತೊಂಡಿಯ ತುಟಿಯೋ । ಬಾಯಿ ಅಮೃತದ ಗುಂಡೋ । ಜೊಲ್ಲಿನ ಕೊಂಡೋ ॥ 2 ॥ ವೋಪಾಳೊನೀಗೋ ಭೋಗದ ಪುಣ್ಯದ ರೂಪೋ ನರಕದ ಕೂಪೋ ॥ ಯಲೋ ಆ ಪರ ಮಹಾ ಮಹಂತಯೋಗ ಪಾಪೋ । ಚಿತ್ಕಲಾಪೋ ॥ 3 ॥

ಭಾವಾರ್ಥ

ತಿರುಕನು ಮುರಕ ಮಸೂದಿಯಲ್ಲಿ ಮಲಗಿಕೊಂಡು ಕನಸಿನಲ್ಲಿ ರಾಜನಾಗಿ ಸಕಲ ವೈಭವವನ್ನು ಕಂಡ ಮೋಜಿನಂತೆ, ಈ ಸಂಸಾರದ ಸುಖವಿರುವದು. ಹೊನ್ನು, ಹೆಣ್ಣು, ಮಣ್ಣು ಇವು ಮೂರು ತನ್ನವಲ್ಲ. ಯಾರವೂ ಅಲ್ಲ. ಯಾಕೆಂದರೆ ಇವು ಯಾರಲ್ಲೂ ಸ್ಥಿರವಾಗಿರುವದಿಲ್ಲ. ಇವನ್ನು ವಶಪಡಿಸಿಕೊಳ್ಳುವದು ಯಾರಿಗೂ ಸಾಧ್ಯವಿಲ್ಲ. ಈ ಮೂರನ್ನು ಶಿವನು ಸೃಷ್ಟಿಗೆ ಹೋಲಿಸಿರುವನು ಮಣ್ಣು ಅಂದರೆ ಭೂಮಿ. ಈ ಭೂಮಿಯಿಂದಲೆ ಜಗತ್ತು ಹುಟ್ಟಿರುವದು. ಭೂಮಿಯ ಮಕ್ಕಳೆ ಸರ್ವ ಜಗವೆಲ್ಲ. ಅಂದಮೇಲೆ ಸರ್ವ ಜಗತ್ತು ಸೂಳೆಯ ಮಕ್ಕಳಿಂದಾಯಿತು. ಹೆಣ್ಣು, ಹೊನ್ನು, ಮಣ್ಣು ಎಂಬ ಸೂಳೆಯ ಮಕ್ಕಳು ಯಾರಲ್ಲಿಯೂ ಸ್ಥಿರವಾಗಿರುವದಿಲ್ಲ. ಆದರೆ ಈ ಮೂರರಲ್ಲಿಯೆ ಜಗತ್ತಿನ ವೈಭವ ಅಡಕವಾಗಿದೆ. ಇವುಗಳ ನಿಜವಾದ ಅನುಭಾವವನ್ನು ತಿಳಿಯರಿ. ಇವುಗಳಿಗಾಗಿಯೇ ಬಹು ಜನರು ಪ್ರಾಣ ಹರಣಮಾಡಿಕೊಂಡಿದ್ದಾರೆ.

ಇಂದು ಜಗತ್ತು ದೊಡ್ಡ ಸ್ವಪ್ನ ಕಂಡಿರುವದು. ಮಾಂಸದ ಮೊಲೆಗೆ ಮುತ್ತಿನ ಚಂಡೆಂದು, ಜೊಲ್ಲು ಸುರಿಯುತ್ತಿರುವ ಬಾಯಿಗೆ ಅಮೃತದ ಕುಂಡವೆಂದು ಭಾವಿಸಿ, ಈ ಮಾಯೆಯು ಬಲೆಯೊಳಗೆ ಸಿಲ್ಕಿ ದಾರಿಗಾಣದೆ ಮೂರು ಲೋಕವೆಲ್ಲ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬಾಯಿ ಬಿಡುತ್ತಲಿರುವದು. ಅಜ್ಞಾನಿ ಜಗತ್ತಿಗೆ ಎಷ್ಟು ಹೇಳಿದರೂ ತಿಳಿಯಲೊಲ್ಲದು. ಈಳಿಗರ ಓಣಿಯಲ್ಲಿ ಹಾಲು ಮಾರಿದರೆ ಕೊಳ್ಳುವರಾರು ? ಹೆಂಡ ಕುಡಿದು ನಿಶೆಯಾಗಿ ಮನಸ್ಸಿಗೆ ಬಂದಂತೆ ನಡೆಯುವರು. ಮನಸ್ಸೆಂಬುದೇ ಹೊಲಸು, ಮನಸ್ಸೆ ಮಾದರಚೋದು ಮನಸ್ಸೇ ಮಾಣಿಕ್ಯ ಮನಸ್ಸೇ ಮಹಾಮಂತ್ರ. ತಿಳಿದವರಿಗೆ ಮನಸ್ಸಿನಲ್ಲಿಯೇ ಬಹಳ ದಿನಸಿರುವದು. ತ್ರಿಮಲ ಲೋಭಿಗಳಿಗೆ ಮಾತ್ರ ಇದು ಕನಸು ನೋಡರಿ. ನನಗೆ ತಿಳಿದಷ್ಟು ಬರೆದಿರುವೆನು. ನನಗೆ ಬುದ್ಧಿ ಹೇಳುವವರು ನೀವೇ ಇರುವಿರಿ. ಮುಂದಿನ ಪದ ಕೇಳಿರಿ.

46.ನೇ ಪದ

ಹಾಲ ಹರವಿ ವೈಯ್ಯುವದ್ಯಾಕೆ । ಈಳಗೇರ್‍ಯಾರ ಕೇರಿಗೆ । ಕಾಲಕಾಲಕೆ ಕುಡುದುದ್ದು । ಕುಡದರದು । ಸಾಲಗೊಯಿಕ ಅಸುರರಿಗೆ ॥ ಪ ॥ ಅಪ್ಪು ಮಾಜುಮ ಗಾಂಜಿಯು ಬಂಗಿ। ಅಪ್ಪಿಕೊಂಬುದು ತಾಯಿನತಂಗಿ ॥ ಅಪ್ಪ ಅಣ್ಣ ನಂಬುವದ್ಯಾತಕೆ । ತಪ್ಪಿತಂದರೆ । ತಿದ್ದೊ ಲಿಂಗಾಗಿ ॥ 1 ॥ ಹೆಂಡಶರಿ ಧುತ್ತುರಿ ಜುಲಾಬಿ । ಕೊಂದು ಕೊಂಬ ವದೆ ಕೋತಿ ಕುಲಾಬಿ ॥ ಕಂಡ ಶುದ್ಧಿ ಕೇಳೊದ್ಯಾಕೆ । ಲಂಡ ಭಂಡೊತ್ತಿಮಲ ಲೋಭಿ ॥ 2 ॥ ಕುಡಿಯವದಕೇ । ಕುಡುವೆಯೆಂದು । ಕುಡಿದು ಇಲ್ಲೆಂದರುತಾದೊಂದು । ಕುಡಿದು ಕುಡಿದಿಲ್ಲೆಂಬೊದ್ಯಾಕೆ । ಕೂಡಿ ಮಹಾಂತ ರಕ್ಷಿಸೋ ಸಿಂಧು ॥ 3 ॥

47 ನೇ ಪದ

ಕೆಡುಬ್ಯಾಡ್ಬೋ । ಕೊಡುಬ್ಯಾಡೋ ॥ ಈ ಪೊಡವಿಯೊಳಗೆ । ಮಾನವ ಜನ್ಮ ಅಪೂರ್ವ ॥ ಪ॥ ಅಸ್ಥಿರ ದೇಹವು ನಂಬಿ । ಆ ನಿಜ ಸುಸ್ಥಿರ ಸುಖ ಕಳಕೊಂಡಿ ಮಾನವ ॥ 1 ॥ ಒಬ್ಬರ ವಂಚಿಸಿ ತಂದು ॥ ದೇವರ ಹಬ್ಬವ ಮಾಡಿದಿ ದುಂದು ಮಾನವ ॥ 2 ॥ ಹುಸಿದೀಸಿ ತರುವದು ಸಾಲ । ಹಬ್ಬ ಬನ್ನೀ ಹಸೀದು ಮಾಡುವಿ ಬಹುಸೀಲ ಮಾನವ ॥ 3 ॥ ಪಾಸಿಲೊಬ್ಬರ ಸುಲಿಸಿ । ಮೈಯೊಳು ಪೂಸಿದಿ ಭೂತಿ ಕಲಸಿ ಮಾನವ ॥ 4 ॥ ಅಪಹಾರ ಪರರನುಗಾಲ । ಬಿಡದೆ ನೀ ಜಪಮಣಿ । ಎಣಿಸುವಿ ತ್ರಿಕಾಲ ಮಾನವ ॥ 5 ॥ ಹೆದರದೆ ಹಾದರಮಾಡಿ । ದೇವರ ಪ್ರದಿಕ್ಷಣಕೋಡ್ಯಾಡಿ ಮಾನವ ॥ 6 ॥ ಹಲವಾಗಮವ ನೀನೋದಿ ॥ ನಿನ್ನಾನೆಲೆಗಾಣದೆ ನಿನ್ನೋದಿ ಮಾನವ ॥ 7 ॥ ತಿಂದಳ್ಳಂಗ ವಣರೊಟ್ಟಿ ಸೊಡರಿನ ವಂದ ದೀವಟಗಿ ಇಟ್ಟ ಮಾನವ ॥ 8 ॥ ಆರಿಗಾಗದು ಮನ ಪೂರ । ನೀ ತಿಳಿ ಮೂರೆ ದಿನದ ಸಂಸಾರ ಮಾನವ ॥ 9 ॥ ಸ್ವಾಮಿ ದ್ರೋಹಿ ನೀನಾಗಿ । ಕಾಶಿ ರಾಮೇಶ್ವರನಿಗೆ ಹೋಗಿ ಮಾನವ ॥ 10 ॥ ಹೇಸಿಯ ಸಂಗತಿ ಗೂಡಿ । ಆ ಶಿವನ ಸಾಸಿರ ನಾಮವ ಹಾಡಿ ಮಾನವ ॥ 11 ॥ ಅಹಿಂಸೋ ಪರಮೋಧರ್ಮ ಆ ಶ್ರುತಿ ವಹಿಸದೆ ಮಾಡುವೀ ಕರ್ಮ ಮಾನವ ॥ 12 ॥ ಹೊಲ್ಲ ಗುಣಗಳೊಳಗಳಿಯೋ । ಮಹಾಂತ ವಲ್ಲಭ ನೊಲಿಸುವದು ನೀ ತಿಳಿಯೋ ಮಾನವ ॥ 13 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

48 ನೇ ಪದ

ಎಲ್ಲೋ ಎಲ್ಲೋ ಮಾನವ । ಮಾರ್ಗ ತಪ್ಪಿ ನಡೆಯಬೇಡ । ಜನ್ಮ
ಬಂದದ್ದು [illegible] ಬಿಡದು । ತಿಳಿದು ನೋಡ ಹುಸಿ ನುಡಿಯಬೇಡ
॥ [illegible] ತಿಂಬುವದು । ಈಗದು ನಿನಗೆ ಬಹುಪಾಡ ॥
[illegible] ಕೊಡುವವು । ಆಗ ಆಗುವದು ಬಹು ಕೇಡ
॥ 1 ॥ ನಿಂದು ನಿನ್ನಗೆ ಸಾಲೊಲ್ಲದೆ ಪರಧನ । ಸೆಳೆಕೊಳ್ಳಲಾಯಿತು ಬಹು
ಪಾಡ । ತಂದು ಸಾಲದಿದ್ದಷ್ಟು । ಹೋದರ ಅಹಾಗ್ಯಾಂಗ ಆಗುವದು ಆ ಕೇಡ
॥ [illegible] ಜಾಸ್ತಿ ಮಾಡಿದರೆ । ನಾಸ್ತಿ ಆಗುತಾದ ।
[illegible] । ಈ ಸ್ವಾಸ್ತಿ ಮಹಾಂತನ ಸ್ವಾಸ್ತಿ ಪಡದುಣುವದು
[illegible] ॥ 3 ॥

49 ನೇ ಪದ

ದೇವನು ಇರಲಿ ಮಾನವ । ಮುಂದ್ ಆಗುವದು ನಿನ್ನದರುಷ್ಟವ ॥
[illegible] ಜನ್ಮವ । ಬ್ರಹ್ಮ ಮಾಡಿದ್ದಾಟವ ॥ ಪ ॥ ಕೊಟ್ಟದ್ದು
ಕೊಡುವದು [illegible] ಉಣುವದು । ಹುಟ್ಟಿಸಿದವಗ್ಯಾಕೆ ನೀ ಬೈತಿ । ಸಿಟ್ಟಿಗೆ
ಬರಲಾಕೆ । ಸುಳ್ಳಂತ ಬರಿಲಾಕೆ । ಬಿಟ್ಟಿಗೆ ಬಂತೆನೋ ದೌತಿ ಲೆಕ್ಕಣಿಕೆ ॥ 1 ॥
ಹೊತ್ತು [illegible] ಹುಗ್ಗಿಗೆಲ್ಲಾ [illegible] ದ ಬೆಲ್ಲ ॥ ಅತ್ತತ್ತು ಸುಳ್ಳೆ ನಿಯಾಕ ಬಾಡ್ತಿ ॥
ಸತ್ತು ಹೋದರೇನು [illegible] ಶಾಯಿಲ್ಲದಿದ್ದರೇನು ಬಿತ್ತದಲೆ ಬೆಳಿ ನೀ ಹ್ಯಾಂಗ ಮಾಡ್ತಿ
॥ [illegible] ರೂಪ । ಕಡೆಗಿಟ್ಟರದು ಲೋಪ ॥ ಅನ ಎಂಬುವದೇನೊ
ಎಲ್ಲಿ [illegible] ಗುಡ್ಡದ ಮಹಾಂತೇಶನ ನೆನೆದರೆ ನಿನ್ನಿಂದೆ ನಿನ್ನ
ಭ[illegible] ॥ 2 ॥

ಈ ಮೂರು ಪದಗಳ ಭಾವಾರ್ಥ

ಎಲ್ಲೋ ಮಂದ ಮನುಜರೆ, ನಿಮಗೆ ಭವ ಬಂಧನ ತಪ್ಪದು, ಪುಣ್ಯ [illegible] ಸತ್ಯಗುಣ ನಿಮ್ಮಲಿಲ್ಲಲ್ಲ, ಅಸತ್ಯಗುಣವನ್ನೆ ಆಶ್ರಯ ಮಾಡಿ [illegible] ಗುಣದಮೇಲೆ ಕುಳಿತು ನಡಿಯುವಿರಿ, ಪಾಶಿಗುಣದಜಾಲ ಹಾಸುವಿರಿ [illegible] ಅಪಹಾರ ಮಾಡುವಿರಿ, ಹೇಸಿಗುಣ ಬಿಡಲೊಲ್ಲಿರಿ, ಮೈಯೊಳಿಲ್ಲ [illegible] ಹಚ್ಚುವಿರಿ, ಯಾವತ್ತು ಹುಸಿ ಆಡುವಿರಿ, ಹಲವು ಆಗಮಗಳನ್ನು [illegible] ಬಡಕರಾಗಿ ನಿಮ್ಮ ನೆಲೆಗಾಣದೆ ಹೋಗುವಿರಿ ಜೀವ ಹಿಂಸೆ ಮಾಡುವಿರಿ, ಪರಸ್ತ್ರೀಯರ ಕಂಡು ಹಿಗ್ಗುವಿರಿ, ಸಾಧುಸತ್ಪುರುಷರನ್ನು ಕಂಡು ನಗುವಿರಿ, ನಿತ್ಯ ತ್ರಿಕಾಲ ಪೂಜಾ ಮಾಡಿ ಸಾವಿರ ಜಪ ಮಾಡುವಿರಿ.

CC0. In Public Domain. Jangamwadi Math Collection, Varanasi

ಹೊಲಸುಗುಣ ಬಿಡಲೊಲ್ಲಿರಿ, ಇಂಥವರಿಗೆ ನರಕದ ಮನೆ ಸಮೀಪವಿರುವದು, ತಂದ ಸಾಲ ತಿರುಗಿ ಕೊಡಲೆರಿಯರಿ, ಮುಂದಿನ ಜನ್ಮಕೆ [illegible] ಆಗುವದು, ಇಂಥವರಿಗೆ ಜನನ ಮರಣಬಾಧೆ ತಪ್ಪದು, ಬಿತ್ತಿದ್ದೆ ಬೆಳೆಯಬೇಕಾಗುವದು, ಮಾಡಿದ್ದೆ ಉಣ್ಣಬೇಕಾಗುವದು, ಇದು ಸತ್ಯ ಸತ್ಯ [illegible] ಸೃಷ್ಟಿಯೆ ಹೀಗಿರುವದು, ನೆನಪು ಇರಲಿ ಮಾನವರೆ, ನೀತಿತಪ್ಪಿ [illegible] ತಾಮಾಡಿದ್ದು ತನಗೆಂದಿಗೂ ಬಿಡದು, ಮಹನೀಯರ ವಾಕ್ಯ ದನಭಾವ ಬರೆಯಲು ಹೇಳಲು ನನ್ನಿಂದ ಸಾಧ್ಯವಿಲ್ಲ. ಸೂಕ್ಷ್ಮವಾಗಿ ಬರೆದಿರುವೆನು. ಮಹನೀಯರೆಲ್ಲರೂ ಅನುಭವ ಮಾಡಿಕೊಂಡು ತಿಳಿದುಕೊಳ್ಳಿರಿ.

50 ನೇ ಪದ

ಶಿವನಾಮವ ಸ್ಮರಿಸೋ । ಈ ಭವ ಮಾಲೆಯ ಪರಿಹರಿಸೋ ॥ ಜೀವ ಶಿವನ ಬೆರಿಸೋ । ಆತ್ಮನ ಭೇದವು ಪರಿಹರಿಸೊ ॥ ಪ ॥ [illegible] ಸಂತಿ ಆತ್ಮನ ನೋಡದೆ ನೀ ಕುಂತಿ । ಕೋಡಿ ಮರಗಿ ಭ್ರಾಂತಿ । [illegible] ಕುಣಿಸ್ಯಾಳೋ ಈ ಕಾಂತಿ ॥ ಬೇಡೋ ಪರರ ಚಿಂತಿ । [illegible] ಕೇಳಿದರೇನಂತೀ ॥ 1 ॥ ಕುಲಛಲಕ್ಕೋರ್ರಾಡಿ । ತಾಪತ್ರಯ [illegible] ಮುಖಮಾಡಿ । ಹಲಬರ ಹಳಿದಾಡಿ । ಪುಣ್ಯದ ಫಲಹೋ[illegible] ಕಲಕಿನೊಳಗೆ ಕೂಡಿ । ನೀ ನಡದೆಲ್ಲ ನೆಲಮನಿಗೆಲೆ ಕೋಡಿ ॥ 2 ॥ [illegible] ಹತ್ತತ್ತು । ರಾತ್ರಿಗೇ ಹೋದಾವು ಐವತ್ತು । ಪ್ರಾಯಕ್ಕೆ ಇಪ್ಪತ್ತು [illegible] ಘಾಯಿಗೆ ಮೂವತ್ತು । ವಾಯುಗಿಲ್ಲ ಹೊತ್ತು । ನೀತಿಳಿ ವೇಳ್ಯ [illegible] ಗೊತ್ತು ಅರ್ಥ ಪ್ರಾಣಾಭಿಮಾನ । ಅವರವರರ್ತು ನೀಡೊ ಬಾನ । ಕರ್ತೃ ಶ್ರೀಗುರುಧ್ಯಾನ । ಅಮೃತ ತುರ್ತು ಮಾಡೋ ಪಾನ ॥ [illegible] ಮಹಾಜ್ಞಾನ ಅದರೊಳಗಿರ್ತದೊಂದೆ ಖೂನ ॥ 4 ॥ ಆಶಿಯ [illegible] ನಿರಾಶೆಯ ನಿಜನೋಡ । ದ್ವೇಷವು ತೊಡಬೇಡ । [illegible] ನುಡಿಬೇಡ । ಪಾಸಿಲಿ ಬಡಿಬೇಡ । ಶ್ರೀಗುರು [illegible] ಮರಿಬೇಡ ॥ 5 ॥

ಭಾವಾರ್ಥ: ಈ ಜನ್ಮದಲ್ಲಿ ಶಿವಧ್ಯಾನ ಮಾಡಿ ಪಾಪ ಕಳೆದುಕೊಂಡು ಪುಣ್ಯ ಸಂಪಾದನೆ ಮಾಡಿಕೊಳ್ಳಲರಿಯಿರಿ, ಆತ್ಮವಿಚಾರ ಮಾಡಿಕೊಂಡು ನಿಮ್ಮ ಗುರ್ತನ್ನು ಹಿಡಿಯಲೊಲ್ಲಿರಿ, ನೀವಿರುವದು ಮೂರೇ ದಿನ, ಕುಲಛಲ ಎಲ್ಲ ಸುಳ್ಳೇ ಸುಳ್ಳು, ಈ ಲೋಕದ ಅಭಿಮಾನವನ್ನು ಬಿಡಿರಿ, ನಿತ್ಯ ಶಿವಧ್ಯಾನ ಮಾಡಿರಿ, ಆಯುಷ್ಯ ನಿಮ್ಮದಲ್ಲ, ವಾಯುವಿಗೆ ಗೊತ್ತಿಲ್ಲ, ನಾಳೆ ಇರುತ್ತೇನೆಂಬುದು [illegible]

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೀವ್ಯಾರೆಂಬ ನೀತಿ ನೀವು ತಿಳಿಲಿಲ್ಲ, ಆಶೆ ಹಿಡಿದು ಬಹಳ ಮಂದಿ ಆದರು ಘಾಸಿ, ಆಶಿಯೇ ದೇಶ ನುಂಗಿತು, ಆಶಿಯೇ ಹೇಶಿ, ಆಶಾ ಬಿಟ್ಟವನೆ ಈಶ, ನಿರಾಶಿಯೇ ದೇವರು, ಎಷ್ಟು ಓದಿದರೇನು, ಶಾಸ್ತ್ರ ಹೇಳಿದರೇನು, ಪಂಡಿತನಾಗಿ ತಿರುಗಿದರೇನು, ಮೊದಲು ವಾಸನಾ ಅಳಿದಿರಬೇಕು, ಈ ಹೇಶಿ ನರಜನ್ಮ ಹುಟ್ಟಿ ವ್ಯರ್ಥ ಕೆಟ್ಟು ಹೋಗುವದು, ತಿಳಿಯುದಿದ್ದರೆ ಮುಂದಿನ ಪದವನ್ನು ಕೇಳಿರಿ.

51ನೇ ಪದ

ತಿಳಿವಲ್ಲಿ ಯಾಕಿನ್ನು ಬೋರಿಗೆ । ಜ್ಞಾನ ಬಳಿಕಿಲ್ಲ ನಿನಗಿನ್ನು ಬೋರಿಗೆ ॥ ಇಳೆಯೊಳು ಸಂಸಾರ ಬೋರಿಗೆ । ಬಿದ್ದು ಬಳಲು ಕೋಣನಂತೆ ಬೋರಿಗೆ ॥ ಪಲ್ಲ ॥ ಹುಟ್ಟೇನು ಹುಟ್ಟಿದಿಕು ಬೋರಿಗೆ । ಹುಟ್ಟಿ ಕೆಟ್ಟು ಹೋಗಲ್ಲಿದ್ದಿರು ಬೋರಿಗೆ । ಕೊಟ್ಟೇನು ಕೊಂಡೆನು ಬೋರಿಗೆ । ಕೊಟ್ಟು ಇಟ್ಟು ಹಂಗಿಸುವಂಥ ಬೋರಿಗೆ ॥ 1 ॥ ಹೇಸಿಕೆ ತನುಯಿದು ಬೋರಿಗೆ । ಬಿದ್ದು ಘಾಸಿಯಾಗಲಿಬೇಡ ಬೋರಿಗೆ । ಆಶಿ ತೀರಿದಮೇಲೆ ಬೋರಿಗೆ । ದೇಹ ಕಾಸುಬಾಳದು ಹುಚ್ಚು ಬೋರಿಗೆ ॥ 2 ॥ ಓದೇನು ಹಾಡೇನು ಬೋರಿಗೆ । ಓದಿಹಾದಿ ಕಾಣದಂಥ ಬೋರಿಗೆ ॥ ಸಾಧುರನ ಜರಿದಂತೆ ಬೋರೆಗೆ । ವೇದ ನಾದವು ಕೇಳದಂಥ ಬೋರಿಗೆ ॥ 3 ॥ ನಿದ್ರಿ ಮಾಡಲಿಬೇಡೊ ಬೋರಿಗೆ । ಸುಮ್ಮನೆದ್ದು ಕುಂದರೋ ಕಂಡ್ಯಾ ಬೋರಿಗೆ ॥ ಸುದ್ದಿ ಹೇಳ್ತಿನಿ ಕೇಳೊ ಬೋರಿಗೆ । ಯಮ ಗುದ್ದಿ ವೈದನು ಜೀವ ಬೋರಿಗೆ ॥ 4 ॥ ಕಾಮಧೇನು ಬದಿಲಿದ್ದು ಬೋರಿಗೆ । ಬಿಟ್ಟು ಕುರಿಹಾಲು ಕುಡಿವಂಥ ಬೋರಿಗೆ ॥ ನರದೇಹದಲಿ ಬಂದು ಬೋರಿಗೆ । ಬಿದನೂರ ಪುರ ಮಹಾಂತನರಿಯದೆ ಬೋರಿಗೆ ॥ 5 ॥

52 ನೇ ಪದ

ಜಲ್ದಿ ನೋಡಿಕೊಳ್ಳೊ ನೀ ಬಂದುದ್ದೆಲ್ಲಿ । ಮುಂದ ಹೋಗುದೆಲ್ಲಿ । ಇಂದ ನಿನ್ನ ಸತಿ ಸುತ ಭ್ರಾಂತಿ ಇಲ್ಲಿ । ಮುಕ್ತಿ ಆಗುದೆಲ್ಲಿ ॥ ಪ ॥ ಹಿಂದಕ ಏಸೋ ಜನ್ಮ ತಿರುಗಿ ಬಂದಿ । ಅಲ್ಲಿಂದೇನು ತಂದಿ ॥ ನರಜನ್ಮದಲ್ಲಿ ಸುಖ ಬಿಟ್ಟೇನಂದಿ ದಾನ ಕೊಟ್ಟೇನಂದಿ ॥ 1 ॥ ಕೊಟ್ಟ ರೊಟ್ಟಿಯಿ ತೆಂಬೋ ಗುಣ ಹುಟ್ಟೇತಲ್ಲಿ । ಅದು ನಿನ್ನಲ್ಲಿ ॥ ಸಂತೋಷ ಇಲ್ಲ ನಿನ್ನ ಮನದಲ್ಲಿ । ದಾನ ಕೊಡವಲ್ಲಿ ॥ 2 ॥ ಉಂಡುದ್ದು ಉಟ್ಟುದ್ದು ನಿನ್ನ ಹೊಟ್ಟಿಗಾಯಿತೋ । ಇಟ್ಟುದ್ದಿಲ್ಲೆ ಉಳಿಯಿತೋ । ದಾನ ಕೊಟ್ಟದ್ದು ದಾರಿ ಬುತ್ತಿಗಾಯಿತೋ । ಮುಂದಿನ ಹೋತ್ತಿಗಾಯಿತೋ ॥ 3 ॥ ಅಣ್ಣ ತಮ್ಮ ಬೀಗರುಬಿದ್ದರು ದಾರು ಇಲ್ಲ । ನಿನಗ್ಯಾರು ಇಲ್ಲ । ತಾಯಿ ತಂದಿ ಜೋಕಿ ಮಾಡಿ ಬಿಟ್ಟರಲ್ಲ । ಮುಂದಿಂದು ಗೊತ್ತೆ ಇಲ್ಲ ॥ 4 ॥ ಪಾಪ ಮಾಡಬೇಡ ಲತ್ತಿ ತಿಂದಿ ಅಲ್ಲಿ । ಯಮರಾಯನಲ್ಲಿ ॥ ಪುಣ್ಯ ಮಾಡಿದರ ದೋರಕುವದಲ್ಲಿ । ಸದಾಶಿವನಲ್ಲಿ ॥ 5 ॥ ವ್ಯರ್ಥ ಏದು ಸಂಸಾರ ತಿಳಿ ಅಲ್ಲಿ । ನಿನ್ನ ದೃಢದಲ್ಲಿ ॥ ಗುರು ಮಹಾಂತೇಶನ ಪಾದದಲ್ಲಿ ॥ ನಂಬಿಗಿಡು ಅಲ್ಲಿ ॥ 6 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

53ನೇ ಪದ

ಯಾತರ ಕಟಿಬಿಟ । ಮುಂದಿನ ಹೋಗ್ಗಲು ಲಟಿಬಿಟಿ ॥ ಸಂಸಾರ ಮಾಡ್ತಿರಿ ಒಳ್ಳೇ ಜಟಿಪಿಟಿ । ಭಕ್ತಿಮಾಡುವದು ಅದು ತಟಿಮಿಟಿ ॥ ಪ ॥ ಬರುತಲೇನು ತಂದಿ ಇರುತಿರುತೆಲ್ಲಾನಂದೆ ಅಂದಿ । ದ್ರವ್ಯ ಬಹಳ ಗಳಿಸಿನಂದಿ । ನೆನಸರಿಯಾರಿಲ್ಲಂದಿ ॥ ಗಳಿಗ್ಯಾಗ ದ್ರವ್ಯ ತೊಳದ್ಹೋಯಿತಂದಿ । ಬಳಲಿ ಬೆಳಲಿ ಳಿಮೊರಿಗೆ ಬಂದಿ ॥ 1 ॥ ದೊಡ್ಡಮನಿಯಕಟ್ಟಿ । ಮನಿಯಾಗೆ ಮಡದಿನ ತಂದಿಟ್ಟಿ । ಮಡದಿಗೆ ಮೋಹದ ಮಗಹುಟ್ಟಿ ॥ ಅವನ ಮೇಲೆ ಭ್ರಮಿಯಿಟ್ಟಿ ಅಲ್ಲದ ಮಾತಿಗೆ ನೀಮನಿಸಿಟ್ಟಿ ಎಲ್ಲಿ ಬಿಟ್ಟು ಯಮಬಾದಿಗೆ ಹೊಂಟಿ ॥ 2॥ ಪೂರ್ವಜನ್ಮದಲ್ಲಿ । ಮಾಡಿದ ಮರ್ಮ ಏನು ಬಲ್ಲಿ ನಿರ್ಮಳಾಗೊ ಇಲ್ಲಿ । ಹಿಂದನ ಕರ್ಮ ತೊಳೆವಲ್ಲಿ । ಧರ್ಮದ ಗುಣವು ನಿನ್ನಲ್ಲಿದ್ದರೆ। ನಿರ್ಮಳಾಗೊ ಶ್ರೀ ಮಹಾಂತನ ಬಲ್ಲಿ ॥ 3 ॥

ಮೂರು ಪದಗಳ ಭಾವಾರ್ಥ

ನಿಮ್ಮನು ನೀವು ಮರಿತು ಕೋಣನಂತೆ ಬಳಲಿ ಸುಮ್ಮನೆ ತಿರುಗಬೇಡಿರಿ. ಈ ಸಂಸಾರ ಸುಳ್ಳು ಇದನ್ನು ನಂಬಬೇಡಿರಿ, ಎಷ್ಟು ಓದಿದರೇನು ಎಷ್ಟು ಹಾಡಿದರೇನು. ಹೇಸಿ ಗುಣಗಳನ್ನು ಬಿಡಿರಿ . ದೇಹಬಿಟ್ಟು ಹೋದಮೇಲೆ ಕಾಸಿಗೂ ಬಾಳುವದಿಲ್ಲ ಸುಳ್ಳೇ ಭ್ರಮಿಯಕಟಿಪಿಟಿ ಒಂದು ದಿವಸ ಹೇಳದೆ ಕೇಳದೆ ಹೋಗ್ತೀರಿ ಲಟಿಪಿಟಿ. ನಿಮಗೆ ಬುದ್ದಿಯಿಲ್ಲ. ಮಡಿವಾಳಯೋಗಿಗಳು ಎಷ್ಟೋ ಪ್ರಕಾರ ಬೈದು ವಾಕ್ಯಗಳನ್ನು ಹೇಳಿರುವರು. ನಿಮಗೆ ತಿಳಿಯಲೊಲ್ಲದು. ನೀವು ಎಲ್ಲಿಂದ ಬಂದಿರುವಿರಿ; ಎಲ್ಲಿಗೆ ಹೋಗುವಿರಿ. ಇದನ್ನು ನೀವು ತಿಳಿದಿಕೊಳ್ಳಿರಿ. ಈ ನರಜನ್ಮದಲ್ಲಿ ಸುಖ ಬೇಡ್ತರಿ . ಶಿವನ ಧ್ಯಾನ ಮಾಡೆಂದರೆ ಒಲ್ಲೆನ್ನುವರಿ , ಧಾನ ಧರ್ಮ ಪರೋಪಕಾರ ಮಾಡುವದಿಲ್ಲ, ಮಹನೀಯರಿಗೆ ನಿಂದುಸುವದು ಬಿಡುವದಿಲ್ಲ. ಆಟ ನಾಟಕ ನೋಡಿತ್ತೀರಿ , ಕಿಲಿಕಿಲಿ ನಗುತ್ತೀರಿ , ಮನಸಿಗೆ ಬಂದಂತೆ ದುಡ್ಡು ಕೊಡುತ್ತೀರಿ ಇದಕ್ಕೇನಾದರೂ ಪುಣ್ಯ ಬರುವದೇ ನೀವೇ ಹೇಳಿರಿ , ಜಂಗಮರು ಭಿಕ್ಷೆ ಬೇಡಿದರೆ ಮುಖ ಖಿನ್ನ ಮಾಡ್ತಿರಿ. ಮಹನೀಯರನ್ನು ಅಲಕ್ಷ್ಯ ಮಾಡುವಿರಿ, ಸಣ್ಣ ಮನುಷ್ಯರಿಗೆ ಮರ್ಯಾದೆ ಮಾಡಿವಿರಿ, ತೋಗಲಿಗೆ ಮೆಚ್ಚಿಕೊಂಡು ತಗಲು ಮಾತನಾಡಿವಿರಿ ಒಂದುದಿವಸ ಹೇಳದೆಕೇಳದೆ ಹೋಗುವಿರಿ, ಸುಮ್ಮನೆ ಮರೆತು ತಿರುಗಬೇಡಿರಿ, ಅರಿತು ನೋಡಿ ನಡೆಯಿರಿ, ಯಮ ತೀವ್ರ ಬರುವನು , ಅವನ ಕೈಯಲ್ಲಿ ಸಿಗಬೇಡಿರಿ , ಭಕ್ತಿ ಮಾಡಿರಿ , ಒಳ್ಳೇ ಭಾವದಿಂದ ನಡೆಯಿರಿ, ನಂಬಿಗೆಯಿಂದ ನಡೆಯಿರಿ, ಸುಖ ಪಡಿರಿ.

54 ನೇ ಪದ

ಮಾಯಿ ಜ್ವಾಲಿ ಅಳದವನ ಮಾತ । ಕೆಳೋದ್ವಾಜಿಮಿ ॥ ಅನ್ಯಾಯ ನಡಸಿದವನಿಗೆ ಮಚ್ಚಿಲ್ಹೊಡಿಯದ್ವಾಜಿಮಿ । ಇಚ್ಚಾ ಮಾತನಾಡಿದ ಲುಚ್ಚಾವಾಜಿಮಿ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅವ ಸಾಚಿ ಮಾತು ಹೇಳಿದರ ಶಿವಮೆಚ್ಚುವ್ಹದ್ವಾಜಿಮಿ ॥ ಪಲ್ಲ ॥ ಹಮ್ಮ ದಮ್ಮ ಅಳದಮೇಲ ಬ್ರಹ್ಮ ವಾಜಿಮಿ । ಇಂಥ ದಮ್ಮಿಲ್ದ ತಿರುಗು ಮನುಷ್ಯರಮ್ಮ ವಾಜ್ಞಿಮಿ ॥ ದಮ್ಮ ಕಾಣಸ್ತಾನ । ಕಣ್ಣಿಗಿ ಹುಮ್ಮ ವಾಜಿಮಿ ॥ ಅವ ಎಮ್ಮಿ ಹೊಟ್ಟಿ ಲಿ ಕೋಣನಾಗಿ ಹುಟ್ಟೋದ್ವಾಜ್ಞಿಮಿ ॥ 1 ॥ ತಿಳಿದ ಮೇಲೆ ಅಳದ ಮೇಲ । ಉಳಿದುದ್ವಾಜ್ಞಿಮಿ ॥ ಮತ್ತ ಕಾಮ ಕ್ರೋಧ ಅಳದಮೇಲ । ಕೈಲಾಸ ವಾಜಿಮಿ । ಲ್ಹಾವ ಲುಚ್ಚ ಮಾತನಾಡುವ । ಲೇವಡ್ವಾಜಿಮ್ಮಿ । ಅವಳು ಗಂಡಗ ಮಿಂಡಗ ಕೂಡೇ ಉಣಸಿದ್ದು ಇದು ವಂದು ವಾಜಿಮಿ ॥ 2 ॥ ಭಾವದಲ್ಲಿ ಭಕ್ತಿ ಇರುವದು । ಇದು ವಂದು ವಾಜಿಮಿ । ಮತ್ತೆ ಗುರುವಿನಲ್ಲಿ । ಭಕ್ತಿ ಇರುವದು । ಇದು ವಂದು ವಾಜಿಮಿ । ಪೊಡವಿಯೊಳಗ ಚಿಣಮಗೇರಿ ವಾಜಿಮಿ । ಗುರುಮಹಾಂತೇಶ್ವರಗ । ಮುಕ್ತಿ ಬೇಡ್ಡೋದ್ವಾಜಿಮಿ ॥ 2 ॥

ಭಾವಾರ್ಥ :

ಮರವು ಎಂಬುದನ್ನು ಹರಿದು ಅರುವನ್ನು ತಿಳಿದು ಅರುವಿನಿಂದ ನಡೆಯಿರಿ. ಅರಿತವನೇ ಜ್ಞಾನಿ, ತಿಳಿಯಲಾರದ್ದವನೇ ಅಜ್ಞಾನಿ, ಅಜ್ಞಾನಿಯಂದರೆ ಮದವೇರಿದ ಕೋಣ. ಅಹಂಕಾರದಿಂದ ನಡೆಯಬಾರದು. ಕಿಂಕರತ್ವದಿಂದ ನಡೆಯಬೇಕು. ನ್ಯಾಯ ಶೀಲನಾಗಿರಬೇಕು. ಅನ್ಯಾಯದಿಂದ ದೂರಿರಬೇಕು. ತಿಳಿದು ಅಳಿದು ಉಳಿದವನೇ ಜಾಣ. ಅವನೇ ಕೋಣಿಗೆ ಹಾಕುವನು ಮೂಗದಾಣ. ಪ್ರಪಂಚವನ್ನು ಪಾರಮಾರ್ಥವರಿತು ಮಾಡುವವನೇ ಜಾಣ. ಅದು ಹೇಗೆಂದರೆ ಮಾಡಿ ಉಣ್ಣಬೇಕು, ಬೇಡಿ ಉಣ್ಣಬೇಕು. ಈ ಎರಡನ್ನು ಬಿಟ್ಟು ಅನ್ಯಾಯದಿಂದ ಅಪಾಯ ಮಾಡಿ ಉಣಬಾರದು. ತಮ್ಮನ್ನು ತಾವು ತಿಳಿದುಕೊಳ್ಳಲಾರದವರೇ ಹುಮ್ಮ, ರುಮ್ಮ ತಿಳಿದು ನಡೆದರೆ ಘುಮ್ಮ, ಭಕ್ತಿಯಿಂದ ನಡೆದು ಆಗಿರಿ ದಮ್ಮ, ಅನ್ಯಾಯ ಬಹಳ ಹೈರಾಣ. ಅನ್ಯಾಯದಿಂದ ನಡೇದವನೇ ಕೋಣ. ತಿಳಿದವರೆಲ್ಲರೂ ಜಾಣ.

55 ನೇ ಪದ

ನಾನಿತ್ತಲೆಳೆದರೆ । ತಾನತ್ತಲೆಳಿವದು । ಇನ್ನೇನಿನ್ನೇನೊ ॥ ಅಜ್ಞಾನೆಂಬುವ ಕೋಣ । ಸಾಧ್ಯವಾಗದು । ಇನ್ನೇನಿನ್ನೇನೋ ॥ ಪ ॥ ಹಸಿಹುಲ್ಲ ಕಂಡಲ್ಲಿ ಬಸಲೋಳು ಮೈಯಿವದು । ಇನ್ನೇನಿನ್ನೇನೋ ॥ ಮುಂದೆ ಸಸಲ ವಡದಿ ತೆಂದು । ಕುಶಲವು ತಿಳಿಯದು ಕೋಣ । ಇನ್ನೇನ್ನೀನ್ನೋ ॥ 1 ॥ ಮೂಪ್ಪೂರಿ ಕೂಡಿಸಿ ಮುಗದಾಣಿ ಹಾಕಿದ್ದೆ । ಇನ್ನೇನಿನ್ನೇನೋ । ಜಪ್ಪಿಸಿ ಹಿಡಿದರೆ । ತಪ್ಪಿಸಿ ಹೋದಿತು । ಆ ಕೋಣ । ಇನ್ನೇನಿನ್ನೇನೋ ॥ 2 ॥ ಮೂರಾರ ಕೋಣಿನೊಳು ಮೀರಿತೋ ಆ ಕೋಣ । ಇನ್ನೇನಿನ್ನೇನೋ ॥ ನಮ್ಮ ಧೀರ ಮಹಾಂತೇಶಗೆ ಮಾರಿ ಬಿಟ್ಟೆನು ಕೋಣ । ಇನ್ನೇನಿನ್ನೇನೋ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಭಾವಾರ್ಥ

ಕೋಣವನ್ನು ನೀರಿನಲ್ಲಿ ಬಿಡಬಾರದು. ನಾಲಿಗಿ ಹರಿಬಿಡಬಾರದು. ಇಲ್ಲಿ ಅಜ್ಞಾನವೆಂಬುದೇ ಕೋಣ, ಬಿಸಿಲೆಂಬುದೇ ಯವ್ವನ, ಅಂದರೆ ಕಾಮನ ತಾಪ. ಹಸಿ ಹುಲ್ಲು ಎಂದರೆ ಹೆಣ್ಣು, ಹೊನ್ನು, ಮಣ್ಣು ಇವೆಲ್ಲ ಭವರೋಗದ ಹುಣ್ಣುಗಳು ಮುಪ್ಪೂರಿ ಕೂಡಿಸಿ, ಅಂದರೆ ತ್ರಿಕರಣ ಎಂಬ ಮುಗುದಾಣ ಹಾಕಿ ಜಪ್ಪಿಸಿ ಹಿಡಿದೇ ನಂದರೆ ತಪ್ಪಿಸಿಕೊಂಡು ಹೋಹಿತು, ಮೂರು ಗುಣ ಆರು ವರ್ಗಗಳಿಂದ ಕೂಡಿದ ಈ ಒಂಭತು ಕೋಣೆಯೊಳಗೆ ಮೀರಿ ಕುಂತಿರುವದು. ನಮ್ಮ ಧೀರ ಮಹಾಂತೇಶಗೆ ಆ ಕೋಣವನ್ನು ಮಾರಿದೆ. ಇನ್ನೇನು ಭಯವಿಲ್ಲ, ಪತ್ತೆಯಿಲ್ಲದೆ ಹೋಯಿತು. ಆದ್ದರಿಂದ ನೀವು ಕೂಡ ಅಜ್ಞಾನವೆಂಬ ಕೋಣವನ್ನು ಆ ಮಹಾಂತೇಶಗೆ ಮಾರಿರಿ, ಜಾಣರಾಗಿರಿ, ಭವವೆಂಬುದು ಬಹಳ ಹೈರಾಣಿ.

56 ನೇ ಪದ

ಶಿವ ಶಿವ ಶಿವ ಶಿವ ಅನುವಲ್ಲಿ । ಗುರುವಿನ ಪಾದ ಹಿಡಿವಲ್ಲಿ ॥ ಹೇಳಿದಮಾತ ನೀ ಕೇಳವಲ್ಲಿ । ನಿನ್ನ ಹೀನ ಗುಣದ ಬುದ್ದಿ ಬಿಡುವಲ್ಲಿ ॥ ಪ ॥ ಹಸ್ತ ಬಂದ ಜಂಗಮ ಯೋಗಿ । ಕುಸ್ತಿ ಕಾಳಗ ಮಾಡಿದೊ ಕಾಗಿ । ಮುಂದಿನ ಮನಿಗ್ಹೋಗಂದಿ ಸಾಗಿ । ನಿನಗ ಪುಣ್ಯ ಹ್ಯಾಂಗ ದೊರದಿತು ಗೂಗೀ ॥ 1 ॥ ಪೂರ್ವಪುಣ್ಯದಿಗಳಿಸಿದಿ ರೊಕ್ಕ । ನೀ ಬರದಿಟ್ಟದಿ ಬೆಳತನ ಲೆಕ್ಕ ॥ ಕೊಳ್ಳಿತಗೊಂಡು ಕಳ್ಳ ಮನಿ ಹೊಕ್ಕ ನೀನೆಳ್ಯಾಡುದು ಕಂಡು ಶಿವ ನಕ್ಕ ॥ 2 ॥ ಬರುವಾಗ ಏನು ತಂದಿಲ್ಲ ನೀ ಹೋಗಾಗ ಏನು ಒಯ್ಯೋಣಿಲ್ಲ ॥ ಕರ್ತಗುರು ಮಹಾಂತೇಶನೇ ಬಲ್ಲ । ಅವನ ಹೊರ್ತು ಮತ್ಯಾರ್ಯಾರಿಲ್ಲ ॥ 3 ॥

57 ನೇ ಪದ

ದೈವದವರು ನೀವು ದಯಮಾಡಿ ಕೇಳರಿ । ಪಾರಮಾರ್ಥ ॥ ನೀವು ನಿಮ್ಮಂತೆ ನಡೆ ನುಡಿ ಹೇಳಿರಿ ಜನ್ಮಸಾರ್ಥ ॥ ಪ ॥ ಕೊಂದವರಿಗೆ ಕೊಲಿ ಎಂದಿಗಿ ತಪ್ಪದು ನೀತಿ ಕೇಳಿರಿ । ಸಂದೇಹವಿಲ್ಲದೇ । ನಿಂದಕನಾಗದೇ । ಮಾತು ಹೇಳಿರಿ ॥ 1 ॥ ಮಾಡಿದವರಿಗದು । ಮಾಡಿದಷ್ಟಾಗುವದು । ನೀತಿ ಕೇಳಿರಿ ॥ ಮಾಡಿ ಮಾಡಲ್ಲದೇ ನೀಡಿ ನೀಡಲ್ಲದೇ ಮಾತು ಹೇಳಿರಿ ॥ 2 ॥ ಯತೋಭಾವ ತತಸಿದ್ಧಿಃ । ಶೃತಿ ಶಾಸ್ತ್ರಸಾರುವದು । ನೀತಿ ಕೇಳಿರಿ ॥ ಕ್ಷಿತಿಯೊಳಧಿಕ । ಮಹಾಂತ ಯತಿವರ ಹಿತವಾದ ನೀತಿ ಹೇಳಿರೀ ॥ 3 ॥

58 ನೇ ಪದ

ಕೆಡಬೇಡೆಂದರೇ । ಕೆಟ್ಟೆನೆಂದವರಿಗೇ । ಹೇಳುವದಿನ್ನೇನಿಲ್ಲ । ಒಡೆಯ ಶ್ರೀ ಮಹಾಂತನ । ಚನ ಸಾರಿದೇ । ನನ್ನಿಂದಾದೋಷ್ವೆಲ್ಲ ॥ ಪ ॥ ಹಿಡಿದವ ಹಿಡಿಸೀದ । ಹಿಡಿಸಿಕೊಂಡಾನೆಂಬೊ । ನಡವಳಿ ನುಡಿ ಹೀಂಗಿತ್ತು । ನಡಿನುಡಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅರಿಯದೇ । ಕಡಿ ಹೊಡಿಯಂದರೆ । ಭಿಡುಹುವದೆ ಹೆಡತಲಿಮಿತ್ತು ॥ ಕಾಲ ಮುಂದನಿಂದು । ಕರ್ಮವರಚಿಸಲು । ಕಾಲಕರ್ಮ ಸಂದೀಸಿತು ॥ ಈ ಲೋಕದ ವಡನಾಡಿ ದೋಷವು ಸಾಲದೆ । ಸಾಧೂ ನಿಂದಿಸಿತು ॥ 2 ॥ ತನ್ನ ಮಂತ್ರವದು ತನಗೇ ತಿರುಗುವದು । ತನ್ನ ಪುಣ್ಯಪ್ಪಾಪ ತನಗೇ । ಹೊನ್ನು ಜಕಾತಿಗೇ । ಒಟ್ಟಿಲ್ಲ ಸುಟ್ಟರೇ । ಪೊನ್ನೊಂದೊಳಿವದೇ ತನಗೇ ॥ 3 ॥ ನೀತಿ ತಪ್ಪಿ ಮಾತಾಡುವ ಮಾನವರು । ಕೋತಿಯಾಗುವದೇನರಿಯದೇ । ಭೀತಿಗೆಟ್ಟು ಹಿಂದು ಮುಂದೊಂದಾದವ । ಗೊತ್ತು । ಹಂದಿ ಜನ್ಮರದೇ ॥ 4 ॥ ಹೇತು ಬಂದು ತಿಂದಾತುಮೇ ಬಲಿದು । ಮಾತು ಬಹಳ ಖರ್ಚ್ಯಾಕೇ । ಕಾತುರದವರಿಗೇ ॥ ಯಾತರ ಭಯವದು । ಜಾರ್ತೊಮ್ಮೇಳುವದು ಠೀಕೆ ॥ 5 ॥ ಬೇಕೆಂಬುದುಭವ । ಸಾಕೇಬುಂದು ವೈರಾಗ್ಯ । ಸಾಕುಬೇಕು ಎರಡಿಲ್ಲ ॥ ಕಾಕು ಗುಣದ ಜನರ್ಯಾಕಾಡ ರೊಲ್ಲರು । ಲೋಕೇಶ್ವರ ಬಲ್ಲೆಲ್ಲ ॥ 6 ॥ ಕೆಡಸೀದವರನ । ಕೆಡಸಬಾರದೆಂದು । ಕೆಡಗುಡದ್ದಿಡದಭಿಮಾನ । ಕೆಡಸಿನ ದ್ರೋಹ ತನ್ನ ಕೆಡಸದೇ । ಬಿಡುವದೆ । ಕೇಡು ಹಿಡಿ ನಿವೃತ್ತಿಕೋನ ॥ 7 ॥ ಅದು ಒಲ್ಲೆಂದರೆ । ಅದು ಒಳಿತಾಯಿತು । ಅದು ನರೀ ನಾಯಿಗೆ ಗಂಟು ॥ ಅದ್ದು ತಾನಾದವಗದರನುಮಾನವ । ಅದು ಇದು ನನಗೇನುಂಟು ॥ 8 ॥ ಹಿಡಿ ಹಿಡಿವೇನೆ ದೈವ । ಹಿಡಿವೇ ಹಿಡಿದದು ಬಿಡು ಬಿಡುವೇನೇ ದೈವ ॥ ಬಿಡವೆ ಬಿಡಿಸಿ ಬಿಡಿಸೀದದು ಗಣಿತ । ಮಹಾಂತನ ಕಡತದೊಳಗೆ ಬರದೀಡಿವೆ ॥ 9 ॥

59 ನೇ ಪದ

ತುಡಗಿ ನಿನಗ್ದಿಂತ ಜನ್ಮ । ಬಂದು ನಡಂತರ್ಲೇ ಹೋಯಿತು ತಿಳಿಲಿಲ್ಲೋ ಕಲ್ಮ ॥ ಪ ॥ ನೀತಿ ಆಚಾರವ ಬಿಟ್ಟಿ ಸತೀ ದುರ್ನೀತಿ ಮಾತಿಗೇ । ಕಿವಿಯ ಕೊಟ್ಟಿ । ಪಾತಕವಾಯಿತು ಮಟ್ಟಿ । ನಿನ್ನ ಕೋತಿತಿಮ್ಮನ ಮಾಡಿದರಿಯದೆಕೆಟ್ಟಿ ॥ 1 ॥ ಮನಿವೆಚ್ಚ ಖರ್ಚು ವೆಚ್ಚಕೆ ನೀನು । ಹಾಕಿ ತನು ಮನ ಸೆಳೆದು ಕೊಂಬು ವನು ಮತ್ತೊಬ್ಬನು । ಘನ ದುಃಖಕ್ಕೆ ಗುರಿನೀನು । ನಿನ್ನ ಧನವ ವಂಚಿಸಿ ಬಚ್ಚಿಡು ವಳು ತಾನು ॥ 2 ॥ ಗುರು ಹಿರಿಯರ ಮಾತು ಮೀರಿ । ದೊಡ್ಡ ನರಕಕೇ ಬೀಳು ವ ದಾಯಿತಲ್ಲೋ ಜಾರೀ । ನೀನು ಅರಿಯಲಿಲ್ಲೋ ನಿಜದಾರೀ ॥ ನಮ್ಮ ದೊರಿ ಯ ಮಹಾಂತೇಶನ । ಮರದಾದ್ಯೋ ವಿಕಾರೀ ॥ 3 ॥

60 ನೇ ಪದ

ನೀತಿಗೇಡಿ ಅಂಗದ ಸಂಗವು । ಹುಳತ ಸವತೀ ಹಣ್ಣ ॥ ನೀತಿಯುಳ್ಳವಳ ಸ್ನೇಹ ಸಮರಸ । ಸುಲದ ಬಾಳಿ ಹಣ್ಣ ॥ ಪ ॥ ಜೇನಿ ಗೊತ್ತವನ ಬಾಯಿಗೆ ಬಾರದು । ಗೋಠ ಹುಣಸಿ ಹಣ್ಣ ॥ ದಾನಿ ಗೊತ್ತವನ ಬಾಯಿಗೆ ಬಂದಿತು । ಮಧುರ ಮಾವಿನ ಹಣ್ಣ ॥ 1 ॥ ಯುಕ್ತಿ ಇಲ್ಲದವಳೋ । ನಿನ್ನ ಯನ್ನ ಮಾರಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಚ್ಚಿಸಿದಳೋ ಸುಣ್ಣ । ಯುಕ್ತಿಯುಳ್ಳವಳು । ನಿನ್ನ ಯನ್ನ ಮಾರಿಗೆ ಹಚ್ಚಿಸಿದಳೊ ಬಣ್ಣ ॥ 2 ॥ ಮಾನಗೇಡಿಯ ಸಂಗದಿಂದೇ ತಾನಾದ ಮಸೀಮಣ್ಣ ॥ ಮಾನವುಳ್ಳವಳ ಸಂಗದಿಂದೇ ತಾನಾದ ಮಹಾಂತ ಮುಕ್ಕಣ್ಣ ॥ 3 ॥

ಭಾವಾರ್ಥ

ಶಿವಧ್ಯಾನ ಮಾಡುವಲ್ಲಿ, ಹೀನಗುಣ ಬಿಡುವಲ್ಲಿ, ಜಂಗಮನ ಸೇರವಲ್ಲಿ, ಮುಂದಿನ ಮನೆಗೆ ಹೋಗಂತೀದಿ ಗೂಗಿ, ಕುಸ್ತಿ ಮಸ್ತಿ ಮಾಡಬೇಡ ಕಾಗಿ, ಹಿಂದಿನ ಪುಣ್ಯದ ರೊಕ್ಕ, ಬೆಳತನ ಮಾಡ್ತಿದ್ದೊ ಲೆಕ್ಕ, ಶಿವನೋಡಿ ನಕ್ಕ, ಕಳ್ಳ ಮನಿ ಹೊಕ್ಕ, ಆಮೇಲೆ ಮಾಡ್ತಿದಿ ದುಃಖ, ಹಿಡಕೋ ಅವನ ಬಕ್ಕ. ನೀ ಬರಾಗ ತಂದಿಲ್ಲ, ಅದು ನಿನ್ನದಲ್ಲ, ಮಹಾಂತನೆ ಬಲ್ಲ. ಹಸಿದು ಬಂದವರಿಗೆ ತುತ್ತು ಪ್ರಸಾದ ಕೊಡುವದಿಲ್ಲ, ಭಕ್ತಿಯೆಂಬುದು ಮೊದಲೇ ಇಲ್ಲ, ತನ್ನಂತೆ ತಿಳಿದು ನಡೆಯುವದಿಲ್ಲ. ಕ್ಷೊಂದವರಿಗೆ ಅದರ ಪ್ರಾಯಶ್ಚಿತ್ತ ತಪ್ಪುವದಿಲ್ಲ. ನಿನ್ನ ಸತಿಯ ಮನಸ್ಸು ಇನ್ನೊಬ್ಬರ ಮೇಲೆ, ಹೆಣ್ಣಿನ ನೆಲೆ ಯಾರಿಗೂ ತಿಳಿದಿಲ್ಲ. ಖರೆ ಹೇಳುವದಿಲ್ಲ, ನೀನು ಪಾಪಕ್ಕೆ ಗುರಿಯಾಗುವಿಯಲ್ಲ, ನಿನ್ನ ಮೇಲೆ ನಂಬಿಗೆಯಿಲ್ಲ, ಹಾಳುಮಾಡ್ತಾಳ ನಿಂದೆಲ್ಲ, ಗುರು - ಹಿರಿಯರ ಮೇಲೆ ನಿನಗೆ ನಂಬಿಗೆಯಿಲ್ಲ, ನರಕಕ್ಕೆ ನೀ ಹೋಗುತೀದಲ್ಲ, ಮಾಡಿ ಮಾಡಿದಂತೆ, ನೀಡಿ ನೀಡಿದಂತೆ ನಿರ್ವಾಸನ ಆಗೋ ತಮ್ಮ, ಮಾಡಬೇಡ ಹಮ್ಮ ನೀ ಆಗೊಸುಮ್ಮ, ಕೆಡಬೇಡಂದರೆ ಕೆಡುತೀನಂದವರಿಗೆ ಹೇಳುವದೇನು, ಬೀಳಬೇಡ ಬಾಯಿ ಎಂದರೆ ಬೀಳ್ತೇನಿ ಅನ್ನುವವರಿಗೆ ಹೇಳುವದೇನು, ಒಡೆಯ ಮಹಾಂತನ ವಚನ ಸಾರಿ ಹೇಳುವೆನು, ನೀತಿ ತಪ್ಪಿ ನಡೆಯಬಾರದು. ಮಾತು ತಪ್ಪಿ ಮಾತಾಡಬಾರದು. ತಾ ಮಾಡಿದ್ದು ತನ್ನಪ್ಪಗ ಬಿಡದು, ಸತಿ ಹೇಳಿದಂತೆ ಕೇಳುವರು. ಆಕೆ ಕೋತಿಯಂತೆ ಕುಣಿಸುವಳು. ಇವರು ಆಚಾರ ಹೀನರು, ವಿಚಾರ ಇಲ್ಲದವರು, ಮಾನಗೇಡಿಯ ಸಂಗ, ಮಾನ ಭಂಗ, ಮಾನವುಳ್ಳವರ ಸಂಗ, ತಾನಾದ ಮಹಾಂತಲಿಂಗ.

ಶಹಾಪೂರ ಸಮೀಪದಲ್ಲಿರುವ ದಿಗ್ಗಿ ಸೈದಾಪೂರದಲ್ಲಿ ಮಡಿವಾಳಯೋಗಿಗಳ ಮಠವಿರುವುದು ಕೆಲವು ಪದಗಳನ್ನು ಸೈದಾಪುರವೆಂಬ ಅಂಕಿತದಿಂದ ಹಾಡಿರುವರು.

61 ನೇ ಪದ (ಮಂಗಳಾರುತಿ)

ನಮೋ ಮಂಗಳ ಮಹಿಮ । ಕೃಪಾಕರ । ಸೋಮಶೇಖರ । ನಮೋ ಮಂಗಲ ॥ ಪ ॥ ಹಾರ ಹೀರ ತುಷಾರ ಪಟೀರ । ಗೌರೀಶವರ । ಗಂಗಾಧರ । ಶ್ರೀ ಉಮಾ ವರ ॥ 1 ॥ ನಾರದ ಮುನಿಸುರ । ವಾರ ಮನೋಹರ ॥ ಶೂರಿಜನ ವ್ರತ ಬಂಧುರ । ಬಹು ಸುಂದರ ॥ 2 ॥ ಉರಗಭೂಷಿತಸಿರ । ವರದ ಶೋಭಿತಕರ । ಮೆರವ ಮಂದಿರ ಸೈದಾಪುರ । ಮಹಾಂತೇಶ್ವರ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

62 ನೇ ಪದ

ಒಮ್ಮೆ ಮಡಿವಾಳ ಯೋಗಿಗಳು ಕೈನೂರ ಕ್ರಿಷ್ಟಪ್ಪನಿಗೆ ಮತ್ತು ಕಡಲೋಡ ಸಿದ್ದಪ್ಪನಿಗೆ 'ನಾ' ಎಂಬುವ ಪದಮಾಡಿಕೊಂಡು ಬರ್‍ರಿ ಎಂದು ಹೇಳಲಾಗಿ, ಕೈನೂರ ಕ್ರಿಷ್ಟಪ್ಪ "ನಾ ಕಡಕೋಳದ ಗುಲಾಮ" ಎಂದು ಪದಮಾಡಿದನಂತೆ, ಕಡಲೋಡ ಸಿದ್ದಪ್ಪನು "ನಾಯೀನ ಬಲ್ಲೆನಪ್ಪ ನಿಮ್ಮ ಕೂಸು" ಎಂದು ಪದ ಮಾಡಲಾಗಿ, ಆಗ ಮಡಿವಾಳ ಯೋಗಿಗಳು : ವಿದ್ಯಾವಂತನಾದ ಕ್ರಿಷ್ಟಪ್ಪ ಪದ ಮಾಡುವದು ಆಶ್ಚರ್ಯವಲ್ಲ, ಆದರೆ ವಿದ್ಯೆಯಿಲ್ಲದ ಕಡಲೋಡ ಸಿದ್ದಪ್ಪ ಪದ ಮಾಡಿದ್ದು ನಮಗೆ ಬಹಳ ಆನಂದವಾಗಿದೆಯೆಂದು ತಾವು ಹಾಡಿದ ಈ ಕೆಳಗಿನ ಕರ್ಪೂರದಾರುತಿ ಪದದಲ್ಲಿ ಸಿದ್ದಪ್ಪನ ಹೆಸರನ್ನು ಹಾಡಿರುವರು.

ಜ್ಞಾನಪೂರ್ಣ ಜಗನ್ನ ಜ್ಯೋತಿ । ನಿರ್ಮಳವಾದ ಮನವೇ ಕರ್ಪೂರ ದಾರುತಿ ॥ ಅನುದಿನದಲಿ ಗುರು ಅನುಗೂಡಿ ಭಕ್ತೀಲೆ । ಜನನ ಮರಣ ರಹಿತ ಜಂಗಮಗೆ ಬೆಳಗುವೆ ॥ ಪ ॥ ನಾನಾ ಜನ್ಮದಕತ್ತಲಿ ಕಳದುಳಿದ್ದು ಬೇಗ । ಮಾನವ ಜನ್ಮದ ಬೆಳಕೀಲಿ । ಹೀನವಾಸನ ಗುಣ ಹಿಂದುಳಿದು ಗುರುವಿನ । ಜ್ಞಾನವೇ ಗತಿಯಂದು । ಮನವೊಪ್ಪಿ ಬೆಳಗುವೆ ॥ 1 ॥ ನಾನೀನೆಂಬುದು ಬಿಡಿರಿ । ನರಕದ ಭ್ರಾಂತಿ ಅಳಿದು । ಜ್ಞಾನಿಗಳೊಡನುಡಿರಿ । ಸ್ವಾನುಭಾವದ ಸುಖ ತಾನೆ ಕೈಸಾರುವದು । ಅನುಭಾವ ಮಂಟಪಕೆ । ಮನಮುಟ್ಟಿ ಬೆಳಗುವೆ ॥ 2 ॥ ಅಷ್ಟಾವರಣ ಸುಲಭ । ಮಾನವ ಜನ್ಮ ಹುಟ್ಟಿರಬರುವದು ದುರ್ಲಭ । ಇಟ್ಟಾನೊ ಗುರುಹಸ್ತ । ಹುಟ್ಟಿದ ಮಗ ಸಿದ್ದ । ಹೆಸರಿಟ್ಟು ಬೆಳಗುವೆ । ಮಹಾಂತ ಮಹಾರಾಜಗೆ ॥ 3 ॥

63 ನೇ ಪದ

ಮಹಾಜ್ಞಾನ ಶಕ್ತಿ ಉದಯವಾಗಿ ರಾಕ್ಷಸರನ್ನು ಕುಟ್ಟಿದಂತೆ ದುಷ್ಟ ಗುಣಗಳನ್ನು ಮರ್ಧನ ಮಾಡುವಂತಹ ಶಿಕ್ಷೋಪದೇಶದ ಪದಗಳು.

ದೇವಿನ ನೆನಿಯಿರಿ । ಭಾವ ಶುದ್ಧದಲಿ । ಕೇವಲ ಮೂರುತಿ ಶಂಕರಿಯೋ ॥ ಆವ ಕಾಲದಲಿ ಹರನೊಳು ಬೆರೆದ । ಪಾವನ ಚರಿತ್ರೆ ಪಾರ್ವತಿಯೋ ॥ ಪ ॥ ಅಷ್ಟ ದೈತ್ಯರನು ಕುಟ್ಟಿ ಬಿಟ್ಟಿಹಳೊ । ಅಷ್ಟಮೂರ್ತಿ ಗಳಿಗಾಶ್ರಯಳೊ ॥ ನಿಷ್ಠಿವಂತರಿಗೆ ನಿಜವ ತೋರುವಳೊ । ಶ್ರೇಷ್ಠ ಜನಕೆ ಪರಿಪಾಲಿಪಳೋ ॥ 1 ॥ ಶುಂಭ ನಿಶ್ಶುಂಭರ ಮರ್ದನ ಮಾಡಿದ । ಶಂಭು ಶಂಕರನ ರಾಣಿಯೊಳೋ ॥ ನಂಬಿದ ಭಕ್ತರಿಗಿಂಬುಗೊಡುವಳೋ । ಬಿಂಬಾಧರ ಭ್ರಮರಾಂಬೆಯಳೊ ॥ 2 ॥ ಗಡಿಯ ಶರ್ಪನಾಡ । ಒಡೆಯ ಚಿಣಮಗೇರಿ । ಮೃಡ ಮಹಾಂತೇಶನ ಮಡದಿಯಳೋ ॥ ಯಡರ ಕಳದು ಜಡರ ಹರಿದು ಕೊಡುವಳೋ । ತಡಮಾಡದಲೆ ಮೋಕ್ಷವನೋ ॥ 3 ॥

64 ನೇ ಪದ

ಗುರುಕರುಣವಿಲ್ಲದವನ ಸ್ನೇಹ ಸಾವುತನಕ ಬೇಡಾ । ಸಾಧು ಸತ್ಪುರುಷರ ಸೇವಾವು ಮಾಡಿ ಇರುವದು । ಬಹುಪಾಡ ॥ ಪ ॥ ಮಾತಿನೊಳಗ ಮಾತಿಲ್ಲದವನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ನೇಹ । ಜಾತಿ ಜನ್ಮಕ ಬೇಡ । ಹೀನ ಮನುಷ್ಯನ ಸ್ನೇಹವು ಮಾಡಿ ನೀನು ಕೆಡಲಿಬೇಡ ॥ 1 ॥ ಅಕ್ಕ ತಂಗಿಯರೆಂದು । ಬಾಯಿಲಿ ಕರೆದು । ಹೊಕ್ಕ ಬೆಳಸಲಿ ಬೇಡ । ನಿತ್ಯ ಕಾಲದಲ್ಲಿ । ಅಶನವ ಉಂಡು । ಹೊತ್ತಗಳಿಯಲಿಬೇಡ ॥ 2 ॥ ಹಿರದಿಗೆ ಕಿರಿದು । ಕಿರದಿಗೆ ಹಿರಿದು । ಸರಿಯ ಮಾಡಲಿಬೇಡ ಗುರು ಮಹಾಂತೇಶನ ಪಾದವು ಪಿಡಿದು । ಇರುವದು ಭಹುಪ್ಪಾಡ ॥ 3 ॥

65 ನೇ ಪದ

ಎಂಥಾ ಕಂಡಬಟ್ಟೆ ಸೂಳೆಮಕ್ಕಳಿವರೊ । ಸಾಧು ಸಂತರ ಕಂಡರೆ, ನಿಂದೆನಾಡ್ತಿಹರೋ ॥ ಅಂಥ ಇಂಥ ಮಾತಿಗೆ ಹಾಯ ಹಾಯ ಎಂಬುವರೋ । ಇವರ ಅಂತು ತಿಳಿಯದೆ ಸುಳ್ಳೆ ಸತ್ತು ಹೋಗುವರೋ ॥ ಪ ॥ ಪುಣ್ಯದಿಚ್ಛೆಗಾಗಿ ಯಾತ್ರಿ ಕೇತ್ರಿ ಮಾಡುವರೋ । ನದಿಯೋಳು ಕಣ್ಣು ಮೂಗು ಬಾಯಿ ಮುಕಳಿ ತೊಳೆದುಕೊಂಬುವರ್ಲೋ । ಅನ್ಯಾಯದ ಮಾತು ಒಂದು ಅರಿಯವಲ್ಲರೋ । ಇಂಥ ಟೊಣ್ಣೆ ಸೂಳೆಮಕ್ಕಳಿಗಿನ್ನ ಯಾರು ಹೇಳುವರೋ ॥ 1 ॥ ಕಲ್ಲು ಮಣ್ಣು ದೇವರೆಂದು ಪೂಜೆ ಮಾಡುವರೋ । ಬಹಳ ಬಲ್ಲಿದರನ್ನು ಕಂಡು ದೂರ ದೂರ ಹಾಯಿವರೋ । ಇಲ್ಲದವರನಾಡಿಕೊಂಬುದು ಏನು ಬಡಿವಾರೋ । ಅವರು ಒಳ್ಳೆ ಪದವಿ ಕೊಡ್ತಾರೆಂಬುದೇನು ಕಾತುರೋ ॥ 2 ॥ ದೊಡ್ಡ ಕಾಮಧೇನು ಸ್ನೇಹ ಮಾಡುವಲ್ಲರೋ । ಕಾಲ ಗೊಡ್ಡ ಹಾಕಳ ಹಿಂಡಿ ಕೈಯ ಮುರಿದುಕೊಂಬುವರೊ ॥ ಗುಡ್ಡದ ಮಹಾಂತನ ಗುರ್ತ ಅರಿಯವಲ್ಲರೋ । ಇಂಥ ದಡ್ಡ ಸೂಳೆಮಕ್ಕಳಿಗಿನ್ನು ಯಾರ ಹೇಳುವರೋ ॥ 3 ॥

66 ನೇ ಪದ

ಬಾಯಿಲೊಂದು ಆಡ್ತೀರಿ । ಮನಸಿನೊಳಗೊಂದು ಮಾಡ್ತೀರಿ । ಬರದಿಟ್ಟದ್ದೋದಿಕೊಂಡು ಬದಿಗೆಟ್ಟು ಹೋಗ್ತೀರಿ ॥ ಪ ॥ ಶೀಲವಂತರಂತೀರಿ । ಸುಳ್ಳೆ ಶೀಲ ಮಾಡ್ತೀರಿ । ಸಂತಿಲಿಂಗ ಕೊಂಡು ಕೊಂಡು ಸತ್ಯನಾಸಾಗಿ ಹೋಗ್ತೀರಿ ॥ 1 ॥ ಮುಸಲಮಾನರಂತೀರಿ । ತುರ್ತ ಸುಂತಿ ಮಾಡ್ತೀರಿ । ಉಸರ್ ಬಿಟ್ಟು । ಪಾತೆ ಕೊಟ್ಟು । ಬಿಸಿಮಿಲ್ಲಂತೀರಿ ॥ 2 ॥ ಬ್ರಾಹ್ಮಣರಂತ ಹೇಳ್ತೀರಿ । ನೀರಾಗ ಮುಣಮುಣಿಗೇಳ್ತೀರಿ । ಪಾಪದಿಂದ ಸುಟಗೊಂಡು ದೀಪ ಬಡ್ಕೊಂಡ್ಹೋಗ್ತೀರಿ ॥ 3 ॥ ಸಾಧುರಂತ ಹೇಳ್ತೀರಿ । ಸೋಹಂ ಭಜನಿ ಮಾಡ್ತೀರಿ । ಅಡ್ಡ ದುಡ್ಡಿಗಿ ಆಶಿಮಾಡಿ ದಡ್ಡರಾಗಿ ಹೋಗ್ತೀರಿ ॥ 4 ॥ ಪಟ್ಟ ಚರಮೂರ್ತಿ ಅಂತೀರಿ । ಪಾರಮಾರ್ಥ ನೆನಿತೀರಿ । ಪರನಾರಿ ಸ್ನೇಹ ಮಾಡಿ । ಗುಡ್ಡದ ಮಹಾಂತಗ ಹಾಕ್ತಿರಿ ॥ 5 ॥

67 ನೇ ಪದ

ಮಾನ್ಗೇಡಿ ಸೂಳೆಮಕ್ಕಳಾವಲ್ಲಿದ್ದಾರೋ । ಮಾತಾಡಗೀತಾಡ್ಸೀರಿ । ಹತಿಲಿದ್ದಾರೋ । ಮಾತಾಡ್ಸಿದರ ಮೈಮೇಲೆ ಬರತಿಹರೋ । ಆವರು ಯಾರ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗುಮಾನ ಇಲ್ಲದವರೋ ॥ಪ॥ ಹುಟ್ಟಿದ ಲ್ಹೊರಪ್ಪಳಗೆ ಇರಗೊಡರೋ । ಯನ್ನ ರಟ್ಟಿ ಕಿತ್ತಿ ಕುಟ್ಟಿ ಹೊರಿಯಾಕ್ಹಾಕುವರೋ ॥ ಕೊಟ್ಟಿ ಸೂಳೆಮಕ್ಕಳಿವರು ಮೂವರೋ ॥ ಯನ್ನ ಹೊಟ್ಟಿಯ ಮೇಲ ಕಾಲ್ಕೊಡುವರೊ ॥ 1 ॥ ಆರು ಮೂರು ಮಂದಿ ಗೆಳೆಯರೋ । ಅವರು ನಕ್ಕು ನಕ್ಕು ಚಿಕಲಿಮಾಡುವರೋ ॥ ಆಶಿ ಹೇಳಿ ಪಾಸಿ ಮಾಡುವರ್ಲೋ । ಯಮನ ಪಾಶಕ ಹೋಗಿ ಬೀಳುವರೋ ॥ 2 ॥ ಇಂಥವರ ಸಂಗತಿ ಬಿಡಬೇಕೋ । ತನ್ನ ಅಂತರಂಗದನು ಭಾವ ತಿಳಿಯಬೇಕೊ ॥ ಕಂತುಹರನ ಧ್ಯಾನಮಾಡಬೇಕೋ । ಗುರು ಮಹಾಂತೇಶ್ವರನ ದಯವಿರಬೇಕೊ ॥ 3 ॥

68 ನೇ ಪದ

ಮಂಡಲದೊಳಗೆ ಈ ಮಂದಿ ಮಾಡದು ಕಂಡು । ಅದಕ್ಕೆ ಬಂದವಪ್ಪ । ಇಂಥ ದಿನ । ಅದಕೆ ಬಂದವಪ್ಪ ಇಂಥ ದಿನ ॥ ಮಂಡ ಮೂಳರು ಕೂಡಿ । ಕುಂಡಿ ಚಿವಟ್ಕರು ಕೂಡಿ । ಕುಂಡಿನೋಡಿ ಮಣಿಹಾಕುವರಣ್ಣ ॥ ಪ ॥ ಸಣ್ಣ ಬಣ್ಣನುಟ್ಟು ಬಣ್ಣಿಸಿ ಬಂದರೆ । ಮನ್ನಿಸಿ ಕರೆಯವರಣ್ಣ । ಅವರು ಮನ್ನಿಸಿ ಕರೆಯುವರಣ್ಣ ॥ ಚಣ್ಣದವರು ಬಂದರೆ । ಕಣ್ಣೆತ್ತಿ ನೋಡ್ತಾರೆ ಟೊಣ್ಣೆ ಸೂಳೆಮಕ್ಕಳಿವರಣ್ಣ ॥ 1 ॥ ದಮ್ಮನವರು ಬಂದರೆ । ಕಮ್ಮಗ ತುಪ್ಪಕಾಶಿ । ನಿಮ್ಮದಂತ ನೀಡುವರಣ್ಣ ॥ ಅವರು ನಿಮ್ಮದಂತ ನೀಡುವರಣ್ಣ । ತೆಳ್ಳನವರು ಬಂದರೆ ಸುಳ್ಳೆ ಹೊಳ್ಳಿ ನೋಡ್ತಾರ । ಚುಮ್ಮ ಸೂಳೆಮಕ್ಕಳಿವರಣ್ಣ ॥ 2 ॥ ಗಡ್ಡ ಜಡಿಯ ಬಿಟ್ಟು ವಡ್ಡೀಲೆ ಬಂದರೆ । ಅಡ್ಡನಿಟ್ಟು ಬೀಳುವರಣ್ಣ ॥ ನಮ್ಮ ಗುಡ್ಡದ ಮಹಾಂತನ । ಗುರುತವು ಅರಿಯ್ಯರು । ದಡ್ಡ ಸೂಳೆ ಮಕ್ಕಳಿವರಣ್ಣ ॥ 3 ॥

69 ನೇ ಪದ

ಏನೇನು ಹಗರಾಣ ಮಾಡುವರೀ ಜನರು ಇದಕಾರಂಜುವರು ॥ ಮಾನ ಅಪಮಾನ ಕೂನ ಅರಿಯದವರು । ಮಾನಗೇಡಿ ಮಾನವರು ॥ ಪ ॥ ಹೆಂಡಗುಡು ಕರಿಗೆ ಹಿತವನು ಮಾಡುವರು । ಬಂಡಗೇಡಿ ಮಾನವರು ॥ ಕಂಡರೆ ಸೇರರು ಕಾಣದೆ ಬೊಗಳುವರು । ಕುಂಡಿ ಹಡಿಸುವ ಜನರು ॥ 1 ॥ ಕಾಮಕ್ರೋಧ ಲೋಭ ಮೋಹದಲ್ಲಿರುವರು । ಮದದೊಳು ಮೆರೆಯುವರು ಕಾಮಿತ ಕಂಡರೇ ಕೂನ ಹಿಡಿಯದವರು । ಅಪಘಾತಕ ಜನರು ॥ 2 ॥ ಆಡಿದವರಿಗೆ । ಅಡಿದ್ದಿರಹುವದು । ನಮದೇನು ಕೆಡಹುವದು ॥ ನೀಡಿದ ಅಮೃತ ನಿಜಭಕ್ತನ ಕರಿದು । ಮಾಡಿದ ಮಹಾಗುರು । ಮಹಾಂತನ ಬಿರುದು । ತಾ ಪಡದದ್ದು ಬರಹುವದು ॥ 3 ॥

70 ನೇ ಪದ

ಹೇಲು ತಿನ್ನುವ । ಹೆಂಡಿ ತಿಂಬುವ । ಸುಧೆಗೆ । ಹೊರಗೆಂಬೊ ನ್ಯಾಯವೇ । ಹೇ ದೈವವೇ । ಹೊರಗೆಂಬೊ ನ್ಯಾಯವೇ ॥ ಸಾಲಾರ ಬಡ್ಡಿ ಕೊಡದವ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಂಟಲಳ ಹಳಿವ । ಸಹಜವ್ಯಾಯವ್ವೇ ॥ ಪ ॥ ಆಯಿನಾದವಗೆ ಹೆತ್ತತಾಯಿನ್ನೋದವಗೇ । ಪಾಪಿಷ್ಟಂಬೊ ನ್ಯಾಯವೇ ॥ ನಾಯಿ ತಿಂಬುವ । ನರಿ ಶ್ರಮ ಮುಟ್ಟಿದವ । ಮಾನಕೊಂಬೋ ವಾಯವೇ ॥ 1 ॥ ಶಂಢನ ಸತಿ ಸಂಗಿಗೆ ಹೋದವ ಹೊಲತಿನ ಹೋಗುವ । ಅಚಾರ ಹೇಳೋ ನ್ಯಾಯವೆ। ಹೇ ದೈವವೇ । ಆಚಾರ ಹೇಳೋ ನ್ಯಾಯವೇ । ಹೆಂಡ ಗುಡಕ್ಕ । ದೇಶಕನ ಕೈಯೆಲ್ಲೆ ಕಂಡು । ತೀರ್ಥ ಕೊಂಡವನ । ದುರ ದುಳ್ಳೆ ವಾಯವೇ ॥ 2 ॥ ಅರ್ಥ ಪ್ರಾಣ ಅಭಿಮಾನ ಕೈಕೊಂಡು ಭಕ್ತ ಜ್ಞಾನ ವೈರಾಗ್ಯ ಕೊಡುವದು । ಹೊಲ್ಲ ನ್ಯಾಯವೇ । ಹೇ ದೈವವೇ ಇದು ಹೊಲ್ಲ ನ್ಯಾಯುವೇ ॥ ಅರ್ತಿರಿವರೆಂದು ನಂಬಿದಲ್ಲಿ । ಇರ್ತಿರ್ತಿಕದ ವಿಶ್ವಾಸ ಮಾಡುವವಳೆ ವಾಯವೆ ॥ 3 ॥ ಶ್ರದ್ಧ ನಿಷ್ಠಿ ಸಾವಧಾನನು ಭವದಾನಂದ । ಸಮರಸರಾದ ಶರಣರ । ಅಬದ್ಧ ನ್ಯಾಯವೇ । ಹೇ ದೈವವೇ ಕೇಳಾ ಬದ್ಧ ನ್ಯಾಯವೇ ॥ ಕದ್ದು ತ್ರಿಮಲದೆಲವು । ಕಚ್ಚಿಕೊಂಡು ಬಿದ್ದು । ನರಕದೊಳಿರುವ ಘಾನವರ । ಗುದ್ದು ವಾಯವೇ ॥ 4 ॥ ಪೊಡವಿಯೊಳು ಮೆರೆಯುವಧೀಕ ಬಿದನೂರ ಒಡೆಯ । ಮಹಾಂತೇಶ್ವರನ । ಮಗನ ನೋಡಿ ಅಹಂಕರಿಸುವ ನ್ಯಾಯವೇ ॥ ಹೇ ದೈವವೆ ಅಹಂಕಾರಿಸುವ ನ್ಯಾಯವೆ ॥ ಕೆಡು ಬ್ಯಾಡಂದರೆ ಕೆಟ್ಟೆವೆಂಬ ದುಷ್ಟ ದುರುಳರ ಸಂಗವು ಮಾಡುವದು ನ್ಯಾಯವೆ ॥ 5 ॥

71 ನೇ ಪದ

ವಾಯಪುರದ ಅರಸು । ತಾ ಮೆರೆದಪ್ಪಿ ಬರುತಾನ । ಅವೇಕಿಗುಡ ಮಾಡೊ ಲಡಾಯ್ಹಿ ॥ ಆಯವರಿದುಕೊಳರೆಲ್ಲರೋ । ಶಿವಮಂದಿ ಬಿಚಗತ್ತಿ ಬತ್ತಲಗುದರಿ ಬಡಾಯೇ ॥ ಪ ॥ ಆಶಿ ಸೈನ್ಯದಧಿಪತಿ । ಕಾಮನೆ ಕಾರಾಭಾರಿ ಕೋಪಟೋಪಧಾರಿ । ಲೋಭ ಲುಬ್ಧಕನು । ರಸಮೋಹ ಮುಖ್ಯ ನಾಯಕ । ಮದ ಮುದ ಬಕರೊಡೆಯ । ಮತ್ಸರ ಹೋಯಿಲೇರ । ಹುಸೀ ಸರದಾರ ॥ 1 ॥ ನಿಷ್ಪ್ರಿಯ ದಳಪತಿ ವಿರತಿಯು ಕಾರಭಾರಿ । ಶಾಂತ ವಜೀರವೇ । ದ್ವಾರ ಗುಪ್ತಚಾರ । ಸ್ವಪ್ರಭುಜ್ಞಾನ । ಮಹಿಂದಾತ ತೃಪ್ತ। ಆಹಾರದಾತ । ಕ್ಷಮೆಯೆಂಬ ಸುರಸತ್ಯ ಸರದಾರ ॥ 2 ॥ ಅಷ್ಟಾನೆ ಹತ್ತು ಕುದರಿ । ಆರು ಗಾಡಿ ಮೂರು ಮಂದಿ ಬೈರಂಗ ಚತುರ । ಹಾಳ ಹರಟಿ ವಿರಾಟರಾಯ ॥ ಅಷ್ಟಿಷ್ಟೇನೇ ಆನೆ ಹನ್ನೆರಡು ಕುದರಿ । ನಾಲ್ಕು ಗಾಡಿ ಒಂಟಿ ಪ್ರದೆ । ಅಂತರ ಚತುರ । ವಸುಧಿಗೋಷ್ಟಿ ಮಹಾಂತ ಗುರುರಾಯ ॥ 3 ॥

72 ನೇ ಪದ

ಭಲೆರೆ ಹುಡುಗ ಹೌದ್ದೊಡದಿ । ಗುರಿಬಡದಿತು ಟುಬಾಕಹಿಡದಿ । ಮೂರಾರು ಫೌಜಿನೊಳು ಕಡದಿ । ಬಂಟ ಯಾರಿಗಿ ಸಿಗದಂಗ ನಡದಿ । ನಡದಿ ನಡದಿ ॥ ಪ ॥ ಏಳುಗೇಣಿನ ಟುಬಾಕ ಹಿಡದಿ । ಗುರುವಾಕ್ಯದ ಮದ್ದುಗುಂಡು ಜಡದಿ । ತತ್ವದ ಮುಜರಿ ಹಿಡದಿ । ಗುಂಡು ಉರುಳ್ಯಾಡದಂಗ ಗುರಿ ಒಗೆದಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಗೆದಿ ಒಗ್ಗೆದಿ ||1|| ನಾಲ್ಕಂಗುಲ ಮದ್ದಕಟ್ಟೇ | ನಿನ್ನ ಘನಕೊನೆ ಅದರೊಳಗಿಟ್ಟಿ || ಜ್ಞಾನದಕೊಳ್ಳಿಯ ಕೊಟ್ಟ | ಒಂಭತ್ತು ತೂತಿನೊಳು ಸುಟ್ಟಿ ಸುಟ್ಟಿ ಸುಟ್ಟಿ || 2 || ಇಲ್ಲಿರಬೇಡಲ್ಲೆಗೆ ನಡಿ | ಮಹಾಂತಪುರದಲಿ ಆನ ನಿನಗಡಿ || ಹರಿಹರ ಬ್ರಹ್ಮರಿಗೆ ಹೋಗದು ರಾಡಿ | ಗುರು ಮಹಾಂತನೊಳಗೂಡಿ ಗೂಡಿ ಗೂಡಿ || 3 ||

73 ನೇ ಪದ

ಜಯ ಜಯ ಮಂಗಲಮಯ | ಮಹಾಂತಲಿಂಗ ದೇಶಿಕಗೆ | ಜಯ ಜಯ ಹ್ಹರ ಮಂಗಲವೋ ||ಪ|| ಲಿಂಗವೇ ಪೂಜಿಸಿ ಲಿಂಗವೇ ಆಗಿಹ || ಇಂಗಿತರೂಪಿದು | ಕಂಗಳಾಲಯಗೆ ಜಯ ಜಯ || 1 || ಜೀವ ಪರಮರೈಕ್ಯ | ಭಾವವ ತೋರಿದ ಕೋವಿದ ಮದ್ಗುರು | ದೇವ ಸುಂದರಗೆ ಜಯ ಜಯ ||2|| ನಾಮರೂಪ ಕ್ರಿಯ | ಶೀಮೆಯ ಮೀರಿದ | ಸ್ವಾಮಿ ಮಹಾಂತೇಶಗೆ | ಮಹಾಪ್ರೇಮಿ ದಯಾಳಗೆ ಜಯ ಜಯ ||3||

*****

ಮಡಿವಾಳ ಸ್ವಾಮಿಗಳು ಚಿಣಮಗೇರಿ ಗುಡ್ಡಕ್ಕೆ ಬಂದು ಮಹಾಂತೇಶ್ವರರ ಸಮಾಧಿಯಲ್ಲಿ ಕೂತು, ನೀನೇ ನನ್ನ ತಂದಿ ನೀನೇ ಬಂದು ನನಗೆ ಬೋಧೆಮಾಡಬೇಕೆಂದು ಹಟಹಿಡಿದು ಹನ್ನೆರಡು ವರುಷ ಕುಳಿತಕಾಲಕ್ಕೆ ಈ ಕೆಳಗಿನ ಪದಗಳನ್ನು ಹಾಡಿದ್ದಾರೆ.

74 ನೇ ಪದ

ಗುರುವೆ ನೀ ಬೇಗನೆ ಮೊರೆಕೇಳೊ | ವ್ಯರ್ಥ ಹರಿದು ಹೋಗತೀನಿ | ಹಿಡಕೋರೊ | ಯಪ್ಪ ಹರಿದು ಹೋಗತೀನಿ ಹಿಡಕೋರ್ರೊ || ಪ || ಪದರಿಗಿ ಬಿದಿಃನಿ ಪಾಪಿಷ್ಠ | ಗುರು ಮಹಾಂತನೋಡೋ ಯನ್ನದರುಷ್ಟ | ಸೇವಕ ನಿಂತೀನಿ ಗಟ್ಟಿ ಮುಟ್ಟ | ಗುರುರಾಯ ತಪ್ಪಿಸೋ ಇನಿಮಗನಾಟ || 1 || ಗುರುವೆ ನೀಹಾಕಿದಿ ಬಲಿವೊಂದು | ಭೇರೆ ನಾ ಹಾಕಿಕೊಂಡೆ ಮತ್ತೊಂದು || ಬಂಧನ ಬಿಡಿಸೋ ನೀಬಂದು | ನಿನ್ನ ಹೊರ್ತು ಯಾರಿಲ್ಲೋ ಭಾಯಿ ಬಂಧು || 2 || ಏಸೋ ಜನ್ಮ ತಿಳಿಯದಲ್ಹೋದೆ | ಈ ಜನ್ಮದಲ್ಲಿ ನಿನ್ನ ಮಗನಾದೆ || ಯಾರು ತೋರುವರೊ ನಿನ್ಹಾದೇ | ನೀಬಂದು ಹೇಳೋ ನಿಜಗುರು ಬೋಧೆ || 3 || ಸಾಧುಸಂತರೊಳು ಕೂಡುವದು | ಯೋಗಸಾಧನ ಮಾಡುವದು || ನಿನ್ನ ಸ್ವರೂಪ ನೋಡುವದು | ಸುಕೃತ ಪಡೆದು ತಾಬಂದದ್ದು || 4 || ಸಂದಿ ಸಂದಿಗೆ ಸೇರ್‍ಯಾದೊ | ನಿನ್ನ ಧ್ಯಾನದೊಳು ನೆಲೆಯಾಗಿ ನಿಂತಾದೋ || ಹಗಲು ಇರುಳು ಬಿಡದೆ ನಿನ್ನ ನೆನವಾದೋ | ಗುರು ಮಹಾಂತ ನಿನ್ನ ಪದಕ್ಹೊಂದ್ಯಾದೋ || 5 ||

ಮಡಿವಾಳ ಯೋಗಿಗಳ ಸ್ವಪ್ನದಲ್ಲಿ ಮಹಾಂತಶಿವಯೋಗಿಗಳು : ಕುಮರಿ ಕೊಳ್ಳಕ್ಕೆ ಬಂದರೆ ನಾವು ಭೆಟ್ಟಿಯಾಗುತ್ತೇವೆಂದು ಹೇಳಲಾಗಿ, ಮಡಿವಾಳ ಯೋಗಿಗಳು ಶ್ರೀ ಶೈಲಕ್ಕೆ ಹೋಗಿ ಹನ್ನೆರಡು ವರುಷ ತಪಸ್ಸು ಮಾಡಿ ತೂರ್ಯದಿಂದ ಕಮರಿ ಕೊಳ್ಳದಲ್ಲಿ ಹಾರಲು, ಆ ಮಹಾಂತೇಶ್ವರರು ಪ್ರತ್ಯಕ್ಷರಾಗಿ ವರ ಕೊಟ್ಟಿರುವರಂತೆ. ಆಗ ಮಡಿವಾಳರು ಪದ ಹಾಡಿದ್ದಾರೆ. ಅದು ನಮಗೆ ಸಿಕ್ಕಿರುವದಿಲ್ಲ.

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

75 ನೇ ಪದ

ಏನಾಗದೇನಾಗದೇನಾಗದೋ । ಹರ ನಿನ್ನೊಲಿಸುವದೇನಾಗದೊ ॥ ಹರ ನಿನ್ನೊಲಿಸುವದೇನಾಗದೋ । ಹರಗುರುವಿನ ವಲಿಸುವದೇನಾಗದೋ ॥ ಪ ॥ ಹಮ್ಮನಳಿದು ತಾ ಸುಮ್ಮನಿದ್ದರೇ । ಬ್ರಹ್ಮನೊಲಿಸುವದೇನಾಗದೊ । ಬ್ರಹ್ಮ ನೊಲಿಸುವದೇನಾಗದೊ । ಪರಬ್ರಹ್ಮನೊಲಿಸುವದೇನಾಗದೊ ॥ 1 ॥ ಆಶಿಯನಳಿದು ತಾ ಹೇಶಿಕ ತೊಳದರೆ । ಈಶನ ವಲಿಸುವದೇನಾಗದೋ ॥ ಈಶನ ವಲಿಸುವದೇ ನಾಗದೋ । ಜಗದೀಶನ ವಲಿಸುವದೇನಾಗದೋ ॥ 2 ॥ ಗರ್ವನಳಿದು ತಾ ಅರವಿನೋಳಾದ್ದರೆ । ಗುರುವಿನ ವಲಿಸುವದೇನಾಗದೋ ॥ ಗುರುವಿನ ವಲಿಸುವದೇನಾಗದೋ । ಗುರು ಮಹಾಂತನ ವಲಿಸುವದೇನಾಗದೋ ॥ 3 ॥

76 ನೇ ಪದ

ಎಂಥ ಆಕಳಕೊಟ್ಟ ಗುರು ಕಾಮಧೇನ । ಹಗಲು ಇರಳು ಹಾಲಗರಿವದೊಂದೇ ಸವನ ॥ ಉಂಡು ನೋಡಿದವನೆ ಬಲ್ಲ। ಇದರ ಹೈನ । ಬೆಲೆ ಮಾಡುವರಿಲ್ಲಪ್ಪ ಅದರ ಸವನ ॥ ಪ ॥ ಬಾಳದಿನದ ಆಕಳಪ್ಪ । ಹಳಿ ಮುದಕಿ । ಮಾಡುತ ಬಂದೆನಪ್ಪ । ಅದರ ಜೋಕಿ ॥ ಹಿಡದೇನಂದರ ಸಿಗುವದಿಲ್ಲ। ಬಹಳ ಬೆರಕಿ ಅದಕ ನನಗ ಆಗಬೇಕೋ ಅಪಲಾಕಿ ॥ 1 ॥ ಬಾಯಿ ನೋಡಿದರೆ ಒಂದು ಹಲ್ಲು ಇಲ್ಲ। ಗುಡ್ಡದಷ್ಟು ಮೇವು ಅದ ಸಾಲುವದಿಲ್ಲ॥ ಅಷ್ಟು ತಿಂದು ಗಡಬಡಿಸುತಾದೊ ಹಗಲೆಲ್ಲ। ನೀರ ಕುಡಿಯುವ ರಾಟಿ ಅದಕ ಮೊದಲೇ ಇಲ್ಲ ॥ 2 ॥ ಆಕಳಿರುವಸ್ಥಲ ಶಿವಪೂರದಲ್ಲಿ। ಬಲ್ಲವರಿಗಿ ತಿಳಿದಿತಪ್ಪ ಅದರ ನೆಲಿ ॥ ಆಕಳಿಗಿ ಇದ್ದವಪ್ಪ ಸಾವಿರ ಮೊಲಿ। ನಮ್ಮ ಮಹಾಂತೇಶನ ಹೆಸರಮೇಲ ಬಿಟ್ಟನಪ್ಪ ಈ ಕಪಲಿ ॥ 3 ॥

77 ನೇ ಪದ

ಅತ್ತಿಯ ಮನಿಗ್ಹೋಗುವಲ್ಲಿ। ಊರಾಗ ಮತ್ಯಾವನಿಟ್ಟಿದೆ ಇಲ್ಲಿ॥ ಚಿತ್ತಿಟ್ಟು ಮೈದುನ ಕರಿಲಾಕೆ ಬಂದರೆ। ನೆತ್ತಿನೆವನ ತೆಗೆದು। ಮಲಗಿದ್ಹೊಯಿಮಾಲಿ ॥ ಪ ॥ ದೇವರ ಹರಕಿಯ ಹೊತ್ತಿ । ಅಲ್ಲಲ್ಲಿ ಮೂವರ ಮೋಜಿನೋಳಿರ್ತಿ । ಆವಜಾವದಿ । ಬಾಳ ಅರ್ತಿ ದಿನ ದಿನ ಸಾಧಿಸಿ ಮನಿಗ್ಹೋಗಿ ಬರ್ತಿ ಆವ ಭಾವದಿ ನಿನ್ನ ಮೋಹದ ಸೊಗಸಿಲಿ । ಮಾವನಂಜಿಕಿ ತುಸುಯಿಲ್ಲದೆ ಮರ್ತಿ ॥ 1 ॥ ಎಂಟು ಮಂದಿಗೆ ಕೈಕೊಟ್ಟಿ । ಅವರೊಳು ನೆಂಟಸ್ತಾನವ ಮಾಡಿ ಬಿಟ್ಟಿ। ವಂಟಿ ಬಣ್ಣವು ಬಿಗದುಟ್ಟಿ। ಅವಗಾಗಿ ಪುರಾಣಿ ಕುಪ್ಪಸ ತೊಟ್ಟಿ॥ ತೊಂಟರೈವರ ಮಾತು ಮನಸಿಗಿ ತಾರದೆ । ಭಂಟ ಭಾವನಮೇಲೆ ಮೊದಲೆ ಮನಸಿಟ್ಟ ॥ 2 ॥ ಸರಳ ಬೇತಲ ಸಣ್ಣ ಮಾರಿ । ಹಣೆಮೇಲ ಕುಂಕುಮ ಹಚ್ಚಿದಿ ಪೋರಿ । ಕೊರಳ ಪದಕ ಕುಚಭಾರಿ । ಊರಾಗ ತಿರಗಲ್ಲದೊಂದಿಲ್ಲ ಕೇರಿ ॥ ಧರೆಯೊಳು ಸೈದಾಪೂರ ಮೆರೆವ ಮಹಾಂತೇಶನ । ವಷ್ಟೆಲ್ಲ ನೀನು ತಿಳದೆ ವೈಯಾರಿ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

78 ನೇ ಪದ :

ನಾವು ನಡದೆವಮ್ಮ। ನಮ್ಮ ತವರೂರಿಗೆ । ಹೇಳಿಕೇಳಿವರಿಗೆ । ನೀವು ನಡಿರಿ ಅಂಜಿ ನಿಮ್ಮ ಹಿರಿಯರಿಗೆ । ಶಿವಶರಣರಿಗೆ ॥ ಪ ॥ ಅಜ್ಜ ಮುತ್ತೆ ಭಾವ ಮೈದುನಗ । ಸುಳ್ಳಿಯಾದೆ । ಅತ್ತಿಗ್ಗಿ ಕಳ್ಳಿಯಾದೆ। ಚಿತ್ತದ್ಲೊಲ್ಲಭನಿಗೆ । ಹಾದರಗಿತ್ತಿಯಾದೆ । ಅತ್ತಿಗೀಗ್ಗೆ ಒಳ್ಳೆಕ್ಯಾದೆ ॥ 1 ॥ ಒಪ್ಪಿ ಎರಡು ಆರ ಮಕ್ಕಳ ಹಡದು ಬೆಳದೆ । ಅವರ ಸಂಗಕ್ಕೆಳದೆ । ಇಪ್ಪತ್ತೊಂದು ಸಾವಿರದರನೂರು । ಅಲ್ಲಿ ಉಳದೇ । ಯನ್ನ ಹರೆ ಕಳದೆ ॥ 2 ॥ ಮನೆಯ ಅಳಿಯತನದವನ ನೋಡಬೇಕ । ಹುಡುಕಿ ಹಾಗಬೇಕು । ಚಿಣಮಗೇರಿ ಗುಡ್ಡದವನ ಧ್ಯಾನವೊಂದೆ ಸಾಕು । ಯಾರಿಗೇನುಬೇಕ ॥ 3 ॥

79 ನೇ ಪದ

ಕಂಡಬಟ್ಟೆ ಮಾತುಗಳು । ಆಡ ಕಲ್ತಿ। ಮಿಂಡ್ರನೋಡಿ ವಲ್ತಿ ॥ ಗಂಡನ ಮೇಲ್ಯಾಕ । ಪೋರಿ ನಿನ್ನ ಚಲ್ತಿ। ಛೀ ಮೂಳ ಹೊಲ್ತಿ ॥ ಪ ॥ ತಾಳಿ ಕರಿಮಣಿ ದ್ಹಾರ ಕಟಿಗೊಂಡಿ । ಧಾರಿಯರಸಿಕೊಂಡಿ ॥ ಹೋಳಿಗಿ ತುಪ್ಪ । ಭೂಮಾ ಮೊದಲ್ಯಾಕುಂಡಿ । ಈಗೇನು ಕಂಡಿ ॥ 1 ॥ ಕಾಲುಂಗುರ ಬಳಿ ಮೂಗುತೇರೆ ಇಟ್ಟಿ । ಸೀರಿ ಯಾರುದ್ದಿಟ್ಟಿ ॥ ಮೆಲ ಮೆರವಣಿಗಾಗಿ ಬಾಗಿಣ್ಯಾಕ ಕೊಟ್ಟಿ । ಸ್ನೇಹಯಾಕ ಬಿಟ್ಟಿ ॥ 2 ॥ ಉಡು ಉಣುವದು । ಕೊಡು ಕೊಳ್ಳುವದು । ಬಹಳ ಬಲ್ಲಿ ಹೆಸರ ಹೇಳಬಲ್ಲಿ ॥ ಒಡೆಯ ಗುಡ್ಡದಯ್ಯಗ ಮಾರಿತೋರುವಲ್ಲಿ। ಕಂಡರ ಸೇರುವಲ್ಲಿ ॥ 3 ॥

80 ನೇ ಪದ

ನಾಡಮಾತುಗಳು ನೀನಾಡಬಲ್ಲಿ । ಬಾಯಿಲ್ದೇಳಬಲ್ಲಿ । ನೀನಾಡು ಮಾತಿನೋಳಗೇ । ನಾದ್ದೇಳವಲ್ಲಿ। ಮಾತು ಕೇಳುವಲ್ಲಿ ॥ ಪ ॥ ಉಪ್ಪು ಹುಳಿ ವಗರು ಖಾರ ಕಹಿ ಬಲ್ಲಿ। ಬಹು ಸವಿ ಬಲ್ಲಿ ॥ ಚಪ್ಪರಿಸಿ ಉಣುವದ್ಯಾಕೆ ತಿಳಿವಲ್ಲಿ ರುಚಿ ತಳಿವಲ್ಲಿ ॥ 1 ॥ ಹಸರು ಹಳದಿ ಕೆಂಪು ಕರಿದು । ಮಿಶ್ರ ಬಲ್ಲಿ । ಬಿಳಿದರ್ಹೆಸರು ಬಲ್ಲಿ। ಕೊಸರಿಕೊಂಡುಡುವದ್ಯಾಕೆ । ಚಲಿಸುವಲ್ಲಿ। ಆ ಮನಸು ಅಲ್ಲಿ ॥ 2 ॥ ಮಾಡಿಕೊಂಡ ಮಹಾಂತೇಶನ ಹಾಡಬಲ್ಲಿ। ಮೋಜ ಮಾಡಬಲ್ಲಿ। ಕೂಡಿ ಮಲಗಿ ಕೊಳುವದ್ಯಾಕರಿವಲ್ಲಿ। ಮೈನೆರಿವಲ್ಲಿ ॥ 3 ॥

81 ನೇ ಪದ

ಇನ್ನೇಕೆ ಇಹದಾಸೆವ್ವ । ತನುಮನಧನದಾಸಿ ಕಡಿಯವ್ವ ॥ ಕರುಣುಳ್ಳ ಗುರುವಿನ ಪಿಡಿಯವ್ವ । ನಾಳೆ ಹೋಗುವ ಹಾದಿ ಹಸನ ಮಾಡವ್ವ ॥ ಪ ॥ ರಚಪತ್ರ ಕೇರ್ಯಾಗಿರಬೇಕ ತಂಗಿ । ರಾಗರಚಿನ ತಿಳಿದಿರಬೇಕ ॥ ಹೋಗಿ ಪರ್ವತ ಸೇರಲಿಬೇಕ । ಗಿರಿಮಲ್ಲರೊಳಗ ನೀನಿರಬೇಕ । ॥ 1 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೀಲವಂತರೋಣ್ಯಾಗಿರಬೇಕ ! ತಂಗಿ ಶಿವನಾಮವ ಸ್ಮರಿಸಲಿಬೇಕ । ಹೋಗಿ ಪರ್ವತ ಸೇರಲಿಬೇಕ । ಗಿರಿಮಲ್ಲಿರ್ರೊಳಗ ನೀನಿರಬೇಕ ॥ 2 ॥ ಹಾರಾರ ಕೆರ್‍ಯಾಗಿರಬೇಕ । ತಂಗಿ ತಂಗಿ ಹರಿನಾಮ ಸ್ಮರಿಸಲಿಬೇಕ । ಹೋಗಿ ಪರ್ವತ ಸೇರಲಿಬೇಕ । ಗುರು ಮಹಾಂತನೊಳಗೆ ನೀನಿರಬೇಕ ॥ 3 ॥

82 ನೇ ಪದ

ತಂದಿ ಶಂಡಾದರೆ । ತಾಯಿಯಾಕೆ ಬರುವಳು! ಅಂದವು ಕೇಳಿದನು ಭಾವ ಬಲ್ಲವರು ॥ ಪ ॥ ತಾಯಿ ತಾ ಬಂಜೆಯಾದರೆ । ನಾನೆಲ್ಲಿ ಪುಟ್ಟುವೆನು । ಆಯಾತದೋಳೆನಗೆ । ತಾನೊಬ್ಬ ಸತಿಯಾಗಿ । ಆಯ ಕಳೆಗೊಂಡು । ಮಗಳುಟ್ಟಿ ಮದವಿಯು ಮಾಗಿ । ಮಾಯದೊಳು ಬಿದ್ದು । ಮೂಜಗವಾಯಿತಲ್ಲ ॥ 1 ॥ ಹೆತ್ತವಸಿಗಿಯು ಮನಿಯು ಮುತ್ತಿಕೊಂಡು ಇದೋಸಿಗೆ । ಸತ್ತವಸಗಿಯು ಕೇಳಿ ತಾನಾದೆವ್ವ ॥ ಅತ್ತಿ ಮಾವಳಿಯ ಮೈದುನ । ಭಾವ ಬೀಗರಿಗೆ । ನಿತ್ಯದೊಡಿ ದಾತ ಭವದುತ್ತಾಯಿತಲ್ಲ ॥ 2 ॥ ಮಾನುಣಿಯು ಸತ್ತು । ಮಗಳಿಗೆ ರಂಡೆತನಾಗೆ ನಾ ನನ್ನ ತಾಯಿ ಸಮರಿಸಿ ಸಾಯಲು । ತಾನು ಸೆರಗ್ಹರಿದು ತಾಯಿಯ ಬಿಟ್ಟು ಮಹಾಂತೇಶ ತಾನೆ ತಾನಿರಲೆಂದಿಗ್ದಿತವಾಗಿತಲ್ಲ ॥ 3 ॥

83ನೇ ಪದ

ಬುಡಕಡಿಯಿಲ್ಲದ ನಿಕ್ಕಲ ನಿಂಗವ್ವ । ಅಡನಾಡಿ ಸಂಗವ್ವ । ಒಡಲೊಳು ಒಡಿಯನ ನೋಡುದು ಪಾಡವ್ವ ॥ ಜಡ ದೃಶದೃಶ ಆಗುದು ಸಿದ್ಧವ್ವ ॥ ಬಿಡು ಭ್ರಮಿ ಮುದ್ದವ್ವ ॥ ಪ ॥ ಜೀವತನುವಿನ ಮರುವಿನ ಮಾಳವ್ವ ॥ ದೇವರ ಬೋಳವ್ವ । ಭವರಹಿತ ಸಂಘರಿ ಕಾಳವ್ವ ॥ ಪಾವನ ಶ್ರೀ ಗುರು ಶರಣರ ಧೂಳವ್ವ । ಸೇವಿಸಿ ಬಾಳವ್ವ ॥ 1 ॥ ಸೋಹಂ ಬ್ರಹ್ಮಾದಿ ಎಂಬುವದೆಲ್ಲವ್ವ ॥ ಭಯ ವಿಲ್ಲೇಳವ್ವ । ಲಯ ನಿರ್ಲಯ ಕಲಕೊಂಬುವದಲ್ಲವ್ವ ॥ ನಾನೆರಡಿಲ್ಲೇಳೆನ್ನದಿ ಕಲ್ಲವ್ವ । ಜಯ ಜಗಮಲ್ಲವ್ವ ॥ 2 ॥ ಬಲ್ಲಿದ ಮಹಾ ಮಹಾಂತೇಶ್ವರನಾಗವ್ವ । ಎಲ್ಲಕ್ಕು ಬಾಗವ್ವ । ಇಲ್ಲದು ಹುಡುಕದು ಯಾತರ ಯೋಗವ್ವ ॥ ತಲ್ಲಣಿಸುವರೇನ ಪಾತ್ರದಭೋಗವ್ವ । ಸಲ್ಲದು ರಾಗವ್ವ ॥ 3 ॥

ಭಾವಾರ್ಥ

ಅಂತು ಪಾರವಿಲ್ಲದ ಅಪರಂಪರಾ ನಿಷ್ಕಲಸ್ವರೂಪನಾದ ಪರಬ್ರಹ್ಮವೇ ನೀನಾಗಿದ್ದು, ಈ ಅಡನಾಡಿ ದೇಹದ ಸಹವಾಸ ಮಾಡಿರುವಿ ನಿನ್ನ ನಿಜಸ್ವರೂಪವನ್ನು ನೋಡಿಕೊ ಮರೆಯಬೇಡ. ಕಣ್ಣಿಗೆ ಕಾಣುವ ಈ ಜಗತ್ತೆಲ್ಲ ತೋರಿ ಅಡಗುವದು ಸಿದ್ಧಾಂತ. ಆದ್ದರಿಂದ ಸಂಸಾರದ ಭ್ರಮಿ ಬಿಡು, ಪ್ರೇಮ ಮಾಡಬೇಡ, ಜೀವಭಾವವನ್ನು ಅಳಿ. ಮರವೆಯೆಂಬ ಮಾಯೆಯನ್ನು ಗೆದ್ದು ಅಖಂಡ ಸ್ವರೂಪದೇವರೇ ನಾನೆಂದು ತಿಳಿ. ಈ ಭವವನ್ನು ಖಂಡಿತ ಮಾಡು, ಈ ಅಜ್ಞಾನವನ್ನು ದಾಳಿಹೊಡಿ, ಪವಿತ್ರಾತ್ಮರಾದ ಗುರುಶರಣರ ಪಾದದಧೂಳಿಯಾಗಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಡೆದು, ಆ ಧೂಳನ್ನು ಸೇವಿಸಿಕೊಂಡು, ಬಹಳ ದಿವಸ ಜೀವಿಸು. ಸೋಹಂ ಬ್ರಹ್ಮವೇ ಎಲ್ಲ ಸ್ವರೂಪವಾಗಿರುವದರಿಂದ ಭಯವೇ ಇಲ್ಲ ಲಯ ಮತ್ತು ನಿರ್ಲಯಕೆ ಮೀರಿದಂಥ ನಾನು ನೀನೆಂಬುದು ಬೇರಿಲ್ಲ ಪರಬ್ರಹ್ಮ ಸ್ವರೂಪವಾದ ನಿನ್ನ ಆತ್ಮವೇ ಜಗ ಹೊತ್ತಿರುವದನ್ನು ತಿಳಿ. ಯಾರಿಗೂ ಹಣಿಯದೆ ಸರ್ವರ ದೇಹದಲ್ಲಿರುವೆನೆರಿದು ಅರಿ. ಬಲ್ಲಿದ ಪರಮಾತ್ಮನನ್ನು ಗಂಡನೆಂದು ಭಾವಿಸಿ, ಎಲ್ಲರಿಗೂ ತಲೆಬಾಗಿ ನಡೆ. ಇಲ್ಲದ್ದು ಬೇಡುವದು ತರವಲ್ಲ. ನಿಂತಲ್ಲಿ ನಿಲ್ಲುವಲ್ಲಿ, ಏಷ್ಟು ಸೋಗಮಾಡುವಿ. ಈ ರೀತಿ ಪಾತ್ರ ಆಡುವದು ಬೇಡ. ಈ ದೇಹದ ಭೋಗಕ್ಕೆ ಹಿಗ್ಗಬೇಡ. ಇದು ಸುಳ್ಳೆ ಸುಳ್ಳು ಕಾಮವನ್ನು ಕಟ್ಟು. ಪ್ರೇಮ ಮಾಡಬೇಡ. ಬಲ್ಲಿದ ಮಹಾಂತನನ್ನು ಕೂಡು, ಸುಖ ಪಡು ಎಂದು ಹೇಳಿರುವರು.

84 ನೇ ಪದ

ತಿಳಿ ಬಾಳಿರಬೇಕು ನಿಂಗವ್ವಾ। ನಿನ್ನ ಅಂಗದಗುಣ ಅಳಿಬೇಕವ್ವ॥ ಭಾವ ಭಕ್ತಿ ಬೆರಿಬೇಕವ್ವಾ। ಗುರುಸೇವೆಮಾಡಿ ಭವ ನೀಗವ್ವ॥ ಪ॥ ಆರುಮಂದಿ ಮಹ ಬೆರಕೆವ್ವ। ಸುತ್ತ ಮುತ್ತ ಪಾರೆ ತಿರುಗುವರವ್ವ॥ ರಮಿಸಿ ಬಲಿಗ್ಹಾಕುವರವ್ವ। ಬಲು ಹುಶೇರಿಲಿಂದ ಪಾರಾಗೆವ್ವ॥ 1॥ ಕಾಕು ಬುದ್ಧಿ ನಿನಗ್ಯಾಕವ್ವ। ನಿಜ ಅರವಿನೊಳ ಗಿರಬೇಕವ್ವ॥ ಸುಖ ದುಃಖವೊಂದಾಗಿರಬೇಕವ್ವ। ಪರಪಾಕ ಮಾಡಿ ಉಣಬೇಕವ್ವ ॥ 2॥ ಸಡಗರ ಸಂಪತ್ತ ಕಾಳವ್ವ। ಹೋಗಿ ಬುದ್ಧಿವಂತರನ ಕೇಳವ್ವ॥ ಸಂತರ ಚರಣದ ಧೂಳವ್ವ। ನೀ ಸೇವಿಸಿ ವೇಳೆಗಳಿಯವ್ವ॥ 3॥ ದಾರಗೊಡವಿ ನಿನಗೇ ನವ್ವ। ಗುರುಧ್ಯಾನದೊಳಗೆ ಬಲುಮಾನವ್ವ॥ ಸುಳ್ಳೆ ಸಂಸಾರ ಕನಸವ್ವ। ಅದು ತಿಳಿ ದರೆ ದೇವರು ನೀನವ್ವ॥ 4॥ ಬೇಕೆಂಬುವ ಮಳಕೆ ಕಡಿಯವ್ವ। ಬೈಲ ಉರಶೀಮಿ ದಾರಿ ಹಿಡಿಯವ್ವ॥ ಸರ್ವಕೆ ಶಿರಬಾಗಿ ನಡಿಯವ್ವ। ಗುರು ಮಹಾಂತನಕೂಡಿ ಮುಕ್ತಿ ಪಡಿಯವ್ವ॥ 5॥

85 ನೇ ಪದ

ಸಾಕಾಯಿತು ಈ ಊರವ್ವ। ಪರದೇಶಕೆ ಹೋಗನು ಬಾರವ್ವ॥ ಕಾಕುಜನರು ಸೇರರವ್ವ। ಮನವಾಕರಿಸಿತು। ಕಾಯಪೂರವ್ವ॥ ಪ॥ ಆರುಮಂದಿ ಸರದಾರವ್ವ। ತಂಗಿ ಇದೆ ಊರಾಗ ತೀರಿದರವ್ವ॥ ಸಾರಿ ಜವಾನರು। ಬರತಾರವ್ವ। ನಿನ್ನ ಪಾರದೊಳಗೆ ಕೊಡುತಾರವ್ವ॥ 1॥ ಬಂಧುಬಳಗ ಬೋಳದ್ಹೋಯಿತವ್ವ। ನಿನ್ನ ಕೈಯಾಗ ಜೋಳಿಗಿ ಬಂತವ್ವ॥ ಕೇಳುವಧಣಿ ಯಾರಿಲ್ಲವ್ವ। ತಂಗಿ ಹಾಳಾಯಿತು ಈ ಊರವ್ವ॥ 2॥ ಮುಂದಕಿಟ್ಟ ನಿನ ಕಾಲವ್ವ। ತಂಗಿ ಹಿಂದಕ ತಿರಿಗಿಡಬ್ಯಾಡವ್ವ। ಮಹಾಂತಗುರು ಕರಿಬಂದಾನವ್ವ। ಅಲ್ಲಿ ಆನಂದಪೂರಕ ನಡಿರವ್ವ॥ 3॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

86 ನೇ ಪದ

ಸಾಕಾಯಿತು ಈ ಊರವ್ವ ಬಾಳ ಜ್ಯಾಕಿಲಿ ಹೋಗನು ಬಾರವ್ವ॥ ಒಂಬತ್ತು ಬಾಗಿಲದೊಳಗವ್ವ। ನಾನಿರುವ ಮನ್ನಿಯ ಬಹಳ ದೂರವ್ವ॥ ಪ॥ ಆರು ಮಂದಿ ಗೆಳತೇರವ್ವ। ತಂಗಿ ಬ್ಯಾರಿದ್ದವರುಮೂವರವ್ವ॥ ಕಂಡರೆ ಯನ್ನ ಬಿಡರವ್ವ। ಬಹಳ ದಿಡಗಿಲಿ ಹೋಗನು ಬಾರವ್ವ॥ 1॥ ಆಯಿತ್ತನಾರ ದಿವಸ ಆಯಿತವ್ವ। ತಂಗಿ ಬಾಹುದು ಸಾಹುದು ಹೋಯಿತವ್ವ। ಸಾಯಸ ಯನಗಿದು ಆಯಿತವ್ವ। ನಿಜ ಭಾವಿಸಿ ನಿರ್ವೈಲಾಯಿತವ್ವ॥ 2॥ ಏನು ಹೇಳಲಿ ಅವತಾರವ್ವ। ತಂಗಿ ಮಹಾಂತಪುರದ ವಿಸ್ತಾರವ್ವ॥ ಮಹಾಗುರು ಮಹಾಂತಯೋಗೆವ್ವ। ಆತನ ಪಾದಕೆ ಹೊಂದನು ಬಾರವ್ವ॥ 3॥

87 ನೇ ಪದ

ನೀತಿ ಅನುಭಾವದ ಪದಗಳು

ಮಾಡಿ ಕೆಟ್ಟರೋ। ಮಾಡದೆ ಕೆಟ್ಟರೋ। ನೀಡಿ ಕೆಟ್ಟರೋ ಜನರೆಲ್ಲ॥ ಮಾಡುವ ನೀಡುವ ಬೇಡುವ ಉಂಬುವ। ಒಬ್ಬನೆ ಶಿವನೆಂದರಿಯರೋ ಜನರೋ॥ ಪ॥ ತುಪ್ಪ ಹೋಳಗಿ ಹಪ್ಪಳ ಶೆಂಡಿಗಿ ಜಪ್ಪಿಸಿ ಮನಿವಳಗುಂಬುವರೋ। ಕಪ್ಪು ಗೊರಳನ ಶರಣರು ಬಂದರೇ। ತಪ್ಪಿಸಿ ಕೊಂಡಿಲ್ಲೆಂಬುವರೊ॥ 1॥ ದೊಡ್ಡ ಹೊಟ್ಟಿ ಮಾರುದ್ದಗಡ್ಡದವರ। ನ್ನಡ್ಡಬಿದ್ದು ತಾವು ಕರಿಯಿವರೋ। ಮಡ್ಡ ಕುರೂಪಿನ ಜಂಗಮ ಬಂದರೇ। ಅಡ್ಡಮೋರಿ ತಾವು ತಿರುಹುವರೋ॥ 2॥ ದೇಶಕಧಿಕವಾದ ಗುರುಮಹಾಂತೇಶನ ಕರಕಂಜದೊಳಗಿಹರೊ।ಹರ ಹರ ಹರೀ ಹರೀ ಓದು ಓದು ಯನುತಲಿ। ಗುರುಮಾರ್ಗಕೆ ತಾವು ಬದಲಾದರೋ॥ 3॥

88 ನೇ ಪದ

ಕೇಳೋಜ್ಯಾಣ। ಜ್ಞಾನದಿಂದ ಶಿವನಧ್ಯಾನವು ಮಾಡಣ್ಣ। ಕೇಳೊ ಜ್ಯಾಣ॥ ಪ॥ ಗರ್ವ ಅಹಂಕಾರ ಘಲಾತಮಾಡೊ। ಕಾಮ ಕ್ರೋಧವನು ಕಡಿಯಾಕ ಮಾಡೊ ಮದಮತ್ಸರ ಮಾಯವು ಮಾಡೋ। ಕೊಟ್ಟಿಗುಣ ಸುಟ್ಟು ಬೂದಿಯ ಮಾಡೋ॥ ಸಿಟ್ಟು ಬಂದರೆ ನಿದಾನ ಮಾಡೊ। ನಡೆನುಡಿ ಎಂಬುದು ಬಿಗವು ಮಾಡಣ್ಣ। ಕೇಳೋ ಜಾಣ॥ 1॥ ಆರು ಶಾಸ್ತ್ರಗಳು ಸಿದ್ಧಿಯಮಾಡೊ। ಹದಿನೆಂಟು ಪುರಾಣ ಪಾಠವು ಮಾಡೊ। ರೊಕ್ಕನೋಡಿ ನೀ ವ್ಯಾಪಾರಮಾಡೊ। ಎಂಟೆಂಟು ದಿನಕೊಮ್ಮೆ ಸಂತಿಯಮಾಡೊ। ಹುಣ್ಣಿವಿ ಅಮಾವಸೀ ಒಂದತ್ತು ಮಾಡೊ। ಹಸ್ತ ಬಂದವರಿಗೆ ಅನ್ನವು ನೀಡಣ್ಣ॥ ಕೇಳೋ ಜಾಣ॥ 2॥ ದಾನ ಧರ್ಮ ಪರವುಪಕಾರ ಮಾಡೋ। ನಾಡಿಯ ನೋಡಿ ವೈದ್ಯವ ಮಾಡೋ। ಹೆತ್ತ ತಾಯಿ ತಂದಿ ಪೂಜಿಯ ಮಾಡೊ। ಅತ್ತಿಮಾವಗ ಮರಿಯಾದಿ ಮಾಡೊ॥ ಮನಿಯಬಿಚ್ಚಿ ಮೇಲಮ್ಯಾಳಗಿ ಮಾಡೋ। ನಿನ್ನೊಳಗ ನೀ ವಿಚಾರ ಮಾಡಣ್ಣ॥ ಕೇಳೋಜಾಣ॥ 3॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಬೆಳ್ಳ ಬೆಳತನ ಭೋಗವು ಮಾಡೊ। ಬೆಳಗುವುುಂಜಾನೆ ಗುರುಭಜನಿಯ ಮಾಡೋ। ವೈರೀ ಕಂಡಲ್ಲಿ ಧೈರ್ಯವ ಮಾಡೋ। ಸರಕಾರ ಕಂಡಲ್ಲಿ ಸಲಾಮ ಮಡೋ ॥ ಹೊತ್ತ ಮುಣಗಿದಲಿಃ ವಸ್ತಿ ಮಾಡೋ ಧರಿಯೊಳು ಕಡಕೋಳ ಮಕ್ಕಾಮ ಮಾಡಣ್ಣ। ಕ್ಕೋಲೊ ಜಾಣ। ಜ್ಞಾನದಿಂದ ಶಿವಧ್ಯಾನವು ಮಾಡಣ್ಣ ॥ 4 ॥

89 ನೇ ಪದ

ನೀರಜ್ಯೋತಿಯ ಪದ

ಜಯಸಾಂಬ ಜಯಸಾಂಬ। ಜಯತೇ ಸ್ವರೂಪ। ಜಯಮಾಳ್ಪೆರೂಪ। ಜಯತೆಂದು ಬೆಳಗುವೆನಾ ನೀರದೀಪ। ಜಯಸಾಂಬ ಜಯಸಾಂಬ ॥ ಪ ॥ ಅಂಗಂಬೊ ಬಟ್ಟಲವನು ತೊಳದು। ಹಸನವು ಮಾಡೀ। ಗಂಗೆ ಯಮುನೆ ಸರಸ್ವತಿನದೀ। ಉದಕವು ಕೂಡಿ। ಲಂಘೀಪ ಮನಬತ್ತಿ ಹೊಸ್ತು। ವುತ್ತಪತೀ ಮಾಡೀ ॥ ಹಿಂಗಿದ ಮಹಾಜ್ಞಾನಜ್ಯೋತಿ ಹಚ್ಚೀದೇ ಕುಡಿನೋಡಿ। ಜಯಸಾಂಬ ಜಯಸಾಂಬ ॥ 1 ॥ ತಾಳ ಜಾಗುಟಿ ಗಂಟಭೇರಿ ನೌಬಾಜೀ। ಕೇಳಿ ಕಿವಿಯೊಳು ನಟ್ಟು। ಸೊನಾಂಟ್ಯದ ವಾಜೀ। ಆರೆಂಟುನಾಲ್ಕು ಮೂರೆರಡೆಂಬೋ ಮಾಜಿ ॥ ನಿನ್ನ ಪೌಳಿಯೊಳು ಮಾಡುವೇ ಈ ರಾಜಪೂಜಿ। ಜಯ ಸಾಂಬ ಜಯಸಾಂಬ ॥ 2 ॥ ದೇಶಕಧಿಕ ಚವಡಾಪೂರ ಚಿಣಮಗೇರಿ। ಆ ಸೀಮೆ ನಡುವ ಶೋಭಿತ ಗುಡ್ಡವನೇರಿ ॥ ಪಾಸಿಹಾಕಿ ತಿರಿಗಿಸಿದೇಸೋ ಬಾರೀ। ಈಶ ಮಹಾಂತೇಶ। ಹಿಡದೇನೋ ನಿನ್ನ ಕೈಸರೀ ಜಯಸಾಂಬ ಜಯಸಾಂಬ ॥ 3 ॥

90 ನೇ ಪದ

ಆಶೀರ್ವಾದ ಪದ

ಜಯತೋ ಶ್ರೀ ಗುರುಸಂಗಮೇಶ। ನೀನು ದಯವಿಟ್ಟು ರಕ್ಷಿಸೋ ತ್ರಿಜಗದೀಶ। ಜಯತೋ ಶ್ರೀ ಗುರುಸಂಗಮೇಶ ॥ ಪ ॥ ಕಾಲವರಿತು ಮಳಿಬರಲಿ। ಸೂಶಾಲ್ಯವು ಹದಿನೆಂಟು ಧಾನ್ಯವು ಬೆಳಿಲಿ। ನಾಲುಭಾವಿಗಳು ತುಂಬಿ ಹರಿಲಿ। ಪಶುಜಾಲಾ ಮೃತಕರ ಹಸಿಮೇವುತಿರಲಿ ॥ 1 ॥ ಗಿಡಬಳ್ಳಿ ಅತಿಫಲಪುಷ್ಪವಾಗಿರಲಿ। ನೀವು ಪೊಡವಿಪಾಲಕರಷ್ಟು। ಭೋಗದೊಳಿರಲಿ ದೃಢ ಭಕ್ತರೆನುತಿರಲಿ। ಬಂಜಿಮಡದೇರು ಹಡದು। ಜೋಗುಳ ಪಾಡುತಿರಲಿ ॥ 2 ॥ ಕಡಕೋಳ ಸದ್ಗುರುವಿನ ನುಡಿಯ। ಈಗ ನಡಸಿ ಸತ್ಯ ಸದ್ಗುಣ। ಹಿಡಿವದಕೆ ಹಿಡಸೀ। ಪೂಜಿಸಿಕೊಳ್ಳೆಮ್ಮವಡೆಯಾ। ನಮ್ಮ ಮೃಡಮಹಾಂತೆನಿಪ ಕೂಡಲಸಂಗಮ ವಡೆಯ ॥ 3 ॥

91 ನೇ ಪದ

ಗಂವ್ಹಾರ ದೊಡ್ಡಪ್ಪಗೌಡನ ಮಗ ರಾಯಿಗೌಡನು ಸತ್ತ ಸಮಯದಲ್ಲಿ ದೊಡ್ಡಪ್ಪಗೌಡ ಎದೆ ಎದೆ ಬಡಕೊಂಡು ಅಳುತ್ತಿರಲು ಕಡಕೋಳ ಮಡಿವಾಳರು ನೋಡಿ ಪದಹಾಡಿ ಅನುಭಾವ ಹೇಳಿ ಅಳುವದನ್ನು ಬಿಡಿಸಿದರು.

ಬಲ್ಲಪ್ಪ ದೊಡ್ಡಪ್ಪನ್ಯಾರೋ। ಯಲ್ಲಾ ತೋಲ್ತಾಳಿದವರೋ ॥ ತೋಲ್ತಾಳಿ ದವರವರು। ಭಾರ ತಾಳಿದವರೋ। ಬಲ್ಲಪ್ಪ ದೊಡ್ಡಪ್ಪನ್ಯಾರೋ ॥ ಪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಾಯಿಯ ಮಾಟ । ಬಯಲೋಳು ಬ್ಯಾಟ ॥ ಹಾ ನ್ಯಾಯವೇನಿದು । ದೈವ ನ್ಯಾಯವೇನಿದು ಗೌಡ ನ್ಯಾಯವೇನಿದು । ಗಾಬರಿಯಾಗುವದು । ಧೈರ್ಯ ಹಿಡಿ ಚಿಂತಿ ಮರೆದು ॥ 1 ॥ ಹೌದು ನಮಗ ಬೇಕಾದ । ನಿಮಗ ಬೇಕಾದ । ಹಾ ಯಲ್ಲಾರಿಗೆ ದೈವ । ಎಲ್ಲಾ ರಿಗೇ ಗೌಡ ॥ ಎಲ್ಲಾರಿಗೇ ಯರವಾದ ತಾ ತಮ್ಮನಿಗ್ಹೋದ ॥ 2 ॥ ರಾಯಿಗೌಡ ನ್ನಂದಿ । ಸಾಯಿಬಾರೆದಂದಿ । ಹಾ ನಡಸೀ ಕೊಟ್ಟರ । ದೈವ ನಡಸೀ ಕೊಟ್ಟರಗೌಡ ನಡಸೀ ಕೊಟ್ಟರ ನಿನ್ನ ಮಗನಂದೀ । ಕಾಯೋ ಮಹಾಂತೇಶನಂದೀ ॥ 3 ॥

92 ನೇ ಪದ

ಆಯಿತು ಹೋಯಿತು ಬಂತುಬಾರದೆಂಬೊದ್ಯಾಕೋ ನಿನಗೀವಣ ಭ್ರಾಂತಿ ॥ ಕಾಯಲು ಕೊಲ್ಲಲು ದೇವನಲ್ಲದೇ । ಛೀ ಬಿಡು ನಿನ್ನ ಮನದನ ಚಿಂತಿ ॥ ಪ ॥ ಸಂಚಿತಕರ್ಮವು ವಂಚಿಸಬಾರದು । ಮುಂಚಗೊಂಡು ಮನ್ನಿಸೊಬೇಗ ॥ ಪಂಚು ಜನ್ಮವಿದು । ಮಿಂಚಿಹೋದಮೇಲ । ಹಂಚಿ ಹಾಕುವದು ಆಗ್ಯಾಂಗ ॥ 1 ॥ ಪ್ರಾಲಬ್ಧ ಫಲ ಸಾಲದ್ದೆಂದು । ಅನುಕೂಲವಾಗಿ ಭೋಗಿಸೋ ನೀನು ॥ ಮೇಲವಾದ ನಿಷ್ಕಲವು ತಿಳಿದರೆ । ಕಾಲಕಾಲಕ್ಕಾಗುವದು ತಾನೆ ॥ 2 ॥ ಆಗಮ ಎಂಬುದು ಆಗ ಲೆಂದರೇ । ಅದು ಈಗ ಆಗಲಿಕ್ಕೆ ನಿನ್ನಿಚ್ಛಿ ॥ ಆಗಂತನುಬ್ಯಾಡೆ । ಭವರೋಗಯಂಬುದು । ಬೇಗ ಹೋಗುವದು ತಾ ಕೊಚ್ಚೀ ॥ 3 ॥ ತನುಮನಧನ । ಹಿಡಿದಿದನನುದಿನ । ನೆನವು ನಾನಾಜನ್ಮವು ತಾನೆ ॥ ಇದರ ನೆನವಡಗಲು । ಘನ ಮಹಾಂತೇಶನೋಳು । ಚಿನ್ಮಯನೋಳು ತನ್ಮಯನು ತಾನೆ ॥ 4 ॥

ಇನ್ನು ಮುಂದೆ ಮಹಾಕಾರಣ ಕೂಟಸ್ಥಲ

93 ನೇ ಪದ

ಸಾಕ್ಷಾತ ಸದ್ಗುರು । ಪ್ರತ್ಯಕ್ಷವಾಗಲು ಸ್ಥಿತಿಗತಿಗಳು । ಕೇಳುವದ್ಯಾಕೋ । ಆ ಕ್ಷಣಕಾಗುವದು ಅನಂತಸೌಖ್ಯವು । ಮೋಕ್ಷವು ಕೊಡುಕೊಳ್ಳುವ ಕುದಿಯ್ಯಾಕೋ ॥ ಪ ॥ ತನ್ನ ನಿಜವು ತಾ ತಿಳಿಬೇಕಾದರೆ । ಭಿನ್ನಭಾವದ ಭ್ರಮಿ ಬಿಡಬೇಕೋ ॥ ತನು ಮನ ಧನವನ್ನು । ಉನ್ನತ ಗುರುವಿಗೆ । ಮನ್ನಿಸಿ ಮೋಹದಿ ಕೊಡಬೇಕೋ ॥ 1 ॥ ಅಲ್ಪಕಲ್ಪ ಸಂಕಲ್ಪನಾದರೆ । ಅಲ್ಪಬುದ್ಧಿಗೆ ನಿಲ್ಲುವದಲ್ಲ । ಅಲ್ಪಕಲ್ಪ ಸಂಕಲ್ಪನೀಗಿ । ಉಪಹಾಸ್ತಿಕನಾದರೆ । ಒಲಿಮೀಲೆ ಸೆಳಕೊಳ್ಳು ತಾಬಲ್ಲ ॥ 2 ॥ ಅವರಿವರಾದರೇನೋ । ಇವರವರಾದರೇನೋ । ಆವರಿಸೀ ಕೊಂಬವರಿವರೇನೋ ॥ ಅವರಿವರೆಂಬುವ ಮಹಾಂತನೊಳಾದರೇ । ಅವರ್ದೇ ನಿವರ್ದೇ । ನಾಯಿತೇನ್ಹೋಯಿತೇನೋ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

94 ನೇ ಪದ

ಜಲ್ದಿ ನೋಡಿಕೊಳ್ಳೊ ಹಿಂಧಬಂದುದ್ದೆಲ್ಲಿ। ಇಂದು ನಿಂದುದೆಲ್ಲಿ॥ ಸುಲ್ದು ಹೇಳತೀನಿ ಮುಂದ ಹೋಗುದೆಲ್ಲೆ। ಮುಕ್ತಿ ಆಗುದೆಲ್ಲಿ॥ ಪ॥ ಬ್ರಹ್ಮ ವಿಷ್ಣು ರುದ್ರ ರೆಂಬೋರಿರುವದೆಲ್ಲಿ। ಅವರ್ನರಿವದೆಲ್ಲಿ। ಡಮ್ಮು ಅಹಂಕಾರ ತಾ ಮೆರಿವದೆಲ್ಲಿ। ಅವು,ಮಳ್ಗುವುದೆಲ್ಲಿ॥ 1॥ ಈರೇಳು ಲೋಕಯೆಂಬುದುಟ್ಟಿತೆಲ್ಲಿ। ಅದರ ಗಟ್ಟಿತ್ತೆಲ್ಲಿ॥ ಬೇರ ಊರಿ ಬುಡತಾನೆಟ್ಟಿತ್ತೆಲ್ಲಿ ಕೊನಿ ಮುಟ್ಟಿತೆಲ್ಲಿ॥ 2॥ ಹಸು ತೃಷೆಇಂದ್ರಿಯಂಬೋ ದಾಯಿತೆಲ್ಲಿ। ಅದ್ನು ಹೋಯಿತೆಲ್ಲಿ॥ ಅಸಮ ಗುಡ್ಡದಯೋಗಿ ತನ್ನ ಮಾಹಿತೆಲ್ಲಿ ನಿನ್ನ ಮಾಯಿತೆಲ್ಲಿ॥ 3॥

95 ನೇ ಪದ

ಎಲ್ಲರೊಳಗಹಾನ ಶಿವತಾನೇಕಾಗಿ। ತಿಳಿಯೋ ನೀಬೇಗಿ। ನಡಿಯೋ ಬಾಗಿ। ಸಾರಿಹೇಳುವೆ ಕೂಗಿ॥ ಪ॥ ಕೊಡುವವರೊಳಗೆ। ಆ ಕೊಡ್ತುವದರೊಳಗೇ। ಕೊಡುಕೊಂಬುವರೊಳಗೇ॥ ಬಿಡುವವರೊಳಗೆ। ಆ ಭಿಡುವದೊಳಗೇ। ಬಡಸಿ ಕೊಳ್ಳುವವರೊಳಗ್ಯೇ॥ 1॥ ಬೈವವರೊಳಗೆ। ಆ ಬೇಗಳೊಳಗೆ। ಬೇಸಿಕೊಳ್ಳುವವರೊಳಗೆ॥ ನ್ಯಾಯದೊಳಗೇ। ನ್ಯಾಯ ಹೇಳುವದರೊಳಗೆ। ನ್ಯಾಯ ಕೇಳುವದರೊಳಗೆ॥ 2॥ ಪೊಡವಿಯೊಳಧಿಕ। ಚಿಣಮುಗೇರಿವಳಗೆ। ಮೃಡಮಹಾಂತೇಶ್ವರನೊಳಗೆ। ಮಡಿವಾಳಾಖ್ಯ ನಾಮರೂಪದೊಳಗೆ। ನುಡಿವ ಬೆಡಗಿನೊಳಗೆ॥ 3॥

96 ನೇ ಪದ

ಯಲ್ಲಿ ನೋಡಿದರಲ್ಲೆ ತಾನೇ। ಯಲ್ಲರೊಳಗೆಹಾನೇ। ಯಲ್ಲಿ ನೋಡಿದ ರಲ್ಲೆ ತಾನೇ॥ ಫುಲ್ಲನಯನೆ। ಹೌದಲ್ಲಯೆಂಬುದೇನೇ॥ ಪ॥ ಹತ್ತು ದಿಕ್ಕಿ ನೊಳಗೆ ಹಾನೇ। ಹತ್ತತ್ತ ಹಾನೆ। ನಿತ್ಯ ನಿತ್ಯ ತೋರುತಾನೆ। ತನ್ನೋಳು ತಾನೇ॥ ಚಿತ್ತಬಂದಂತೆಹಾನೇ। ಸುತ್ತಮುತ್ತಿಕೊಂಡ್ಹಾನೇ॥ 1॥ ಹದಿನಾಲ್ಕು ಲೋಕದೊಳಗ್ಹಾನೆ। ಹಲವು ಆಗ್ಯಾನೇ। ಹದಿನೆಂಟುಚಕ್ರ ತಿರುಗುತಾನೆ। ಹಗರಾಣದೊಳುಗ್ಹಾನೆ॥ ಅದರುಬೆದರಿನೊಳಗ್ಹಾನೇ ಮದನಮೋಹವು ತಾನೇ॥ 2॥ ನಿಂತುಕೊಂಡವ ನೋಡುತಾನೇ॥ ಅಕಕ್ಕೊ ನೀನೇ ಕುಂತು ಕಿವಿವೊಡ್ಡಿ ಕೇಳುತಾನೇ। ಕುಚಕುಚು ಅಂತಾನೆ। ಇಂತು ಅನಂತತಾನೇ। ಸಂತನಿಸ್ಸಂತ ತಾನೇ॥ 3॥ ಮಾತುಗಳಾಡು ತಾನೇ। ಮೂಕನಾಗ್ಯಾನೇ। ಮೂಢ ಮಾತುಗಳತಾನೆ। ಲೋಕ ಆಳುವತಾನೇ॥ ಮಾಡಿನೀಡುವ ತಾನೇ। ಬೇಡಿವುಂಬುವ ತಾನೇ॥ 4॥ ಬಳಬಳಬಳ ಸುರುವುತಲ್ಹಾನೇ। ಅಲಲಲಲೆಂಬೊತಾಲ್ಹಾನೇ॥ ತಳತಳ ತಳ ಹೊಳೆಯುತಲ್ಹಾನೇ। ಆಳಳಳಳೆಂಬುದ ಅದು ತಿಳಿ ನೀನೆ॥ 5॥ ಯಡಬಲ ದೋಳಿರುತಾನೇ। ಮುಂದೇ ಹಿಂದ್ಹಾನೆ। ಬುಡಕಮೇಲಕೆ। ಕಾಣುತಾನೇ। ನಾಡಿ ನೊಳಹೊರಗ್ಹಾನೇ॥ ನುಡಿವ ಬೆಡಗಿನೊಳಗ್ಹಾನೆ। ಮೃಡಮಹಾಂತೇಶ್ವರ ತಾನೇ॥ 6॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

97 ನೇ ಪದ

ಬಲ್ಲೆನೆಂದು ಬಹಳಶಾಸ್ತ್ರ ಓದಿ ಓದಿ । ಕಾಣೆ ಹಾದಿ ಹಾದಿ । ಬಲ್ಲವನಾದ ರ‍್ಯಾಕ್ಹಿಂಗರ್ವಿಯಾದಿ । ಹ್ಯಾಂಗರ್ವಿಯಾದಿ ॥ ಪ ॥ ಇಲ್ಲದಿಲ್ಲದ್ದೆಲ್ಲಿಯಿಲ್ಲ । ನೋಡೊ ತಮ್ಮ । ಸುಳ್ಳೆ ಬ್ಯಾಡೊ ಹಮ್ಮ ॥ ಅಲ್ಲಮನಾಚೆಲ್ಲಿದ್ದ ನಿನ್ನ ಸೊಮ್ಮ । ಕೇಳಾದಿ ಬೊಮ್ಮ ॥ 1 ॥ ಗುರುವುನೆಂಬ ಗರ್ತನಿನಗೆ ಸಿಕ್ಕೆಯಿಲ್ಲ । ಸುಳ್ಳೆ ಸೊಕ್ಕಿದಲ್ಲ । ಪರಮಾನಂದ ಸೌಖ್ಯದರುವ ಹಗರಿಲ್ಲ । ಭವನೀಗರಿಲ್ಲ ॥ 2 ॥ ಒಂದೆ ಮೂರು ಅರುಸಾವಿರಾದರೇನು । ಮೀರಿ ಹೋದರೇನು ತಂದ್ಧಿ ಮಹಾಂತನ ಲೀಲ ಇದ್ದರೇನು । ಇಲ್ಲದಿದ್ದರೇನು ॥ 3 ॥

98 ನೇ ಪದ

ಇಲ್ಲದ್ದಿಲ್ಲದ್ದಿಲ್ಲ । ಇದ್ದುದ್ದೆಲ್ಲ ಅಲ್ಲ ॥ ಇಲ್ಲಅಲ್ಲ ಅಲ್ಲಯಿಲ್ಲ । ಇಲ್ಲಲ್ಲೊಲ್ಲಿಬಲ್ಲ ॥ ಪ ॥ ಕಾಶಿರಾಮೇಶ್ವರಗ ಹೋದಿ । ಆಶಿ ಬಿಡದೆ ಫಾಸಿ ಆದಿ ॥ ಏಸೊ ಯೋಗಮಾಡಿ । ತತ್ವದ ತ್ರಾಸಿಗ್ಹೋಸ್ವರಗದಾದಿ ॥ 1 ॥ ವೇದಾಗಮ ಪುರಾಣಗಳೋದಿ । ಗಾದಿಹಾದಿಗ್ಹೋದಿ ವಾದಿ ॥ ನಾದಬಿಂದು ಕಳೆಗಳಾದೇನಾದಿ । ಆದಿ ತಿಳಿಯದ್ಹಾದಿ ॥ 2 ॥ ಆಯತ ಸ್ವಾಯತ ಸ್ನೇಹತಂದೀ । ತಂದೀತಾಯಿ ಸಂದೀಲೆಂಬಂದೀ ॥ ಮಾಯತ ಮಾಯತ ಮಹಾಂತ ಮಹಾಂತ ಜ್ಯಾತ ಜ್ಯಾಯತನೆಲ್ಲಿತಂದಿ ॥ 3 ॥

99 ನೇ ಪದ

ಬಲ್ಲೆ ಬಲ್ಲೆ ಬಲ್ಲೆನೆಂಬಿಯಲೆ ಆತ್ಮ । ನಿನ್ನ ಬಲ್ಲತನವು । ಬಲ್ಲರ್ಹೇಳಲೆ ಆತ್ಮ ॥ ಪ ॥ ಅವಲದಲ್ಲಿ ಅವಯ ನಿನಗೇ ಎಲೆ ಆತ್ಮ । ಅದರಿವರವನ್ನು । ವಿವರಿಸೆನಗೆ ಎಲೆ ಆತ್ಮ ॥ ಅವಯ ಅವ ಆದವಗೇನಾದಿ ಎಲೆ ಆತ್ಮ । ಆ ನಿರ್ವಯಲೆ ವಯ । ನೀನೆಲ್ಲಿಂದೆ ಇದ್ದಿ ಎಲೆ ಆತ್ಮ ॥ 1 ॥ ಜಗದ ಜೀವನದ ನ್ಯಾಯವು । ಎಲೆ ಆತ್ಮ । ಈ ಜಗದ ಜೀವ । ನಿನ್ನ ದೇವ ಎಲೆ ಆತ್ಮ ॥ ಜಗವು ತಾನೇ ನೀನು ತಾನೇ ಎಲೆ ಆತ್ಮ । ಇದರ ಹಗರಣವರೀ । ಹಲವು ನೀನೆ ಎಲೆ ಆತ್ಮ ॥ 2 ॥ ಅಡ್ಡದ್ಯಾವರಾಗ ದಂತಿ ಎಲೆ ಆತ್ಮ । ಆ ಮಹಾ ದೊಡ್ಡವರ । ಕೂಡುಂಡೇನಂತಿ । ಎಲೆ ಆತ್ಮ । ಗುಡ್ಡದಷ್ಟುಗುಣವು ಸಾರ್ತಿ । ಎಲೆ ಆತ್ಮ । ಮೊಂಡ ಸೊಡ್ಡಿನೋಷ್ಟು ಸವಿಯದಿರ್ತಿ । ಎಲೆ ಆತ್ಮ ॥ 3 ॥ ಕೊಟ್ಟುಕೊಂಡಿ ಕೊಂಡು ಕೊಟ್ಟಿ । ಎಲೆ ಆತ್ಮ । ನೀನು ಹೊಟ್ಟಿ ಹೊರುವದಾಯಿತು ಹುಟ್ಟಿಎಲೆ ಆತ್ಮ ॥ ಕಟ್ಟಿದ್ದಲ್ಲ । ಬಿಟ್ಟಿದ್ದಲ್ಲ ಎಲೆ ಆತ್ಮ । ಸತ್ತು ಹುಟ್ಟು ಆಶಿ ಹೋಗಲಿಲ್ಲ । ಎಲೆ ಆತ್ಮ ॥ 4 ॥ ತನುವು ತೊಟ್ಟು । ತನುವು ವಿರೋಧ ಎಲೆ ಆತ್ಮ । ಈ ಮನವು ಬಳಸಿ । ಮನವಿಭೇದ ಎಲೆ ಆತ್ಮ ॥ ತನವು ನಿನಗೆ ನಿತ್ಯವಹುದೇ ಎಲೆ ಆತ್ಮ । ಮನವು ಘನವು । ನೆನೆಯಲನುವಾಗಿಹುದೇ ಎಲೆ ಆತ್ಮ ॥ 5 ॥ ಯತ್ರ ಜೀವ ತತ್ರ ಶಿವನೆಂದೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಎಲೆ ಆತ್ಮ । ಶತೃಮಿತೃತ್ವ ಮಾಡುತಲೆ ಬಂದಿ ಎಲೆ ಆತ್ಮ ॥ ಶತೃ ಮಿತ್ರ ದಾಗೋ ದಾಗೋ ಎಲೇ ಆತ್ಮ ಜಗಕೆ ಪುತ್ರ ಪಿತ್ರ ದಾಗೋ ಡಾಗೋ ಏಲೇ ಆತ್ಮ ॥ 6 ॥ ಸರ್ವಮಯ ಶಿವನೆಂಬೋದೆಂಬಿ ಎಲೆ ಆತ್ಮ । ಆ ಸರ್ವ ಶಿವನೆಂದ್ಹೇಗೆ ನಂಬಿ ಎಲೆ ಆತ್ಮ ॥ ಸರ್ವಸುಖವು ಬೇಡುವಲ್ಲಿ ಎಲೆ ಆತ್ಮ । ಗರ್ವ ಸರ್ವರಲ್ಲಿ ಮಾಡು ದೆಲ್ಲಿ ಎಲೆ ಆತ್ಮ ॥ 7 ॥ ಹಲವು ನೆನವು ಇರಲು ಹೀಗೆ ಎಲೆ ಆತ್ಮ । ನಿನ್ನ ನೆಲಿಯು ಕಲಿಯು ತಿಳಿಯುಪ್ಹೇಗೆ ಎಲೆ ಆತ್ಮ ॥ ನೀಲವಿನಾಶೆ ವಂದೆಯಾಗಿ ಎಲೆ ಆತ್ಮ । ಬೈಲ ಸುಲಭ ನಿರಂಕಾರ ತಾಗೆ ಎಲೆ ಆತ್ಮ ॥ 8 ॥ ಸತ್ಯ ಸದಾಚಾರ ಕೂನ ಎಲೆ ಆತ್ಮ । ನಿನಗೆ ತ್ತೆತ್ತೆವಾಗೆ ಸಮ್ಯಜ್ಞಾನ ಎಲೆ ಆತ್ಮ ॥ ನಿತ್ಯ ನಿತ್ಯ ಸಾವಧಾನ ಎಲೆ ಆತ್ಮ । ಜಗನುತ್ತೆನಾಗಿ ಇರೋಮನ ಎಲೆ ಆತ್ಮ ॥ 9 ॥ ಏಕ ಚತ್ರ ದಿಶತನವು ಎಲೆ ಆತ್ಮ । ತನ್ನ ಬೇಕು ಬೇಡೆಂಬೋದ್ಯೋಚನ ಎಲೆ ಆತ್ಮ ॥ ಏಕಮೇವನೆಂಬೆನೆನೆ ಎಲೆ ಆತ್ಮ । ನಿನ್ನ ಜೋಕೆ ಮಾಡುತಿಹುದು ಘನವು ಎಲೆ ಆತ್ಮ ॥ 10 ॥ ಯಲ್ಲಾನು ತಾನಾದನಲ್ಲೊ ಎಲೆ ಆತ್ಮ । ನೀನಿನ್ನೆಲ್ಲಿ ಭಿದ್ದರೇನೊ ಇಲ್ಲೊ ಎಲೆ ಆತ್ಮ ॥ ಅಲ್ಲೆ ಅಹುದು ಅಹುದೆ ಅಲ್ಲೊ ಯಲೆ ಆತ್ಮ । ಮಹಾಂತೊಲ್ಲಭ । ಸ್ವಾಸಂದ ಸೊಲ್ಲೊ ಎಲೆ ಆತ್ಮ ॥ 11 ॥

100ನೇ ಪದ

ರೂಪ ನಿರೂಪದೊಳಿರ್ದ ಮಾಂತನ । ರೂಪವು ತಿಳಿಯದಲೆ । ಆ ಪರ ಬ್ರಹ್ಮವೇ ತಾನಾದಾತ್ಮಗೆ । ತಾಪವು ಇನಿತಿಲ್ಲೆ ॥ ಪ ॥ ಯೋಗವು ಮಾಡನು । ಭೋಗವು ಬೇಡನು । ಯೋಗ ಭೋಗವು ಬಿಡನು ॥ ಸಾಗಿಸುವನು ಸಕಲಾಗಮ ಶಾಸ್ತ್ರವ ಮೂಕನಾಗಿರುತಿಹನು ॥ 1 ॥ ಕಾಮವು ಹಿಡಿಯನು । ನೇಮವು ನಡಿಯನು । ಕಾಮ ನೇಮವ ಬಿಡನು ॥ ತಾಮಸಗುಣದೊಳು । ಪ್ರೇಮಾಗಿ ಇರುತಿಹನು । ನಿಸ್ಸೀಮನೆನಿಸುತಿಹನು ॥ 2 ॥ ಕಾನನ ಕೂಡನು । ಮಾನವರ ಕೂಡನು । ಕಾನನ ಮಾನವರ ಬಿಡನು ॥ ಏನೇನು ಅರಿಯನು । ಕೂನವ ಮರಿಯನು । ಜಾಣನೆನಿಸುತಿಹನು ॥ 3 ॥ ಅಂದವ ಮಾಡನು । ಚಂದವ ಬೇಡನು । ಅಂದ ಚಂದವ ಬಿಡನು । ಬಂದು ಬಳಗ ತಾ ಹೊಂದಿ ಹೊಂದದೆ । ನಿಜಾನಂದದೋಳಿರುತಿಹನು ॥ 4 ॥ ನಾನೆಂದರಿಯನು । ನಿನೆಂದ್ಹೊರಿಯನು । ನಾನು ನೀನೆಂಬುದು ಬಿಡನು । ನಾನಾ ವಿನೋದದ ಮೋಹನ್ ಮಹಾಂತೇಶನು । ತಾನೆ ತಾನೆನಿಸುತಿಹನು ॥ 5 ॥

101 ನೇ ಪದ

ನಿನ್ನ ನೀ ತಿಳಿದಮೇಲೆ । ಇನ್ನೇನಿನ್ನೇನೋ ॥ ತನ್ನಂತೆ ಸರ್ವರ ಜೀವ ಮನ್ನಿಸಿ ಮೂಕಾದಮೇಲೆ । ಇನ್ನೇನಿನ್ನೇನೋ ॥ ಪ ॥ ತಾನೆ ಪೃಥ್ವಿ ಅಪು ತೇಜಾ । ತಾನೇ ವಾಯು ಆಕಾಶಾತ್ಮ ॥ ತಾನೆ ಸೂರ್ಯ ಚಂದ್ರ ತಾರ ತಾನೇ ಬ್ರಹ್ಮಾಂಡಾದ ಮೇಲೆ । ಇನ್ನೇನಿನ್ನೇನೋ ॥ 1 ॥ ತಾನೆ ಘ್ರಾಣ ಜಿಂಹೆ ನೇತ್ರ । ತಾನೆ ತ್ವಕ್ಕು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶ್ರೋತ್ರ ಹೃದಯ । ತಾನೇ ಕಾಯ ಕರಣ ಹರಣ । ತಾನೇ ಪಿಂಡಾಂಡದ ಮೇಲೆ ಇನ್ನೇನಿನ್ನೇನೋ ॥ 2 ॥ ತಾನೆ ಹೆತ್ತ ಸತ್ತ ಅತ್ತ । ತಾನೇ ನಿತ್ಯ ನುತ್ಯ ಸತ್ಯ ॥ ತಾನೇ ಅರ್ತ ಬೆರ್ತ ಮರ್ತ । ತಾನೆ ಸರ್ವನಾಡ ಮೇಲೆ । ಇನ್ನೇನಿನ್ನೇನೋ ॥ 3 ॥ ತಾನೆ ಲಕ್ಷಸಾವಿರನೂರು । ತಾನೇ ಹತ್ತೊಂಬತ್ತೆಂಟೇಳು ॥ ತಾನೇ ಆರೈದು । ನಾಲ್ಕು ಮೂರು । ತಾನೆ ಯರಡೊಂದಾದ ಮೇಲೆ । ಇನ್ನೇನಿನ್ನೇನೋ ॥ 4 ॥ ತಾನೇ ನೀನು ನೀನೆ ತಾನು । ತಾನೇ ಅಲ್ಲ । ತಾನೇ ಇಲ್ಲ । ತಾನೇ ಮಹಾಂತ । ತಾನೇ ತಾನು ಯೇನೋ ಯೇನೋಂದ್ದಾದ ಮೇಲೆ ಇನ್ನೇನಿನ್ನೇನೋ ॥5॥

102 ನೇ ಪದ

ಅಲ್ಲೆಂಬೋ ಮಾತೊಂದೆಲ್ಲಿ । ಇಲದಾಯಿತೋ ॥ಪ॥ ಕಂಗೊಳಿಸುವ । ಭುವನಂಗಳೊಳಗೆ । ಪಂಚಂಗದ್ವೋರ್ತ । ವಂದಿಲ್ಲ । ಈ ಸೊಲ್ಲ । ಸುಳ್ಳಲ್ಲ । ಹಾಂಗ್ಹಿಂಗಂಬೂದು । ಇದು ತರವಲ್ಲ ॥ 1 ॥ ನವಬ್ರಹ್ಮ ಆದದ್ದು ವಿವರವ ಭೇದಿಸೀ । ಸುವಿಧಾನದಲ್ಲಿ । ನೀ ತಿಳಿಯೋ ॥ ಸುಖತಳಿಯೋ । ಚಿತ್ತಕಳಿಯ್ಕೋ । ಅವ ಇವ । ನಾನೀನೆಂಬೋಧಳಿಯೋ ॥ 2 ॥ ಅಣುವಿನೋಳಡಗಿದ । ಅಣು ಮಹಾಂತೇಶನ । ಗಣನಿಗೆ ಬಾರದೀಘನವು । ಆ ನೆನವು ಈ ಮನವು । ಗಣಯಿಲ್ಲದಾಯಿತು । ಬಹುದಿನವು ॥ 3 ॥

103ನೇ ಪದ

ಸರ್ವರ ಸಮದೃಷ್ಠಿಸುವದೋ । ಅನಿರ್ವಾಣ । ತಾ ಕೈಬೀಸುವದೋ ॥ ಗರ್ವನಳಿದು । ಸ್ವಯಂಜ್ಯೋತಿ ತಾನಾದರೆ । ನಿರ್ವೈಲವೆ ನಿಜನೀನೆನಿಸುವದೋ ॥ಪ॥ ರೊಟ್ಟಿಯ ಪುಟ್ಟೆಂದು ಕರದಿ । ಅದುಬಟ್ಟ ನೀಯೇನೆಂದು ಅರದೀ ॥ ತೊಟ್ಟಲೊಳಗೆ ತನು । ತೊಟ್ಟಾಡು ಆತ್ಮನ । ಹುಟ್ಟಿಸಿದವನ ಹೆಸರಿಟ್ಟು ನೀಮರದೀ ॥1॥ ಹಲವು ಜನ್ಮದೊಳ್ಹೆತ್ತ ಪ್ರಾಣ । ಬಂದು ನಿಲ್ಲಲು ಕಾಲ್ಹಾರಿ । ಮುಕ್ಕುದಾಣಿ ॥ ಬಲವಗೆಡಸಿ । ಭವಕ್ಕೀಡು ಮಾಡಿದೆ ನೆಂದು । ತಿಳಿವದೆಂದಿಗೆ । ನಿನ್ನನೆಲೆ ನೀನು ಕಾಣೀ ॥2॥ ಎಲ್ಲ ಸ್ವರೂಪಕೇನಾದೀ । ಅದರಲ್ಲರುವದು । ನಿನ್ನ ಹಾದಿ । ಬಲ್ಲ ಶ್ರೀಗುರು ಮಹಾಂತೊಲ್ಲಭನಾದರೆ । ನಿಲ್ಲರೋ ಜನ್ಮೆಂದಿಗಿಲ್ಲೆಮಬಾಧಿ ॥ 3 ॥

104ನೇ ಪದ

ಲಾಲಬಿಲಾಲದಬಾಲ । ನಿಜದಾಲಯದೊಳಗನುಗಾಲ ॥ ಕಾಲ ಕರ್ಮದ । ಮೂಲವ ತಿಳಿ ಭವಜ್ಯಾಲಮಾಲವ । ಶಿವಲೀಲಸಕೀಲ ಹಹಾ ॥ಪ॥ ಅವನ ಕೈಯಾಗ ಕಾಸಿಟ್ಟು । ಮತ್ತ ಇವನಿಗೆ ಜೋಳಿಗಿ ಕೊಟ್ಟು ॥ ಅವ ಇವನಿಗೆ ಕೊಡ । ಇವ ಅವನಿಗೆ ಬಿಡ । ಅವ ಇವ । ಇವ ಅವ । ಅವ ಇವ ಆದವ ಯಾವ ಹಹ ॥1 ॥ ಅರವತ್ತಾದವುಬೊಂಬಿ ಅವಕ್ಕರುವಿಲ್ಲದಾಗದು ಡೊಂಬಿ । ಅರವ ಅರಿಯದವ । ಅರುವಿಸು । ಇರುವಿನೋಳಿರು । ತರಿಯಲರಿದು । ತನ್ನ ಶಿರವ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ದೂಗುವದು ಹಹ ॥ ಹತ್ತುವಿಗೊಂದೇ ಬೀಜ । ಅದಕ್ಹತ್ತಾದವು ಗೋಜ ॥ ಹತ್ತುವದೇ । ವಂದೇ ಹತ್ತು । ಹತ್ತೊಂದಿಲ್ಲ ಗೊತ್ತು ತಿಳಿಯೋ ಮಹಾಂತುತ್ತುಮ ನೊಳಗೇ ಹಹಾ ॥3॥

105 ನೇ ಪದ

ಅಹಹಹ ಇದುಘೇನು ಸೋಜಿಗೆ । ತಾನೆತಾನಾದ ಮೂಜಗ ॥ ಆ ಹರಿ ಬ್ರಹ್ಮರು ಬಹುಹುಟ್ಟೀಗ । ಸಾಧಿಸಿ ಕಾಣರು ಇದೇ ಈಗ ॥ ಪ ॥ ಏಸೋ ನಾಮ ಹಲ್ಲವೆಂದು ಯಿಂದು । ಪೆಸರುಗೊಂಡು ಕರಯುಲಿಕ್ಕೊಲ್ಲೆಂದು ॥ 1 ॥ ಅಷ್ಟು ರೂಪವಾಗಿರುವದು ತಾನು । ದೃಷ್ಟಿ ಇಟ್ಟುರಿಷ್ಟಿಲ್ಲಕೂನ ॥ 2 ॥ ಕಾಲಕಾಲ ಮಾಡಿದ ಫಲಪ್ರವಾರ । ನಾಲಿಗಿ ಕಾಣದು ಕೊನಿಸವಿಬೆವರ ॥ 3 ॥ ಭವವಾದವ । ತಾನಲ್ಲ ಯಲ್ಲ । ಅವ ಆಗದೆ ಆಗವ ಯಾವಿಲ್ಲ ॥4॥ ಸರ್ವಶೂನ್ಯ ಮಹಾಂತೇಶ ಈಶ ॥ ಸರ್ವತಾನೆ ಆಕಾಶಕೇಶ ॥ 5 ॥

106 ನೇ ಪದ

ಭಾವರುದ್ರಕ್ಕಿನೇ । ನಿರ್ಲಕ್ಷವೇ ಲಕ್ಷಯಿಕ್ಕೊ । ಮಹಾಪಕ್ಕೊ ॥ ಸಾವಿನ ಸಾವದು ಸಾವಾಧಾನದೊಳಕ್ಕೊ ದಕ್ಕೊ । ಬಿಡುಸೊಕ್ಕೊ ॥ ಪ ॥ ನಿರ್ವೈಲದೆ ನಿಜ ಹುಸಿಯಸ್ವಯಂಭೊ । ಸರ್ವಜಗವು ತಾನೆ ನಾನೆನಾದ್ವೈ ಸ್ಮರಿಸಲು । ಜೀವ ತನವು ಕರಣೆಂದ್ರಿಯಿತ್ತು ಬಹುಚಿತ್ತು ॥ 1 ॥ ರೂಪಿನನೆರಳು ನಿರೂಪಸ್ವರೂಪ । ನೀ ಪರೀಕ್ಷಿಸು ತನ್ನೋಳದೆ । ರೂಪನಿರೂಪದನೆರಳೊ ಈ ಹುರಳೊ ॥ ತಿಳಿಯೋ ಸುಖತಳಿಯೋ ॥ 2 ॥ ಎಲ್ಲಬಲ್ಲಾದರು ಅರುಬಲ್ಲದ್ದೇನದು । ಬಲ್ಲವರ್ಡ್ಥೇಳನು । ಭವವದೆ ॥ ಸೊಲ್ಲಲರಿದು ನಿರ್ವಾಚಿ । ಮಹಾಂತಪುರದೊಡೆಯ । ಯೆಂದು ಮಡಿಯಾ ॥ 3 ॥

107 ನೇ ಪದ

ಅಷ್ಟು ತಾಸುಳ್ಳಲ್ಲ । ಒಂದಿಷ್ಟು ತಾಕರೇಯಿಲ್ಲ । ಅಷ್ಟದಶಪುರಾಣ ಶೃತಿ ಸ್ಮೃತಿದೃಷ್ಟ ಸೋರುವದೊಂದಿಲ್ಲ ॥ ಪ ॥ ಇಲ್ಲದ್ದೇನೊಂದಾಯಿತು । ಅದು ಯಲ್ಲ ತಾನೆ ಎನಿಸಿತ್ತು ॥ ಹೊಲ್ಲೊಳ್ಳೆಂಬೊದೆಲ್ಲಿತ್ತು । ಅದು ಇಲ್ಲದಿದ್ದಿದ್ದೆನಿಸಿತ್ತು ॥ 1 ॥ ಸತ್ತಾದರೇ । ತಾ ಚಿತ್ತಾಯಿತು । ಈ ಚಿತ್ತತಾಗತ್ತಲ್ವಾಯಿತು । ಗೊತ್ತು ತಿಳಿದರೆ ನಂದಾಯಿತು ॥ ನೀ ಸತ್ತೋದರೆ ತಾ ಸತ್ತೋಯಿತು ॥ 2 ॥ ಬ್ರಹ್ಮತಾ ತಾನಂಬುದಕೆ । ಈ ಹಮ್ಮುಗಿಮ್ಮುಏನದಕೆ । ಸ್ವಮ್ಮ ಅಳಳಳಳಳಾದುದಕೆ । ನೀವು ಮ್ಮಳಿಸುವದಿನ್ನೇನಿದಕೆ ॥ 3 ॥ ತಾನೆತಾನೆ ಆದಲ್ಲಿ । ನಾನು ನೀನು ಯಾವಲ್ಲಿ ತಾನೇ ನಾಯಿತಂದ್ರೆನಲ್ಲಿ । ಕೂನೇಳುವದೇನಿಲ್ಲದ್ದಿಲ್ಲ ॥ 4 ॥ ಕಡಕೋಳ ಗುಡ್ಡದ ಬಹುಕಾಸ । ಅಲ್ಲಿ ಸಡಗರ ಮಹಾಂತಪುರವಾಸ ॥ ನುಡಿನುಡಿವಾಶ್ರಯಸದ ತ್ರಾಸ । ಅದು ಪಡಕೊಂಬುವರಿಗೆ ಕೈಲಾಸ ॥ 5 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

108 ನೇ ಪದ

ಮಾಡೊ ನಿದ್ರಿಯು ಶಶಿಮೌಳಿ । ತೂಗುವೆವು । ಉಯ್ಯಾಲೇ । ಆಡುವೆವು ಆನಂದಸ್ವಯಲೀಲೇ । ನಾ ತೂಗುವೆ ಬಾಲೆ ॥ ಹಾಡುವೇ ಆನಂದಸ್ವಯಲೀಲೇ । ಅಳಳಳೆ ಭವಮಾಲೇ ॥ ಪ ॥ ಏನೊ ತಾನೆಂಬೊದೊಂದಾಗಿ । ಒಂದೇ ಮೂರಾಗಿ । ನಾನಾವಿಪರೀತ ರೂಪಾಗೀ । ಹೋಯಿತು ಬೈಲಾಗಿ ॥ 1 ॥ ಮಾಯವಳಿಯೆಂಬೋ ಡಾಮಾಯಾ । ತಿಳಿಯದೊ ಈ ನ್ಯಾಯ ॥ ಆಯಾತಾಗದು । ಆಸಾಯ ಶ್ರೀ ಗುರು ರಾಯಾ ॥ 2 ॥ ಪಾಪಪುಣ್ಯಗಳೆಂಬೆರಡು । ಅವು ಯಾತಕ್ಕೆಹುರಡೊ ॥ ತಾಪತ್ರ್ಯಲ್ಲಾಪ ತಾಬರಡೊ । ಕುಂಬಾರನತರಡೊ ॥ 3 ॥ ಸ್ಥಾಣುಚೋರೆಂಬೋದ ಮಾತು । ಕಣ್ಣಮುಂದಾತು ॥ ಕಾಣದ್ಯಾಂಗ್ಹೋಯಿತು ಬಿತ್ತು । ಅದು ಏನೊ ಧಾತು ॥ 4 ॥ ಪಾರಿಶೇಷದ ವಿಚಾರ । ಅರಿಯೋ ನೀಪೂರ ॥ ಕಾರಣ ಕಾರಣಿಕಾರ । ತಾನೆ ಸಂಸಾರ ॥ 5 ॥ ಕಾಕತಾಳ ನ್ಯಾಯವೆಂದು । ಓದುವ ವೇದಿಂದು ॥ ಬೇಕುಬೇಡೆಂಬೊದಾದೊಂದು । ತಾನೆತಾನೊಂದು ॥ 6 ॥ ದಹಬ್ಬಿತ್ತೊವ್ವೆನೊರೆಗು ರುಳೆಲ್ಲ । ಅಪರೂಪಿನ ಸೊಲ್ಲ ॥ ಮಹಾಂತಪುರ ಮಹಾಂತ । ತಾನಲ್ಲ ನಾನಿದ್ದೆ ಇಲ್ಲ ॥ 7 ॥

109 ನೇ ಪದ

ಶೂನ್ಯಾಂಗ ಶರಣನ ಷಟ್‌ಸ್ಥಲ ನಿಜಲಿಂಗೈಕ್ಯದ ಪದ

ಎಲೊ ಎಲೊ ಶಿವಮಂತ್ರವ ನುಡಿಯೋ । ನಿನ್ನೊಳಿದೊಲಿಸುವ ಸಾಧನ ಪಡಿಯೋ ॥ ಕುಲಛಲ ಭವಬಳ್ಳಿಯ ಕುಡಿಯೋ । ನಿನ್ನ ನೆಲಿ ತಿಳಿಸುವ ಗುರುವಿನ ಹಿಡಿಯೋ ॥ ಪ ॥ ಈ ಲೋಕದ ಸುಖ ಸಂಸಾರ ತಾನಾಲೋಕಕ್ಕೆ ಆಯಿತು ದೂರ ॥ ಆ ಲೋಕದ ಸುಖದಾಚಾರ । ಅದು ಈ ಲೋಕದೊಳಗ ಆದ ಬಹುಘೋರ ॥ 1 ॥ ಒಂದರ ಸಂಗಕ್ಕೊಂದಿಲ್ಲ । ತನಕಂದಿಸುವದು ಕಡಿಮೊದಲಲಿಲ್ಲ ॥ ಬಂಧಿಸುವದು ಭವದೊಳಗೆಲ್ಲ । ಅದು ಒಂದು ಬಿಟ್ಟರೊಂದೊಂದಿಲ್ಲ ॥ 2 ॥ ತ್ಯಾಗದಿಂದ ತಾ ಶಿವಯೋಗ । ಆ ಯೋಗದಿಂದೆ ಇಂದ್ರನ ಭೋಗ ಭೋಗದೊಳಗಿಲ್ಲ ರಾಗ । ಆ ರಾಗ ದೊಳಗೆ ಆದ ಭವರೋಗ ॥ 3 ॥ ಒಂದಿದ್ದರೆ ಒಂದಿರಲಿಲ್ಲ । ತಾ ಹಿಂದೆಮಾಡಿದ್ದಾಗುವದಲ್ಲ ॥ ಮುಂದೆ ಹುಡುಕುವದು ಸಿಗಲಿಲ್ಲ । ಹಿಂದೆ ಮುಂದೆಂದರೆ ಸಂದುಳಿತಲ್ಲ ॥ 4 ॥ ಎರಡೊಂದಾಗುವ ತತ್ಸಂಗ । ನೀ ತುರ್ತು ಮಾಡಿಕೊಳೆಲೊ ಮಂಗ ॥ ಎರಡೆರಡಾದುದು ಮಹದಂಗ । ಆ ಎರಡೊಂದಾಗುದು ನಿಜಲಿಂಗ ॥ 5 ॥ ಹತ್ತರೊಳಗೆ ವಂದ್ಹನ್ನೊಂದು । ನೀ ಮತ್ತುಡುಕವದ್ಯಾತಕೆ ಸಂದು ॥ ಚಿತ್ತಿನಲಿ ಚಿತ್ತಿನಹೊಂದು । ಅದು ಸುತ್ತಿ ಸುತ್ತಿ ಸುಳಿವದು ಪೊಂದು ॥ 6 ॥ ಬುಡನಡು ಕೊನಿ ಲಕ್ಷಪರೋಕ್ಷ । ನೀ ಬಿಡದಿರು ನಡಿನುಡಿ ಇದೇ ಶೀಕ್ಷಾ ಅಡರಡಿಸುವ ನಿರ್ವಾಣದೀಕ್ಷ । ಆ ಮೃಡ ಮಹಾಂತನು ಮಾಡುವ ಮೋಕ್ಷ ॥ 7 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

110 ನೇ ಪದ

ಈ ಶ್ರೀ ಗುರುವಿನ ವಲಿಸುವ ಸಾಧನ । ಸುಮ್ಮನಲ್ಲ । ತ್ರಿಸ್ತ್ರಿ ಶ್ರೀಸುತ ಸಂಪದ ಸಾಕಾಗದ ಭವವುಳ್ಳವಗೆಂದೆಂದಿಗಿಲ್ಲ ॥ ಪ ॥ ಸೂಳಿ ಬೋಳಿ ಯಂಜಲ ತಿಂದ । ಚೋಳಂಬಲಿ ಬಯಿಸುಣ್ಣಲಿ ಬಂದ ॥ ಕಾಳುರಗಕಾರಿಕಿ ಬಹಳ ತ್ವಂದ । ಕೂಳಿಗೆ ಕೂಸಿನ ಕೊಯಿ ಕೊಯಿಯೆಂದ ॥ 1 ॥ ಬಲ್ಲಿದ ಬಾಲೆಯು ಬಂದೆರೆ ಬೈದ । ಒಲ್ಲೆಂಬೆನುತೊಲಿಸಲಿ ಭವನಾದ ॥ ಕೊಲ್ಲಲುಳವ ಕೊಡಲಿಕೊರಳಾದ । ಸಿಲ್ಲದ ಸತಿ ಸಮರ ಸಂಭ್ರವಿಸಿದ ॥ 2 ॥ ಸಿಂಧು ಮರಳನ ಓಡಿಸಿ ನಿಂದ । ಬಂಧುವಿನೊಳು ನಂಬಿಗಿ ತೊತ್ತೆಂದ । ಸುಂದರ ಮುತ್ತಿನ ಮುಡಿಕ್ಕೋಯಿತಂದ । ತಂದೆ ಮಹಾಂತ ಇಂತಾನಂದ ॥ 3 ॥

111 ನೇ ಪದ

ಗುರುವಿನ ವಲಿಸುವ ತನಕ । ಭವಪರಿಹರಿಸನು ತಾ ಭೈನಕ । ಜರ ನಾಚಿಲಿ ನಕ್ಕ ।ಬಿಡಲರಿಯದು ಹೊಲಿಗಲಿಸುವ ತನಕ ॥ ಪ ॥ ಮಗನಿಗೆ ಮುದದಿ ಮಾರಿ । ಮನ್ಹೆಂಡತಿ ಆದಳು ಜ್ಯಾರಿ । ಮಗಳೆರದನ್ಯಗೆ ದಾರಿ ।ನೀನಗಿದುಗಿದರ್ಥವುಗಾರಿ । ಸೊಗಸಿನ ಸತಿ ನಡದಾಳೋ ಮನಮೀರಿ । ಜಗದೊಳಗಾದಿ ಎಲೊ ಮಹಾವಿಕಾರಿ ॥ 1 ॥ ಹಲವು ವ್ಯಾಪರವಮಾಡಿ । ಒಳ್ಳೆ ಬಲುಗೆಲುವಿಗೆ ಹೋರಾಡಿ । ಬಲವೆಲ್ಲ ಹೋಯಿತು ಜ್ಯಾಡಿ । ನಿನ್ನಮೈಯಲವು ವಬ್ಬೆಗೂಡಿ ॥ ಚಲೋ ಆಗದು ದೊಡ್ಡದೇವರಬೇಡಿ । ನೆಲೆಗಾಣದೆ ಹೋಗುವಿಯಲೆಕೋಡಿ ॥ 2 ॥ ಹಿರಿತನಮಾಡಲಿಕ್ಕಾಗಿ । ಯಮನರಕದ ಬಾಯಿಗ್ಹೋಗಿ । ತಿರಗಿದಿ ನೀ ತಲೆತಾಗಿ । ನಿನ್ನಗರವಿಕಲ್ಲೆಲೊ ಭವರೋಗಿ । ಮೆರೆಯುವ ಮಹಾಂತನ ನಿಜ ಅನುಬಾವಕೂಗಿ । ಉರಬು ರಹೇಳುವೇ ಪರಹಿತನಾಗೀ ॥ 3 ॥

112 ನೇ ಪದ

ಒಲಿಯದ ಶ್ರೀಗುರುವಿನ । ಒಲಿಸುವದೇನಾಗಾದ । ಒಲಿಯಲು ಬಲು ಹೌರಾಳ ॥ ಕಲಕದೆ ಕನಸಿನೋಳಾದರೆ । ಮನಮೊದಲಾಗಬೇಕು ನೀ ಬಹಳ ನಿರಾಳ ॥ಪ॥ ತನ್ನ ರ್ಚಿಸು ಅಭಿಲಾಷೆದೊಳಿರುತಿರೇ । ಬಾಣನ ಬಾಗಿಲಕಾಯಿದ ಭಿನ್ನಿಲ್ಲದೇ। ನೂಲಿಚಂದಯ್ಯನ ಮನಿಹುಲ್ಹೊರಿ ಹೊರುವವನಾದ । ಹೊನ್ನಯ್ಯನು ಹೊತ್ತಾಕುವ ದೂರಿನ ನೀರಿಗೆ ತಾನೆದರ್ಹೋದ । ಕನ್ನಯ್ಯನು ಕೆರುಗಾಲಿಲಿ ವೊದಿಯಲು । ಯಳ್ಳನೊಷ್ಟಿಲ್ಲವು ಕ್ರೋಧ ॥ 1 ॥ ದೊರಿತನದಲಿ ತನ್ನ ಮರದೊಕ್ಕಲಿಗ್ಯಾಗ । ಸ್ಥಿರವಾಗಿರೆಂತ್ಹೋದ । ಕುರುಡಗೆ ಕುರುಡ್ಹೆಂಡತಿ ಕುರುಡೆತ್ತಿನ ಗಾಣ ಹೊಡೆವವನಾದ । ಹರುಷದಿ ಬಡವಿಯ ಮಗನುಣಿಸಲು । ಕಳುಹಿ ಎಳಿಗರುಗಳು ಕಾಯಿದ ॥ ತ್ವರಿತದಿ ಪರಿತಂದೋದನದೊಳುಗುಳಲು । ತರುಣಿ ಯೋಳಿಲ್ಲವು ಭೇದ ॥ 2 ॥ ಮದನವಿಕಾರದೊಳಾದರೇ । ನೋಡುತಸೂಳಿಯ ಮನಿಗೋಡ್ಹೋದ । ಚದುರ ಕವೀಶ್ವರ ನಾಚಿಗೆಗೊಂಡರೆ । ಯೋಚಿಸಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹರುಷಿತನಾದ ॥ ಹೆದರರೆ ಸೂತಕ । ಸೀರಿ ಶಿರದಮೇಲೇರಿಸಿದರ್‍ಯಾರಂದ ಹಾಸಾದ । ಸದಮಲಗುರು ಗುಡ್ಡದ ಮಹಾಂತೇಶ್ವರ । ಅವರಿಗೆ ಅವರಂತಾದ ॥ 3 ॥

113 ನೇ ಪದ

ಭವಗೆಲಿಸುವ ಗುರುವಿನ ಕೂಡೊ । ಈ ಭುವನರಜನರ ಸಹವಾಸ ಬೇಡೋ । ಎಲೋ ಭವಗೆಲಿಸುವ ಗುರುವಿನ ಕೂಡೊ ॥ ಪ ॥ ನಾ ಎಂಬುವದು ಮೊದಲಳಿಯೋ । ಎಲೊ ಕೋಹಂ ಎಂಬುವದು ನೀ ತಿಳಿಯೋ । ಮತ್ತೆಸೋಹಂ ಎಂಬುವದು । ಶಿವ ಕಳೆಯೋ । ನಾಸೋಹಂ ಎಂಬುವದು । ಅಚ್ಚುಳಿಯೋ ಎಲೋ ॥ 1 ॥ ಆಶ ಪಾಶದಕಟ್ಟು ಜಲ್ದಿ ಹರಿಯೋ । ಎಲೋ ತ್ರಾಸಿನೊ ಸರತನೋ ಗುಣಚರಿಯೋ ॥ ಆ ಈಶನಾಡುವ ಲೀಲ । ಬಹುಪರಿಯೋ ಸುಖ ಸೂಸದೆ ಸುರಿದುಂಡು । ಸಲೆ ಮೆರೆಯೋ ಎಲೊ ॥ 2 ॥ ತೊಡಕುವ ತೊಡಕಿನ ತೊಡಕುಡಿಯೋ । ಎಲೋ ಬುಡ ನಡುಕಡಿಗಳು । ಕಂಡ್ಹಿಡಿಯೋ ॥ ನಿನ್ನೊಳಡ ಲೊಳಡಗಿದ ಒಡೆಯನಪಡೆಯೋ । ಮತ್ತೇ ಮೃಡಮಹಾಂತೇಶನಡಿ ಮಡಿಯೋ । ಯಲೋ ॥ 3 ॥

114 ನೇ ಪದ

ಆ ಪರಬ್ರಹ್ಮವು ನೋಡೊ । ನಿಜರೂಪದೊಳಗೆ ಲೋಲ್ಯಾಡೋ । ಪಾಪವು ಪುಣ್ಯವು ಝೋಡೊ । ಜಗದ್ಯಾಪಾರವು ಬಹುಕೇಡೊ ॥ ಪ ॥ ಕಾಣುದು ಕಾಣುದು ಕಾಣೋ । ಕಣ್ಣಿಗಿ ಕಾಣುದು ಕಾಣುದು ಜ್ಯಾಣೊ ॥ ಪ್ರಾಣಪ್ರಪಂಚಕೆ ತ್ರಾಣೋ ಅಣುರೇಣು ತ್ರಣಕಾಷ್ಟಾನೋ ॥ 1 ॥ ಕಂಡದ್ದು ಕೂಡ್ರಿಸಿಕೊಂಡು । ಬಹು ಬಂಡು ಮಾಡುತಿ ಹೊಯಿಕೊಂಡು ॥ ಪಿಂಡುಳಕೊಳಲರಿ ಶೆಂಡು । ನಿಂದುಂಡುದ್ದೇನ ಹಂಡು ॥ 2 ॥ ಜೀವ ಮನವು ತನು ತಾಯೋ । ನಿನ್ನಗಾವದು ಇದರೋಳು ವಾಯೋ ॥ ಭಾವಿಸುವ ನ್ಯಾಯ ನ್ಯಾಯೋ । ಮಹಾದೇವ ಮಹಾಂತನೇ ಕಾಯೋ ॥ 3 ॥

115 ನೇ ಪದ

ಹ್ಯಾಂಗ ಭ್ರಾಂತಿನೀಗುತಿ । ನೀ ಹ್ಯಾಂಗೆ ಮಹಾಂತನಾಗುತಿ ॥ ಹಾಂಗೆ ಹಿಂಗೆ ಹೊತ್ತುಗಳದು । ಹಿಂಗೆ ನೀ ಸತ್ಹೋಗುತಿ ॥ ಪ ॥ ವೇದಶಾಸ್ತ್ರ ಪುರಾಣೋಕ್ತಿ । ಓದಿಹೇಳಿದರ ಹ್ಯಾಗೆಮುಕ್ತಿ । ವೇದ ಶಾಸ್ತ್ರ ಪುರಾಣಾಗಮ । ಆದರಾದಿ ಆಗದೇನಾದಿ ॥ 1 ॥ ಭಕುತಿಲಿಂದೆ ಮುಕುತಿಯೆಂಬ । ಕುಕುತಿ ನೀತಿ ಕೇಳಬಾರದು । ಶಕುತಿ ಆತ್ಮನ ಸ್ವಾತ್ಮನರಿಯದೆ । ಭಕುತಿ ಯಾರದು । ಮುಕತಿ ಯಾರದು ॥ 2 ॥ ಶಿವ ಶಿವಯೆಂಬೊ ಮಂತ್ರ ಸ್ಮರಣೆ । ಭವ ಭವಾಬ್ಧಿ । ದಾಟೋ ತರುಣೆ ॥ ಶಿವನ ನೆನಿಯುವ ನೆವನಗಳ್ಳ । ಇವನಿಗ್ಯಾಕೊ ಮಾಹಾಂತ ಸೊಲ್ಲ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

116 ನೇ ಪದ

ಎಲೊ ಎಲೊ ಎಲೋ ಮಾನವಾ । ತ್ರಿಜಗದೊಳು ನಿನ್ನ ಗಿನ್ಯಾವನುವ ॥ ಸಲ್ಲಹದು ಸಲ್ಲದು ಹೊಲ್ಲೊಳ್ಳೆಂಬದು । ಹಿತ ಅಹಿತವನ್ನರಿ ನಿನ್ನನುವ ॥ ಪ ॥ ಸಾಯಲು ನೀ ಬಂದೀ । ಈ ಮಂದಿಗೆ ಸ್ಥಾಯಲರ್‍ಯಾಕಂದೀ ॥ ಕೈಯಿಕಟ್ಟಿತುಸು ಬಾಯಿಗೆ ಬಾಳ್ಹಾಸು ।ಮಾಯ್ಥುತವಳಿಯದೇ ಯಾರದ್ಯಾರತಿಂದಿ ॥ 1 ॥ ಹಡದವರ ಹರಕಿಕಳದಿ । ಆ ತಂದಿಯನಡುದೆಲಿಯ ಮಡು ಅಳದಿ ॥ ಷಡ್‌ರಸ ಸವಿಹಾಲು ಕುಡಿಡು । ತಿಪ್ಪಿಯಪಾಲು ತುಡುಗ ನೀಮಾಡಿ ನೀನೆ ಹಳದೀ ॥ 2 ॥ ನೋವ ನಾನೊಲ್ಲೆಂದೀ । ಆದಾಗದ ದಾವತಿ ಬಾರದಂದಿ ॥ ಮಾವಹುಣ್ಣುಗುರಿಕ್ಕಿ । ಬೇವಸದೊಳು ಸಿಕ್ಕೀ ದೇವಮಹಾಂತ ಯಂಥವನಂದಿ ॥ 3 ॥

117 ನೇ ಪದ

ದಾವದಾದೋ ನಿಜದಾವದಾದೋ ॥ ನಿನ್ನ ದಾವತಿ ತೀರದು । ಸಾವುದು ಸನೆಬೀತು ॥ ಪ ॥ ಅವನಿವನೆಂಬುದ್ದಿಯು । ಅವನ್ಯಾರೋ ಇವನ್ಯಾರೊ । ಅವನ ಹೆಸರೇನು । ಮತ್ತಿವನ್ಹೆಸರೇನು ॥ ರವಿಕಾಣದ ಮುನ್ನ ಕವಿಕಂಡನೆನಿಸಿದೀ ।ವಿವರವ ಹೇಳದ ಹೇವೆಯಾಕೊಗೋಡೆನಣ್ಣಾ ॥ 1 ॥ ಆದುದೆಲ್ಲವು ಬಲ್ಲಿ । ಅದು ಆದುದ್ದರಿವಲ್ಲಿ । ವೇದ ಇನ್ನೇನೊ ನಿನ್ನದು ಇನ್ನೇನೊ ॥ ಆದಿ ಅನಾದಿಯ ಭೇದವ ತಿಳಿಯದೆ । ಸಾದುಯಂತಾದೀ ಸದ್ಭಕ್ತ ನೀ ಹ್ಯಾಂಗಾದಿ ॥ 2 ॥ ಅಲ್ಲ ಹೌದೆಂಬೆರಡಿಲ್ಲಂದರೇನಂದೀ । ಅಲ್ಲಂಗೊಡೆನಾದೆ । ಹೌದೇರೇ ಹೌದು ॥ ಸೊಲ್ಲದ ಬಿಡೆ ಮಹಾಂತತೊಲ್ಲಭನಾಳು ನಾ । ಎಲ್ಲ ಲೋಕದೊಳಿವ ಇಲ್ಲದವಂದ್ರನು ॥ 3 ॥

118 ನೇ ಪದ

ಭಲೆರೆ ಭಲೆರೆ ಭಲೆಬ್ರಹ್ಮಾಂಡೇ । ನಿನ್ನ ನೆಲೆಕಲೆ ತಿಳಿಯದೆ ಪಿಂಡಾಂಡೆ ॥ ಪ ॥ ಸಾಧುಸಂಗವೇ ವಾಹ್ವ । ಓದು ಅನುಭಾವೇ ವಾಹ್ವ । ಭೋಧ ಶ್ರೀಮಹಾಂತನ ವಚನೊಂದು ವಾಹ್ವ ॥ 1 ॥ ಚಿಂತಿಗೆಡುವದೊಂದೊಹ್ವಾ । ಸಂತರಾಗುವದು ವಾಹ್ವ ॥ ಅಂತರ ಹುಡುಕುವ ಮಹಾಂತರು ವಾಹ್ವ ॥ 2 ॥ ಅರವು ಮರವು ದೊಂದೊಹ್ವ । ಕಿರಿಯು ಮೆರೆವುದೊಂದೊಹ್ವಾ ॥ ಮೆರೆಯುವ ಮಹಾಂತನ ಮರವುದೊಂದೊಹ್ವಾ ॥ 3 ॥

119 ನೇ ಪದ

ದಾವದು ನಿನಗಿದು ಬೇಕವ್ವ । ಈ ದಾವುತಿ ನನಗಿದು ಸಾಕವ್ವ । ತಾವುದು ಈವುದು ಕಾವುದು ಕೌವುದು । ಬಾಹುದು ಹೋಹುದು ಯಾಕವ್ವ ॥ ಪ ॥ ಒಂದಾದರ ಬಹುಚಂದವ್ವ । ಅದು ಒಂದರೋಳೊಂದೊಂದ್ಹವ್ವ ॥ ಮುಂದೆ ಉಣುವದು । ಹಿಂದೆ ಪಿಣೆವದು । ಎಂದಿಗೆ ನೀಗುವದಲ್ಲವ್ವ ॥ 1 ॥ ಪುಣ್ಯಾತ್ಮನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS
LIBRARY
Jangamwadi Math, Varanasi
ACC No. 88014

ದೇಹಾ ಧಣಿದವ್ವ। ಅವನ ತುಣ್ಯಾರ್ಯೆರಿಗ್ಗೆ ಮಣಿದವ್ವ॥ ಪುಣ್ಯನಾಗುವದು । ಗಣ್ಯನೀಗುವದು । ಬಣ್ಣತನ ಇನ್ನೇನವ್ವ ॥ 2 ॥ ಹೊಲದುಕೊಳ್ಳೆ ಬಣ್ಣವ್ವ । ಆದರಲ್ಲುರಳಿಡು ಕಣ್ಣವ್ವ ॥ ಎಲ್ಲಿ ಆಗುವದು ಅಲ್ಲೆ ಹೋಗುವದು । ಎಲ್ಲ ಮಹಾಂತ ನೀಯಿಲ್ಲೆವ್ವ ॥ 3 ॥

120 ನೇ ಪದ

ಆ ಪರಬ್ರಹ್ಮವೇ ತಾ ನಾನಾದ । ನನ್ನಗೆ ನೀ ಭವದಾದ ॥ ರೂಪಿದು ಅಪರೂಪ ಆದಮೇಲೆ । ಈ ಪರಿ ಆಡುದೇನಗ್ದಾದ॥ಪ॥ ಇಲ್ಲದ್ದೊಂದು ಅಣುಮಾತ್ರವಾಗಿ ತಾ। ಇದ್ದದ್ದಾಯಿತು ವಿನೋದ ॥ ಇಲ್ಲೆಂಬುದು ತಾನಿದ್ದುದ್ದಾದ ಮೇಲೆ ಇಲ್ಲಾಗುವದೇನಗಾದ ॥ 1 ॥ ಇಲ್ಲೆಂಬ ನಿಃಕಲ । ನಿಜತತ್ವವು ನಾ ಬಲ್ಲೆಂಬುದು ವಿವಾದ ॥ ಎಲ್ಲೆಲ್ಲೆಂಬುದು ಒಲ್ಲೆನೆಂಭ್ರಮೆ । ತನ್ನಲ್ಲಾಗುವದೇನಗಾದ ॥ 2 ॥ ಚಿತ್ತು ಸತ್ತಿನಲ್ಲೆ ಹೆತ್ತ ಮಹಾಂತನು ತಾ। ನನ್ನಲ್ಲೇನಾದ ವಿಭೇದ । ಹೆತ್ತಾತ್ಮನೇ ತ್ತಾ ಚಿತ್ತೈಸಿದರೆ ನಾ । ಸತ್ತು ಹೋಗುವದೇನಾಗಾದ ॥ 3 ॥

121 ನೇ ಪದ

ದಾವದೊ ಪರಬ್ರಹ್ಮ। ದಾವಭಾವಾದದ್ದು॥ ದಾವನಿದ್ದವ ಬಲ್ಲನೆಲೋ ॥ ಪ ॥ ನಿರ್ವೈಲವೆ ನೆನವಿನ ಮಂತ್ರದಿಂದಾದ । ಸರ್ವ ಜಗವು ನಾನೀನೆಂಬುವದೇನೋ ॥ ನಿರ್ವೈಲಿಗೆ ನೆನ ನಿರ್ವಹಿಸಿದವನ್ಯಾವ । ನಿರ್ವೈಲೆ ನಿಜವಸ್ತುಯೆಂಬುವದೇನೋ ॥ 1 ॥ ಏನೇನು ಇಲ್ಲದೆ । ತಾನೇ ತಾನಾದವ । ಏನಂದನೋ । ಸುಳ್ಳೆಂತೆಂದನೋ ॥ ಸ್ವಾನುಭಾವದಿ ಸಂಧಾನವ ತಿಳಿ ನಿಜ । ತಾನ ಹೌದೆಂಬೆರಡೆನ್ನುವನೋ ॥ 2 ॥ ಎಲ್ಲಿ ನೋಡಲು ಮಹಾಂತಲ್ಲದಿಲ್ಲೆಂಬುವ । ಬಲ್ಲಾಗಮವು । ತಾವ್ಯಾವಪ್ಪುನೋ ॥ ಸೊಲ್ಲಲಾಗದು ಸುಮ್ಮನಲ್ಲಪ್ಪ। ಸಮಜೀಸರಿಯಲ್ಲಪ್ಪ ತಾನೆ ನಿಲ್ಲಪ್ಪನೋ ॥ 3 ॥

122 ನೇ ಪದ

ನಿಜಲೀಲದ ಪದ

ಅಲಲಲಲಲೇನಿದು ಅಪೂರ್ವ। ಮಹಾಮಹಾಂತ ನಿನ್ನನಿಜನಿಲವು ॥ ನೆಲ ಜಲ ಅನಿಲಾ ನೀಲಾಕಾಶಾತ್ಮ । ರವಿಶಶಿತನು ತಾನೇ ಹಲವು ॥ ಪ ॥ ಅವಲದೋಳನಾದಿ ಅನಾಮಬೀಜ । ನಿರೂಪಂಮರ ನಿಃಕ್ರಿಯಕಾಯಿ ॥ ಅವಯದಿ ಸ್ವಯಂಭು ಸತ್ಕಳೇ ಸುನಾದ । ಬಿಂದು ಬಹು ಬಿತ್ತುವಿನ ಹೆತ್ತಾಯಿ ॥ 1 ॥ ಇಲ್ಲದ ನೆನವಿನ ಬಯಲಾದಾತ್ಮಣು। ಮಹಾತ್ಮವು ತಾನೇ ಬಹುರೂಪಾಗಿ ॥ ಅಲ್ಲೆಲ್ಲಿಗೆ ಭ್ರಮೆಗೊಳಿಸಿ ನೀ ಸಿಗದಿರು ಬಿಡಬ್ಯಾಡೆಂಬುವದು ಮೇಲಾಗಿ ॥ 2 ॥ ಬಂದರು ನೆನವಿನೊಳನಂತರೂಪ । ಒಂದುರೂಪಿಗಗಣಿತ ನೆನವು ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಿಂದಮ್ಮುಂದಿಡು। ಯರಡರಡಿ ವಂದಂಗಕ್ಕೆ। ದಾವೆದ್ಧಕಾದ ಹಿರಿಕಿರಿತನವು ॥ 3 ॥ ಭವಿ ಭುವನೆಯರೇ ಪ್ರಭು ತ್ವಾನಲ್ಲೆಂದಾನು । ತಾನಲ್ಲನೇ । ಮಾಯಾ ಹ್ಯಾಂಗೋಗುವದೋ ಆ ಭವಭವೆಯಂಭಭಿಪ್ರಾಯವ ತಿಳಿಯಲು । ಸರ್ವವು ಖರೆಹ್ಯಾಂಗಿಹದೋ ॥ 4 ॥ ಅಲ್ಲನ ಗುರುವಿನ ಗುರುವಿಲ್ಲಾನ । ತಾನಲ್ಲ ತಮ್ಮಪ್ಪಲ್ಲ ॥ ಎಲ್ಲ ಮಹಾಂತ ಮಹಾಂತ ನಮೊ ನಮೊ ನಾನಿದ್ದಿಲ್ಲ ನೀನಿದ್ದಿಲ್ಲ ॥ 5 ॥

123 ನೇ ಪದ

ನಿಜಲೀಲ ಅನುಭಾವದ ಪದ

ಭಲೆರೆಭಲೆರೆ ಭಲೆ ಶ್ರೀ ಗುರುವೇ ನಿನ್ನ ಒಲುಮೆಯ ನಾನಿನ್ನೇನೋರುವೇ । ಹಲವು ಎಲ್ಲವು ತನ್ನಿರುವೇ । ಈ ನೆಲೆ ಅರುಹಿದಿ ಸುಖಸಾಗರವೇ ॥ ಪ ॥ ಇಲ್ಲೆನಿಸಿದ ನಿರ್ವೈಲಾತ್ಮ। ತಾನಿಲ್ಲದಿರ್ದ ಮಹಾಬಯಲಾತ್ಮ ॥ ಮೆಲ್ಲ ಮೆಲ್ಲನೆ ಸತ್ಯಾತ್ಮ। ತನ್ನಲ್ಲಿ ಬೆಳದದ್ದು ಚಿತ್ತಾತ್ಮ ॥ 1 ॥ ನೆನವಿನೊಳಗೆ ರೂಪಿಸಿ ಮಾಯಾ । ತನ್ನನುವರಿಯದೆ ತೆರೆದಿತುಬಾಯ ॥ ನೆನವಿಗೇ ಮೊದಲರುವಿನಗೇಹ್ಯಾ । ತಾ ನನ್ನಗ ಬಂದ ಶ್ರೀ ಗುರುರಾಯ ॥ 2 ॥ ತಂದೆತಾಯಿ ಸತಿಸುತರಾಗಿ । ಒಳ್ಳೇಬಾಂದುವಸ್ತು ವ್ಯಸನೊಸನಾಗಿ ॥ ಚಂದದ ಹರಮಂದಿರವಾಗಿ । ಬೇಡುಬಂದ ನೋಡು ಗುರುಮೇಲಾಗಿ ॥ 3 ॥ ತನು ಮನ ಧನ ವಂಚಿಸಿ ನಾನು । ಹಿಂದೆ ಸುನಿಸೂಕರ ಖರನಾದೆನು ॥ ಅನಿತ್ಯೆಲ್ಲವು ಕೂಡಿಕೊಳ್ಳೊ ನೀನು । ಇನಸುತನಂಜಿಕಿ ನನಗೇನು ॥ 4 ॥ ಹಲವು ಜನ್ಮ ತಿರಗುತ ಬಂದೆ । ನಿನ್ನ ನೆಲೆ ಅರಿಯದೆ ನಾ ಬಹುನೊಂದೆ ॥ ಹೊಲಬು ನರಿಸಲು ದಯದಿಂದೆ । ಎನ್ನ ಸಲಹು ಬಂದೆ ಶ್ರೀಗುರು ತಂದೆ ॥ 5 ॥ ಪಾತ್ರ ಅಪಾತ್ರ ಎಂಬುವ ನೀತಿ । ಸ್ತೋತ್ರ ಶ್ರೋತ್ರದಿ ಕೇಳ್ಯಾದೆನು ಕೋತಿ ॥ ಕ್ಷೇತ್ರ ಯಾತ್ರ ಯಾತರ ಪ್ರೀತಿ ಗಾತ್ರಮಾತ್ರ ನೀನೆ ಗುರು ಪರಂಜ್ಯೋತಿ ॥ 6 ॥ ಏಕಮೇವ ನಾದ್ವಿತಿಯೆಂದು । ತಾನ್ಯಾಕೇ ಕೂಗುತಾದ ಶೃತಿನಿಂದು ॥ ಬೇಕು ಬ್ಯಾಡ ಎರಡರದೊಂದು । ನನಗ್ಯಾಕೆ ಬೇಕು ಘನಗುರುತೊಂದು ॥ 7 ॥ ಆಗೋ ಈಗೋ ಯಾಗೋ ಸಂಸಾರ । ಬ್ಯಾಗ ಬ್ಯಾಗ ನೀಗಿಸಿದಿ ಬಹು ಭಾರ ॥ ಬಾಗಿ ಆದೆ ನಿರಾಕಾರ । ಶಿವಯೋಗಿ ನಿನಗೆ ನಾ ಸುಕುಮಾರ ॥ 8 ॥ ಆಸ್ತಿ ಭಾತಿ ಪ್ರಿಯ ನಿಃಶೂನ್ಯ । ಅದು ಸ್ಪಷ್ಟ ನನ್ನಗ ಸುಸ್ತಿ ಇರುಮಾನ್ಯೆ । ವಿಸ್ತರಿಸಿದ ಪ್ರಮಥವರೇಣ್ಯ । ಹಿಂದೆ ಪುಸ್ತಿಯಿತ್ತು ಪೂರ್ವದ ಪುಣ್ಯ ॥ 9 ॥ ಹರಿಯಜ ಮನು ಮುನಿ ಸುರರೆಲ್ಲ। ಶ್ರೀ ಗುರುವಿನ ಗುರ ತವರಿಯಲಿಲ್ಲ ॥ ಮರದಿರುವದು ಹಿರಿತನವಲ್ಲ। ಮಾದರವು ಅನಾಮಿಕ ತಾ ಬಲ್ಲ ॥ 10 ॥ ಚಿಣಮಗೇರಿ ಮಹಾಂತನ ಲೀಲ। ಕೇಳ ಫಣಿಪತಿ ಹೇಳಲು ತಾ ಸಾಲ ॥ ಎಣಿಕಿಗೊಂಬೆನೆ ನಾ ಬಾಲ । ಮನದಣಿದುಣಕಲತೇನು ಚಿನಿಪಾಲ ॥ 11 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

124 ನೇ ಪದ

ನಿರ್ವಯಲೆಂಬೋ ನಿಜ ಗೊತ್ತು । ತಾನಿದ್ದು ಇಲ್ಲದೊಂದಲ್ಲಿತ್ತು ॥ ಅವಾಚ ಬ್ರಹ್ಮ ಎನಿಸಿತ್ತು । ಆ ಬಹ್ಮವೆ ಪರಮಾತ್ಮ ಆಗಿತ್ತು ॥ ಪ ॥ ಕದರ ಬಿದರಿಸಿ ದಂಗೆರಡಾಯಿತು । ಅದು ಹರಹರಿಯೆಂಬೋ ನಾಮಾಯಿತ್ತು ॥ ಹರಹರಿಯಿಂದ್ಲೆ ಸ್ವಾತ್ಮಾವಾಯಿತು ॥ ಆ ಸ್ವಾತ್ಮನೇ ತಾನೆರಡಾತ್ಮಾವ್ವಾಯಿತ್ತು ॥ 1 ॥ ಎರಡಾತ್ಮನೆ ಆರು ಮರವಾಯಿತು । ಆ ಅರುಮರವೇ ಹಗಲಿರುಳಾಯಿತು ॥ ಹಗಲಿರಳೊಳು ಯುಗ ಜಗವಾಯಿತು । ಈ ಯುಗ ಜಗ್ಗದೋಳುದಯ ಲಯವಾಯಿತು ॥ 2 ॥ ನೆಲ ಜಲ ಅನಿಲ ನೀಲಾಕಾಶ । ಕೇಳು ಪಂಚಾನನ ಪರಮೇಶ ॥ ಪರಮೇಶನೆ ಗುರು ಮಹಾಂತೇಶ । ಗುರು ಮಹಾಂತೇಶನೆ ಎನ್ನ ಭವನಾಶ ॥ 3 ॥

125 ನೇ ಪದ

ಲಲನೆ ಬಾ ನಮ್ಮ ನಿಲವದೋರಿದ ಗುರು । ಸಲಹಲು ಬಂದಿದೇ ॥ ಹಲವು ಜನ್ಮ ನಮ್ಮ ನಲವುದಿನ್ಹೋಯಿತು । ಸಲಹುದೀ ನಿಜಾನಂದೇ ॥ ಪಲ್ಲ ॥ ಆಶೆಯೇ ದಾಶಿ ನಿರಾಸಿ । ಈಶಾ ತಾವೆಂದೋಸು । ಶಾಸ್ತ್ರೋದಿದೇಘ ಕಾಶಿರಾಮೇಶ್ವರ । ವಾಸ ಹರಿ ಹಂಪಿ ಈಸು ತಿರುಗಿದೇವೆ । ಆಸಿಯು ನೀಗದೆ ಈಶ ತಾನಾಗದೇ ॥ ಘಾಸಿಯು ನೈದಿದೇವೆ । ಭಸುರಾತ್ಮ ಸರ್ವೆಶ ನೀವೆಂದಿಗೆ । ಏಸು ಪೂಣ್ಯದೊದಗಿ ದೇವೆ ॥ 1 ॥ ಅರ್ಥ ಪ್ರಾಣಾಭಿಮಾನ । ಕರ್ತೃ ಶ್ರೀ ಗುರುಗೆಂದರ್ಥವೆ । ಓದೀ ದೇವೆ । ಮರ್ತಲೋಕದ ಮಹಾನರ್ಥ ದೈವಂಗಳ । ವ್ಯರ್ಥಕೆ ಭಜಿಸಿದೇವೆ ಗುರ್ತವರಿಯದೆ ಸದ್ವರ್ತನೆ । ಅವರೆಂದು ನಿರ್ತಕೆ ನಿಗರಿದೇವ ॥ ಕರ್ತೃಬೃತ್ಯ ನಿವೃತ್ತಿಸಮ್ಮತ್ತಿಯು । ಅರ್ತಿತುರ್ತೆದಿದೇವೆ ॥ 2 ॥ ಹಿರಿಯರೀ ನರಜನ್ಮ ಹಿರೀದೆಂದರಲಿ ತಮ್ಮ ಇರವು ತಿಳಿಯಲಿಲ್ಲೆ । ಹರಿ ಅಜ ಇಂದ್ರರಿಗರಿಯಬಾರದು । ಮಹಾದರವು ಮರವಿಗಿಲ್ಲೇ ॥ ದುರಿತ ಧರ್ಮವುಮಾಡಿ । ಸ್ವರ್ಗನರ್ಕವು ತಾಗಿತಿರಗೋ ತ್ರಿತಾಪಲ್ಲೇ ವರದ ಶ್ರೀಮಹಾಂತನ ಕರುಣದಿಂದೇ । ಇಹ ಪರ ಎರಡೆಮಗಿಲ್ಲೇ ॥ 3 ॥

126 ನೇ ಪದ

ಸುಳ್ಳ ಸುಳ್ಳೆ ಸುಳ್ಳೋ ನೀ ಮಾಡಿದೆಲ್ಲ ॥ ಪಲ್ಲ ॥ ಆಶಿ ಬಿಡದೆ ಪರದೇಶವ ತಿರದುಂಡು ॥ ಶ್ರೀ ಶೈಲುಳವಿ ಹಂಪೀ । ಕಾಶಿಯಾತ್ರೆಗಳೆಲ್ಲ ॥ 1 ॥ ಪಟ್ಟದಯ್ಯನು ತಾನು । ಕೊಟ್ಟಲಿಂಗಕ್ಕೆ ಮನಮುಟ್ಟಿ ಪೂಜಿಸಿ । ನಯನಿಟ್ಟುನೋಡುವದೆಲ್ಲ ॥ 2 ॥ ಅಷ್ಟಾವರ್ಣ ಪಡಿದಷ್ಟಾರ್ಚನೆಯಿಂದೆ ॥ ಶ್ರೇಷ್ಠ ಪೂಜೇತನಾಗಿ । ದೃಷ್ಟಿತೋರುವದೆಲ್ಲ ॥ 3 ॥ ಮೂರು ಮಲವು ಬಿಟ್ಟು । ಮೂರು ಮುದ್ರ ಅಳವಟ್ಟು ॥ ಆರು ವರ್ಗವ ಸುಟ್ಟು । ಪೂರ ಜ್ಞಾನಾದುದ್ದೆಲ್ಲ ॥ 4 ॥ ಅರು ಮೂರಾರ ಮೇಲೇ ॥ ಏರಿ ನಿಂದ್ರಲು ಮುಂದೆ ॥ ಮೀರಿದುನ್ಮವಿ ಪ್ರಭೆ । ಸೂರ್ಯಗೊಂಬುವದೆಲ್ಲ ॥ 5 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಶೇಷನ ಮುಖದೊಳು । ಸೂಸುವಂಮೃತಕೆಂಡ ॥ ಸಾಸಿರೆಸಳೆನಲ್ಲಿ । ಘೋಷ ಕೇಳುವದೆಲ್ಲ ॥ 6 ॥ ಅತ್ತಲಿರುವ ಕಳೆ ಇತ್ತಸೆಳೆದು ತಂದು । ಹತ್ತಿ ಸೇದುದಕ್ಕೀದೆ ಗೊತ್ತುಯಂಬು ದೆಲ್ಲ ॥ 7 ॥ ಬಿಳಿದು ಕೆಂಪಕ್ಕೆ ಬಿತ್ತು । ಒಳಗೆ ಬಂದದ್ದು ಚಿತ್ತು ॥ ಹಳದಿ ಹಸಿರು ಕಪ್ಪುತಳಿದು ತಿಳಿಯುವದೆಲ್ಲ ॥ 8 ॥ ನಾನಾವಿನೋದದ ಮೋಹನ್ಮಾಂತೇಶನೇ ॥ ತಾನೇ ತಾನೆಂಬುವದೊಂದೇ । ನಾನು ನೀನೆಂಬುವದೆಲ್ಲ ॥ 9 ॥

ಕಾರಣಾಂಗ, ಪ್ರಸಾದಿ ಷಟ್‌ಸ್ಥಲ ಪದಗಳು

127 ನೇ ಪದ

ಅಷ್ಟರೊಳಗಾದ ಮಾತು । ಎಲೋ ನಿನಗಿಷ್ಟೊಂದ್ಯಾಕೊ ತಿಪ್ಪಲ ॥ ನಿಷ್ಠೆವುಳ್ಳವರ ಸ್ನೇಹದೊಳಿರೆ । ಜನ್ಮ ನಷ್ಟಾಗುವದು ಸಫಲ ॥ ಪ ॥ ನಿಂದಿಸಿ ಕೊಳ್ಳುವದು ಮಾಡಿದಿರು । ನರ । ನಿಂದಿಸಿ ನೀ ನುಡಿಯಬೇಡ ॥ ನಿಂದೆ ತನಗೆ ತಾ । ಬಂಪರೆ ಅದರೋಳಾನಂದಿಸುವದು ಬಹುಪಾಡ ॥ 1 ॥ ಸುಳ್ಳಹಳಿದು ಧಿಟ ವಾದಿಸದಿರು ॥ ಆ ಸುಳ್ಳೊಳು ಧಿಟಹೊಂದಿಹುದು ॥ ಪೊಳ್ಳುಬಳಿಗೆ ಕೆಚ್ಚೊಣಕಿಯೇ ಸಾಕ್ಷೀ । ಸುಳ್ಳಧಿಟವು ಎನಹುವದು ॥ 2 ॥ ಧರ್ಮಕರ್ಮ ದೋಳಿಹ । ಕರ್ಮಧರ್ಮದೋಳಿಹರ ॥ಕರ್ಮಧರ್ಮ ಯರಡಕ್ಕು । ನಿರ್ಮಳಗುರು ಗುಡ್ಡದ ಮಹಾಂತೇಶನ । ಮರ್ಮವು ತಿಳಿದರೆ ಸಾಕು ॥ 3 ॥

128 ನೇ ಪದ

ಕಾಡುವನಡತಿ ಇದ್ಯಾಕೆ ಯೇ ಮನವೇ ॥ ಕೇಡುಬಯಸೀ ಮರಗುವದಿದು ಘನವೇ ॥ ಪ ॥ ಸ್ವಲ್ಪ ಸುಖಕ್ಕೆ ದೊಡ್ಡ ಕಲ್ಪನೆಗಳದಕ್ಕೆ ॥ ಅಲ್ಪಿಸುವ ಅಳಿಸುವ ಬಲ್ಪಿದು ತರವೇ ॥ 1 ॥ ಮಾಡುವ ಧರ್ಮವು ಮಾಡಲು ಮರಸಿ ॥ ಮಾಡದ ಕರ್ಮವು ನೀಮಾಡಿಸುವದ್ಹಿತವೇ ॥ 2 ॥ ಶುಲಭ ಚಿಣಮಗೇರಿ ಸಲೆಮಹಾಂತೇಶನ ॥ ಒಲಿಸುವ ಸಮಯ ಬದಲಿಸುವದುಚಿತವೇ ॥ 3 ॥

129 ನೇ ಪದ

ಮನವೇ ಯತ್ಹೋದರ್‍ಹೋಗಲಿ ಜೀವೆ । ತನು ನೀನೊಂದಾಗೋದಾಗಲಿ ॥ ಪ ॥ ಘ್ರಾಣೆಲಿ ವಾಸನೆ ನೋಡದು । ಕಣ್ಣ ಕಾಣದೆ ವರ್ಣವ ನೋಡದು । ವಾಣಿಯಿಲ್ಲದೆ ಮಾತನಾಡದು । ನಿನ್ನ ಪಾಣಿಯಿಲ್ಲದೆ ಏನು ಮಾಡದು ಜೀವೆ ॥ ॥ 1 ॥ ಮೂಲವ ಕೀಳದೆ ಕೇಳದು । ಕಿವಿ ಆಲಿಸದಿರ್ದರೆ ಕೇಳದು ॥ ನಾಲಿಗಿಲ್ಲದೆ ಸವಿ ತಾಳದು ನಿನ್ನ ಕಾಲೇಳದೆ ತಾನೇಳದು ಜೀವೆ ॥ 2 ॥ ಅಂಗಿಲ್ಲದೆ ಲಿಂಗನಾಗದು ನಿನ್ನ ಲಿಂಗವಿಲ್ಲದೆ ಸಂಗಕ್ಹೋಗದು ॥ ಮಂಗ ತಾನಾಗದೆ ಯತ್ನ ಸಾಗದು । ನಮ್ಮ ತುಂಗಮಹಾಂತೇಶನ ನೀಗದು ಜೀವೆ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

130 ನೇ ಪದ

ಒಬ್ಬ ಮುಲ್ಲ ಬಂದು ಕಲ್ಲನ್ನೇಕೆ ಕಟ್ಟಿರುವಿರಿ?ಮಾಯಿ ಬಿಟ್ಟಿಲ್ಲೇನು ಎಂದು ಕೇಳಲು ಆ ಮಾತಿಗೆ ಮಡಿವಾಳರು ಈ ಪದವನ್ನು ಹಾಡಿದ್ದಾರೆ.

ಮುಲ್ಲನುದಯದಿ । ಮಸೂತಿಯ್ಳಲಿ ನಿಂದಲ್ಲಲ್ಲಲ್ಲೆಂದರಲ್ಲಿಲ್ಲ ॥ ಗುಲ್ಲೆ ಮಾಡಿ ತಾ ಕೂಗಲು । ಮಾಳಿಗಿಯಲಿರ್ದಿಲಿಗೊಳ್ಳೆಂದಿರಲಿಲ್ಲ ॥ ಪ ॥ ಉದಯದೋಳ್ವಿಪ್ರರು ನದಿಯೋಳು। ಮುಳುಗುತ । ಮಾಧವ ಹರಯೆನಲಲ್ಲಿಲ್ಲ। ಅಧಿಕನು ಸೂರ್ಯನೆಂಬುತ । ಕ್ಷಿತ್ರಿಯರು ಮುದದಿ ಪ್ರಾರ್ಥಿಸಿದರಲಿಲ್ಲ ॥ ಚದುರ ತನದಿ । ವೈಶ್ಯರು ನಗರೇಶ್ವರ ಗೋವಿಂದೆಂದರಲಿಲ್ಲ। ಒದಗಿ ಶೂದ್ರರು ಬಹು ದೈವಂಗಳು । ನಾದರಸಿದರಲಿಲ್ಲ ॥ 1 ॥ ಭುವನದಿ ಜಂಗಮ ಭಕ್ತಿಜ್ಞಾನ ವೈರಾಗ್ಯವ ನಡಸಿದರಲಿಲ್ಲ ॥ ಶಿವಭಕ್ತರು ಶಿವಲಿಂಗಪೂಜೆ ದಾಸೋಹ ಮಾಡಿದರಲಿಲ್ಲ । ಭವ ಈ ಸಂಸಾರೆಂಬುತ ಕಳಿದು ಸ್ನೇಹಸಾದರಲಿಲ್ಲ । ತವೆಮದವೆಂದನ್ನವನುಳಿದ ಮೃತ । ಸೇವಿಸಿಕೊಂಡರಲ್ಲಿಲ್ಲ ॥ 2 ॥ ಅಷ್ಟಾಂಗ ಯೋಗಂಗಳಲ್ಲಿ । ಕಷ್ಟವಬಟ್ಟರಲಿಲ್ಲ । ದ್ರಿಷ್ಟಿಯನ್ನುತ ಮುದ್ರಿಯಂಗಳಲ್ಲಿಟ್ಟು ನೋಡಿದರಲ್ಲಿಲ್ಲ ॥ ದೃಷ್ಟವಾದ ಮಹಾತ್ವಂಗಳ ತೋರಿ ಶ್ರೇಷ್ಠರೆನಿಸಿಕೊಂಡರಲ್ಲಿಲ್ಲ। ನಿಷ್ಠಿಯಿಂದೆ ಗುಡ್ಡದ ಮಹಾಂತೇಶನ । ನೆಟ್ಟನೆ ತಿಳಿ ಜನ್ಮಿರಲಿಲ್ಲ ॥ 3 ॥

131 ನೇ ಪದ

ದಾವದ್ದೋ ಮಾಯಿಚ್ಯಾಲ । ನಮ್ಮ ದೇತರದೇವ ಮಹಾಂತನ ಲೀಲ ॥ ಪ ॥ ಮಾಯೆಯು ಎಲ್ಲಿಂದ ಬಂತು । ಅವ ತಾಯಿಯ ಹೊಟ್ಟೆಯಲ್ಲಿ ಹುಟ್ಟಿತೊ ನಿಂತು ॥ ಆಯಾಸಗೊಳಿಸುವ ಕಂತು । ತನ್ನ ತಾಯಿಯ ತಂದಿಯ ತನು ಮನ ತಿಂತು ॥ 1 ॥ ಅಲ್ಲನ ತೋರುವ ಮುಸಲ । ಲಿಂಗಕಲ್ಲೆಂದ ತನ್ನಬಿಡಸಿದ ಅಸಲ । ಅಲ್ಲ ಸಿಗವನೆ ತಾಕುಶಲ ॥ ನಾಳಲ್ಲಿ ಕೇಳದೆಬಿಡುವನೆ ಯಮ ತಾ ಶೀಲ ॥ 2 ॥ ಅಲ್ಲ ಅಲ್ಲವೆಂದು ಕೂಗುವನೊ । ಆ ಸೊಲ್ಲ ಕೇಳುವಕಿವಿಗೆ ಬೆರಳ ಇಡಹುವನೋ ಅಲ್ಲಹೇಳುವದು ಇನ್ನೇನೋ । ಆ ಅಲ್ಲದೈವಾದಮೇಲೆ ಯಾತರವ ತಾನೊ ॥ 3 ॥ ಅಲ್ಲಹೌದೆರಡಿಲ್ಲ । ಆ ಅಲ್ಲಹೌದಾಗದೆ ಆಗೋದೇನಿಲ್ಲ । ಅಲ್ಲ ಹೌದಾದವ ಬಲ್ಲ ॥ ಆ ಅಲ್ಲಹೌದಾದರೆ ಕೇವಲ ಅಲ್ಲ ॥ 4 ॥ ಎಲ್ಲಸ್ವರೂಪ ರೂಪಲ್ಲ। ಆ ಅಲ್ಲನಾಗದೆ ಆದನ್ಯಾತಕೇ ಮುಲ್ಲ। ಅಲ್ಲಾಗದವ ಎನುಬಲ್ಲಾ ॥ ಮಹಾಂತಲ್ಲಮನಾಚೀಲಿ ಹಾನೊಬ್ಬಿಲ್ಲ ॥ 5 ॥

132 ನೇ ಪದ

ಚಿನ್ನೂರ ಜಲಾಲಸಾಯಿಬನು ಜಂಗಮನಾದ ಮೇಲೆ ಮನ ಲಿಂಗ ಮಾಡಕೊಂಡಿರಬೇಕು ಎಂದರು. ಆ ಮಾತಿಗೆ ಮಡಿವಾಳರು ಈ ಪದ ಹಾಡಿರುವರು.

ಫಕೀರನಾಗಬೇಕಾದರೆ । ಮನ ಧಿಃಕಾರಮಾಡಿಕೊಂಡಿರಬೇಕೋ ॥ ನಕಾರ ಮಕಾರ ಶಿಕಾರ ವಕಾರ ಯಕಾರ ಓಂಕಾರ ತಿಳಿದಿರಬೇಕೋ ॥ ಪ ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಹಸು ತೃಷ್ಣಿ ವ್ಯಸನವು। ಹುಸಿಗಳು ಮನ। ಹಸನಮಾಡಿ ವಾಸನೊಗಸಿರ ಬೇಕೋ ॥ ತುಸು ಮಾತ್ರ ಕಳೆ ನಸುಮಾಸದಲೆ । ಮುಸಲ್ಮಾನನಾಗಿ ಸೊಗಸಿರಬೇಕೋ ॥ 1 ॥ ಸತಿ ಸುತರೆಂಬೋ । ಮೋಹದ ಮಡಕಿಯು ಗತಿಲಿಂದ ಅತಿಸಿರಿವುಳಸಿರಬೇಕೋ ॥ ಕೃತ ಕೂದಲವು ಅತಿಗಳಿದೀ । ಸುಮತಿಯೆಂಬ ಗಡ್ಡ ಬೆಳಿಸಲಿಬೇಕೋ ॥ 2 ॥ ಕಾಮ ಕ್ರೋಧ ಮದ ಲ್ಲೋಭಗಳ್ಳೆಂಬ । ತಾಮಸಗುಣಗಳು ಸುಟ್ಟಿರಬೇಕೋ ॥ ನಾಮ ಸೀಮೆಗಳ ಮುಟ್ಟೆನೆಂಬ ದೃಢಪ್ರೇಮದ ಲುಂಗಿ ಉಟ್ಟಿರಬೇಕೋ ॥ 3 ॥ ಸಾಕುಬ್ಬೇಕು ಎರಡು ಏಕಮಾಡಿ ತಾ । ಟೀಕನ್ನಾಗಿ ಕೋಲ್ಹಿಡದಿರಬೇಕೋ ॥ ಲೋಕದೊಳಗೆ ತಾ ಮೂಕನಾಗಿ ಬಲು । ಜೋಕಿಲಿ ಮನೆಮನೆನಡದಿರಬೇಕೋ ॥ 4 ॥ ಸತ್ಯವುಳಿದು ಅಸತ್ಯವುಕಡಿದು । ಕತಲ್ ರಾತ್ರಿ ಮಾಡಿರಬೇಕೋ ॥ ಜೇಪೀರ ಮಹಾಂತೇಶನ ಭಜಿಸುತ । ನುತಿಸುತಲಾಯದೋಳಾಡಲಿಬೇಕೋ ॥ 5 ॥

133 ನೇ ಪದ

ಗಂಹಾರ ಶಾಸ್ತ್ರಿಯು ಬಂದು ಮಡಿವಾಳರಿಗೆ ಮಾಯಿ ಬಿಟ್ಟೆಲ್ಲೇಂದನು. ಆ ಮಾತಿಗೆ ಮಡಿವಾಳರು ಪದಹಾಡಿ ಅನುಭಾವ ಹೇಳಿರುವರು.

ಮಾಯಿ ಯಾವದ್ದೇಳೊ ಶಾಸ್ತ್ರಿ । ನಿನ್ನ ಆಯತ್ವನರಿಯದೆ ಬಾಳ ಬಾಯಿ ಕಿಸ್ತ್ರಿ ॥ ಪ ॥ ಒಂದೆ ಮೂರಾರಾಯಿತಂದಿ । ಈ ಅಂದದೊಳಗೆ ನೀ ಅದನೆಲ್ಲಿ ತಂದೀ । ಸುಂದರಕವಿ ಹೇಳೊಬಂದಿ ॥ ಈ ಮಂದಿಯೊಳಗೆ ನಿನ್ನ ಮಾಡುವೆ ಚಂದೀ ॥ 1 ॥ ತವಡಕ್ಕಿ ಅಂಕುರಗೂಡಿ । ಈ ಅವನಿಯಮೇಲ ಬಿಂಬಬೆಳದಿತು ಮೂಡಿ । ತವೆಪರ್ಣ ಫಲಪುಷ್ಪವಗೂಡಿ ॥ ನೀ ಅವನಿಜದೊಳ್ಳು ಭೇದಹೇಳೆಲೊ ನೋಡಿ ॥ 2 ॥ ತಾಯಿಯ ಗಂಡ ನಮ್ಮಪ್ಪ । ಅಜ್ಜಾಯೀಯ ಮೊಮ್ಮಗ ಮುತ್ಯಾನೆನಿಸುವನಪ್ಪ । ನ್ಯಾಯ ಈ ನ್ಯಾಯಕಾಗೋಗಪ್ಪ ॥ ಗುರುರಾಯ ಗುಡ್ಡದ ಯೋಗಿಯೊಳಗ್ಯಾಕೋ ಕಪ್ಪ ॥ 3 ॥

134 ನೇ ಪದ

ಅಲ್ಲೆಂಬುದು ಹೌದಾದರೆ । ಆಗ್ಹ್ಯಾಂಗಾಗೋದಪ್ಪ ॥ ಹೌದೆಂಬುದು ತನ್ನಲ್ಲಿಕಂಡು । ಆ ಪುರಾತರಾದರು ಗಪ್ಪ ॥ ಪ ॥ ಚಾಯದ ಶಿಶುವಿಗೆ ಭವಯೆಂಬ ಅಂಜೀಕಿ । ತಾಯಿಯ ತೋರಿದಳಪ್ಪ ॥ ಪ್ರಾಯದ ಕಾಲಕ್ಕ । ತಾಯಿ ಹೇಳಿದ ಮಾತು । ತಾಯೇನಾದಿತಪ್ಪ ॥ 1 ॥ ಕಣ್ಣ ಮುಚ್ಚಿದ ಕಾಂತಗೇ । ಸ್ತ್ರೀ ತಾ ಅಣ್ಣಪ್ಪಂದಳಪ್ಪ ॥ ಕಣ್ಣುತೆರೆದು ನೋಡಲು । ಆ ಕಾಂತಗೇ ಅಣ್ಣಪ್ಪ ಅವಳ್ಯಾಕಪ್ಪ ॥ 2 ॥ ಕತ್ತಲದೊಳು ಬರುವಪ್ಪನ ಕಂಡು । ಹೆತ್ತವನ ಬೈದೆಪ್ಪ ॥ ಉತ್ತಮ ಗುರು ಗುಡ್ಡದ ಮಹಾಂತೇಶನ । ಮುತ್ಯನ ಮೊಮ್ಮಗನಪ್ಪ ॥ 3 ॥

135 ನೇ ಪದ

ಮುದ್ದಬಾಳಿಯರಂಗಾ । ಎದ್ದುಬಾರನು । ಬುದ್ಧಿಸಲ್ಲದೋ । ಮುದ್ದಬಾಳಿ ॥ ಪ ॥ ಜೋಳದ್ದೊಲವನು ಬಿಟ್ಟೇ । ಜಾಣಗಂಡನೂ ಬಿಟ್ಟೇ ॥ ಜೋಳದ್ವಾನ ಹೆಸರಬ್ಯಾಳಿ । ಗುಸ್ಸ ಗುಸ್ಸು ನುಂಗಲಾರದು ಜೀವ । ಬಿದ್ದುಬಾಯಿ ಹಾರುತಾದಲ್ಲೋ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮುದ್ದಬಾಳಿ । ಮುದ್ದಬಾಳಿಯರಂಗ । ಎದ್ದುಬಾರನು । ಬುದ್ಧಿ ಸಲ್ಲದೋ ಮುದ್ದ ಬಾಳಿ ॥ 1 ॥ ನೆವಣಿ ಹೊಲನು ಬಿಟ್ಟೇ । ಹವಣಿಗಂಡನ್ನು ಬಿಟ್ಟೇ ॥ ನೆವಣಿ ಬಾನ । ಹುಣಿಸಿಕಾಯಿ ಆಂಬ್ರ । ಸರ್ ಫುರ್ ಸುರಿಯಲಾರದೋ ಜೀವ । ಬಿದ್ದು ಬಾಯಿ । ಹಾರುತಾದಲ್ಲೋ । ಮುದ್ದಬಾಳಿ । ಮುದ್ದಬಾಳಿಯ ರಂಗ । ಎದ್ದು ಬಾರನು । ಬುದ್ಧಿ ಸಲ್ಲದೋ । ಮುದ್ದಬಾಳಿ ॥ 2 ॥ ಸಜ್ಜಿ ಹೊಲನು ಬಿಟ್ಟೇ । ಗೆಜ್ಜಿ ಕಾಲಿನ ಮಗನ ಬಿಟ್ಟೆ ॥ ಸಜ್ಜಿ ರೊಟ್ಟಿ ಚವಳಿಕಾಯಿ ಗಸ್ಸ ಗುಸ್ಸು ನುಂಗ ಲಾರದೋ ಜೀವ । ಬಿದ್ದುಬಾಯಿ ಹಾರುತಾದಲೋ । ಮುದ್ದಬಾಳ ॥ ಮುದ್ದಬಾಳಿಯರಂಗ । ಎದ್ದುಬಾರನು । ಬುದ್ಧಿಸಲ್ಲದೋ । ಮುದ್ದಬಾಳಿ ॥ 3 ॥ ಸಗರನಾಡ ಸಂತೆಗೆ ಹೋಗಿ ಸಾದರುಂಬಾಲ ತಂದೆ । ಸುತ್ತಿಕೊಳ್ಳಂದರ್ಯಾಕೊಲ್ಲೇ ॥ ಯಾರವರು । ಹೋಗವರು । ಯಾಕ್ಯಾಕ । ಯಾರು ಇಲ್ಲ । ಬಾನನ್ನ ಕಾಣದು ಜೀವ ಬಿದ್ದುಬಾಯಿ ಪಾರುತಾದಲ್ಲೋ । ಮುದ್ದಬಾಳಿ ಮುದ್ದಬಾಳಿಯರಂಗ ಎದ್ದು ಬಾರನು । ಬುದ್ದಿಸಲ್ಲದೋ । ಮುದ್ದಬಾಳಿ ॥ 4 ॥ ಜಾಲಳ್ಳಿ ಸಂತೀಗೆ ಹೋಗಿ । ಜಾತಪರಿಮಳ ತಂದೆ । ಧರಿಸಿಕೊಳ್ಳಂದರ್ಯಾಕೊಲ್ಲೇ ॥ ಯಾರವರು । ಅಡ್ಯಾಡವರು । ಯಾಕ್ಯಾಕ । ಯಾರು ಇಲ್ಲ । ಬಾನನ್ನ ಕಾಣದುಜೀವ । ಬಿದ್ದು ಬಾಯಿ ಹಾರುತಾ ದಲ್ಲೋ । ಮುದ್ದಬಾಳಿ । ಮುದ್ದಬಾಳೀಯ ರಂಗ । ಎದ್ದು ಬಾರನು ಬುದ್ಧಿಸಲ್ಲದೋ ಮುದ್ದಬಾಳಿ ॥ 5 ॥ ಕಡಗ ಕಂಕಣದೋರೆ । ಕೊಡನೇ ಹೊತ್ತಾಳೊನಾರಿ । ನಡಗೀ ನಡದಾಳ ಸುಂದರೀ ॥ ಯಾರ್ನಿಂತವರು । ಯಾಕ್ಯಾಕ ಯಾರು ಇಲ್ಲ । ಬಾ ನನ್ನ ಕಾಣದಜೀವ ಬಿದ್ದು ಬಾಯಿ ಹಾರುತಾದಲ್ಲೋ । ಮುದ್ದ ಬಾಳಿ । ಮುದ್ದಬಾಳೀಯ ರಂಗ । ಎದ್ದು ಬಾರನು । ಬುದ್ಧಿ ಸಲ್ಲದೋ ಮುದ್ದಬಾಳಿ ॥ 6 ॥ ಗುಡ್ಡದೊರಿಯ ಮಹಾಂತ । ಬಡ್ಡಗಣ್ಣೀನ ಹುಡಿಗೀ । ದುಡ್ಡು ಕೊಟ್ಟರ್ಯಾಕೊಲ್ಲೀ ॥ ಯಾರ್ಕುಂತವರು । ಯಾಕ್ಯಾಕ । ಯಾರು ಇಲ್ಲ । ಬಾ ನನ್ನ ಕಾಣದು ಜೀವ । ಬಿದ್ದು ಬಾಯಿಹಾರುತಾದಲ್ಲೋ । ಮುದ್ದಬಾಳಿ । ಮುದ್ದಬಾಳೀಯರಂಗ । ಎದ್ದು ಬಾರನು ಬುದ್ಧಿ ಸಲ್ಲದೋ । ಮುದ್ದಬಾಳಿ ॥ 7 ॥

136 ನೇ ಪದ

ಕ್ವಾಡಗ ಕೋಳಿನುಂಗಿತ । ಕೇಳಕ್ಕಯ್ಯಾ । ಕ್ವಾಡಗನ ಕೋಳಿನುಂಗಿತ ॥ ಪ ॥ ಆಡ ಮಾಡವು ನುಂಗಿ । ಗೋಡೆ ಸುಣ್ಣವು ನುಂಗಿ ॥ ಆಡ್ಲಕಬಂದ ಪಾತರಗಿತ್ತಿನ ಮದ್ದಲಿ ನುಂಗಿತಕ್ಕಯ್ಯಾ ॥ 1 ॥ ವಳ್ಳ ವಣಕಿಯ ನುಂಗಿ । ಬೀಸೋಕಲ್ಲ ಗುಂಜಿ ನುಂಗಿ ॥ ಕುಟ್ಲಾಕಬಂದ ಮುದುಕಿನ । ನೊಣ ನುಂಗಿತಕ್ಕಯ್ಯಾ ॥ 2 ॥ ಎತ್ತ ಜತ್ತಿಗ್ಗಿ ನುಂಗಿ । ನೇಗಿಲ ಮುಂಜಾವನುಂಗೀ ॥ ಸುತ್ತಮುತ್ತ ಗಳೆಹೊಡೆವ ಅಣ್ಣನ ಮೇಳಿ ನುಂಗಿತಕ್ಕಯ್ಯಾ ॥ 3 ॥ ತೋಟವು ಬೇಲಿಯ ನುಂಗೀ । ಬೇಲಿ ತೋಟವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನುಂಗೀ ॥ ಬ್ಯಾಟಗಾರಣ್ಣನ । ಮೊಲ..ನುಂಗಿತಕ್ಕಯ್ಯಾ ॥ 4 ॥ ಕರಡೀ ಮರಡಿಯ ನುಂಗಿ। ಮರಡೀಮಹಾಂತನ ನುಂಗೀ । ವಿದ್ಯೆಹೇಳಗುರುವಿನ ಆತ್ಮ ನುಂಗಿತಕ್ಕಯ್ಯಾ ॥ 5 ॥

137 ನೇ ಪದ

ಬಯಲು ಬೆರೆಸಬೇಡೆಲೋ । ಆ ಬಯಲು ನಿನಗೆ ಕೇಡೆಲೋ ॥ ಪ ॥ ಹಲ್ಲವು ನೆನಪು ತೋರುವೇ । ಮಲಿನಜನನ ತ್ಯಾರುವೇ । ಕುಲಚಲಕ್ಯಾಕ್ಹೋರುವೇ ನಿನ್ನ ನೆಲೆಕಲೆ ತಿಳಿ ಸಾರುವೇ ॥ 1 ॥ ಮನ ಬುದ್ಧಿ ಚಿತ್ತ ಅಹಂಕಾರ । ತನು ಮನ ಧನ ಭಯಂಕಾರ । ಘನಕ್ಕೆ ಘನಮಹಾ ಓಂಕಾರ । ಮೃದತನದೊಳಿರುವ ಶಂಕರ ॥ 2 ॥ ಮಾಡೋ ಈ ಲೋಕದಾಸನ । ಬೇಡೋ ಶಿವಲೋಕೇಶನ ॥ ನೋಡೋ ಶ್ರೀ ಮಹಾಂತೇಶನ । ಬೇಗಿ ಕೂಡೋ । ನಿಜ ಪ್ರಕಾಶನ ॥ 3 ॥

138 ನೇ ಪದ

ಬಯಕೆತುಂಬಿದ ಭಾವ ನೀ। ಬರಕಿ ಕಾಲೆಮಾಡೋ ॥ ಸ್ವಯ ವಿನೋದ ಸಾಕುಮಾಡಿ ಸಕಲನಿಃಕಲಗೂಡೋ ॥ ಪ ॥ ಆರುಚಕ್ರವನೇರೊ । ಮುಂದೆ ಮೂರು ಚಕ್ರವಮಿರೊ ॥ ಸಾರಿ ಶೂನ್ಯವ ಸೇರೋ । ಕಾಟುರುದಾಚಾಕ ಹಾರೊ ॥ 1 ॥ ನಿನ್ನ ನೀನೆ ಅರಿಯೋ । ಮತ್ತೆ ನಿನ್ನ ನೀನೆ ಮರೆಯೋ ॥ ನಿನ್ನ ನೀನೆ ಮರೆಯೋ । ಎಲೋ ನಿನ್ನ ನೀನೆ ಬೆರಿಯೋ ॥ 2 ॥ ಬಯಲು ಬಯಲು ತಾಗೋ । ಆ ಬಯಲು ಬಯಲು ನೀಗೊ ॥ ಬಯಲು ಮಹಾ ಬಯಲಾಗೋ । ನಿರ್ವಯಲು ಮಹಾಂತನಾಗೋ ॥ 3 ॥

139 ನೇ ಪದ

ಈ ಊರು ಅರವತ್ತುವೊಂದಾಗೆ ನಡೆದರೇ ಈ ಊರ ಸರಿ ಸುರಪೂರಲ್ಲ । ಈ ಊರಡವಿ ತನ್ನ ಬೇಕಾದ್ದು ಬೆಳಿವದು । ಆ ಊರಸುತ್ತ ಮರಡಿಯಕಲ್ಲ ॥ ಪ ॥ ಗೌಡರು ಮೂವರು । ಕಮತ್ತಗೇರಾರ್ವರು । ನಾಲ್ವರ್ಧಾರ್ವರು । ಹತ್ತುಮನಗಾರರು ॥ ಜೋಡಾಗಿ ನಡೆವರಿಪ್ಪತ್ತೈದು ರೈತರು । ಕಾಡುವರ್ಧನ್ನೆರಡಾಯಿಗಾರರು। ॥ 1 ॥ ಮೂರು ಸುತ್ತಿನ ಕೋಟಿ ಆರಗಸಿಯ ಬಾಗಿಲ । ಮೂರ್ದಿಡ್ಡಿ । ನಾಲ್ಕು ಕಾದುವ ಕೊತ್ತಲ ॥ ಚೋರ್ವರಾರ್ವ ರೊಳಗಿರಿಸದೇ । ಹೊರನೂಕಿ ಪಾರ ತಿರುಗುತ ಕಳಿ ಕತ್ತಲ ॥ 2 ॥ ಕೊಡುವಂಥದೆ ಕೊಟ್ಟು। ಕೊಳ್ಳುವಂಥದೆ ಕೊಂಡು । ನಡಿವದೆ ನುಡಿವದು । ನುಡಿದದ್ದೆ ನಡಿವದು ಒಡೆಯ ಚಿಣಮಗೇರಿ । ಮೃಡ ಮಹಾಂತೇಶನ ಅಡಿಗಳಾಲಾಯಿಸಿ ದ್ಯಾವಪಡಿದು ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

140 ನೇ ಪದ

ಹುಸೇರಿ ಮನುಷ್ಯರೇ ದರೋಡಿ ಬಡುತಾದೋ । ಯಮವಸ್ತಿ ಆದ ಮಹಾಕಾಳ । ಮುಶ್ಯಾರಿಕ್ಕೊಟ್ಟುಪ್ರಭುವಳ ಹೇಳಿದ ಹೊಯಿವೆನು ಡಂಗುರತಾಳ ॥ ಪ ॥ ಹೆರವಿನ ವಡವಿಯು । ನೆರವಿಕೋಡು ನೀವು । ಸಿರೀವಂತರೆನಿಸುವದು ಬಿಡರಿ ॥ ಹಿರಿಯರು ತಂದದ್ದು। ಮರೆಯದೆ ಆ ರಿಣ । ಕಡೆದು ತ್ವರಿತದಲ್ಲಿ ಕೊಡಿರೀ ॥ 1 ॥ ಉಡು ಉಣುವದು । ಉಡು ಉಣರಿ ಬೇಗ ಬೇಗ । ಕೊಡ ಕೊಳ್ಳುವದು ಕೊಡ ಕೊಳ್ಳಿರೀ ॥ ನಡನುಡಿಗಳು ಕೆಡಗೊಡದೆ । ಜಡಜಡ ಹಿಡತಬಿಡತದನು ತಿಳಿರೀ ॥ 2 ॥ ಮುತ್ತಿನಮೂಗುತಿ ಗೊತ್ತಿನೊಳಗಿಟ್ಟರಿ । ಹತ್ತೆಬಂತು ಆಸ್ಥಾನ ॥ ಚಿತ್ತದೊಡೆಯ ಮಹಾಂತ ತೋರಿತು । ಮೇಲೆ ಮುತ್ತಲವನ ಸ್ಥಾನ ॥ 3 ॥

141 ನೇ ಪದ

ಈತನೇ ಸಾಕ್ಷಾತ್ । ತನ್ನನ್ನೇ ತಾ ತಿಳದಾತದಾತ । ಶಿವದಾತ ಸರ್ವಾತ್ಮ ತಾನಾದಾತಾ ಈತ ॥ಪ ॥ ನೀತಿಯಲ್ಲಿ ನಡಿವಾತ । ಸ್ವಯಂಪ್ರೀತಿಯಲ್ಲಿ ಇರುವಾತ॥ ಭೀತಿಯನಳಿದಾತ ॥ ಪರಂಜ್ಯೋತಿಯ ಕಾಣುವಾತ ಈತ ॥1 ॥ ತ್ಯಾಗಿಯಾಗಿ ಇರುವಾತ। ಬವರೋಗವನಳಿದಾತ ॥ ರಾಗವ ಕಳಿದಾತ । ಶಿವಯೋಗವ ತಾಳಿದಾತ ಈತ ॥ 2 ॥ ಹಮ್ಮು ಹುರಿದಾತ । ತಾ ಸುಮ್ಮನೆ ಇರುವಾತ। ಓಂ ಮನದಿರುವಾತ ಪರಬ್ರಹ್ಮವಾಗಿ ಇರುವಾತ ಈತ ॥ 3 ॥ ವೈರಿಗಿ ವೈರ್‍ಯಾಗದಾತ । ಸಂಸಾರಸೇರದಾತ್ಮ ॥ ಮಾರನ ಮೀರಿದಾತ । ಕಠೋರ ಹಾರುವಾತ ಈತ ॥ 4 ॥ ಆಶಿಯ ವುಡಿದಾತ। ನಿರಾಶಿಯ ಹಿಡದಾತ ॥ ಕ್ಲೇಶವ ಕಡಿದಾತ ಮಹಾಂತೇಶನ । ಪಡಿದಾತ ಈತ ॥ 5 ॥

142 ನೇ ಪದ

ಯಲೆರೋ ಯಲೆರೋ ಕೆಡಬೇಡಿರೋ । ನಿಮ್ಮ ಒಡಲೊಳಗೇ ಶಿವ ಹಾನ ನೋಡಿರೋ ॥ ಕುಲಚಲಕೆ ಹೊಡದಾಡಬೇಡಿರೋ ಮುಂದೆ ನೆಲೆಮಾಡಿಕೊಳ್ಳುವದು ನೋಡಿರೋ ॥ ಪ ॥ ಸ್ಥಿರವಲ್ಲೋ ಈ ಸಂಸಾರ । ಗಾಳಿಗಿರಸೀದ ಜ್ಯೋತಿಯ ಪ್ರಕಾರ ॥ ತಿರಿಗಿ ತಿರಿಗಿ ಬರುವದು ಘೋರ। ಇದು ಮರಳಿ ದೊರಕುವದು ಬಹು ದೂರ ॥ 1 ॥ ಮಕ್ಕಳಮೋಹಕ್ಕೆ ಮರುಗೀರಿ । ಒಳ್ಳೆ ಸಕ್ಕರಿಹಣ್ಣಿಗೆ ಸೊರಗೀರಿ ॥ ರೊಕ್ಕಕಿಷ್ಟು ದಿಮ್ಮದಿರಿಗೀರಿ। ನಾಳೆಡೊಕ್ಕಿ ಮುರಿಯುವನೆಮನರಗೀರಿ ॥ 2 ॥ ದ್ಯಾನಮಾಡಂದರೆ ನೆಳ್ಳುತೀರಿ। ಇಷ್ಟು ಬೇನೆಬಂದರೆ ನೆಲೆಕೊಳ್ಳತೀರಿ ॥ ಜ್ಞಾನುಮಬ್ಬಿನಲ್ಲಿ ಕುಳಿತೀರಿ । ಈ ಮಾನ ಬಂದರಾಗೇಳತೀರಿ ನಿಮ್ಮಗೊತ್ತು ತಿಳಿಯದಲೆ ಬಾಳ್ತೀರಿ॥ ಮುತ್ತು ರತ್ನವಿಟ್ಟುಹೊಳಿತೀರಿ। ಎಲ್ಲೊ ಸತ್ತು ಮೂರದಿನಕ್ಕೊಳತೀರಿ ॥ 4 ॥ ಎರಡು ಮೂರು ಆರು ತೋರಿಬೇಕರೋ ಆ ಎರಡು ಮೂರು ಆರು ಆರಿಬೇಕರೋ ॥ ಹೊರಗು ಒಳಗು ಒಂದನರಿ ಬೇಕರೊ। ಶ್ರೀ ಗುರು ಮಹಾಂತೇಶನ ಬೆರಿ ಬೇಕರೋ ॥ 5॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

143 ನೇ ಪದ

ಮನವು ನೆನವು । ಘನವುದಾವುದೋ । ನೀ ಹೇಳುವದೋ ॥ ಪ ॥ ತಾಳು ತಂತಿ ಸ್ವರವನ್ನು ನೋಡಿ। ಮೇಳಮೃದಂಗವನ್ನು ಕೂಡಿ ॥ ಹೇಳಿ ಕೇಳಿ ವೇಳೆಗಳೆದಿ ತುಳ್ಳುಗದರೊಳಗೇನು ತಿಳದಿ ॥1॥ ಬಸವ ಕಲ್ಯಾಣಕೆ ಬಂದು ಪಸರಿಸಿದ ಪಾವಡವೆಂದು ॥ ಉಸರ್ವ್ವರಿನ್ನ ಸೈಕಬಿತ್ತಿ ಬಸರು ಹಸೀತು । ಪುಸ್ತಕೇತು ॥ 2 ॥ ಅಡಗಿದವರ ಹಾಡಿಕೊಂಬಿ । ಪೊಡವಿಜನರ ಬೇಡಿ ಉಂಬಿ ॥ ಒಡಲು ಸೌಖ್ಯಾ ಮೆರವುದೇನು । ಮಡಿವಾಳಖ್ಯಾ ಅರಿಯದೆ ಕೂಸ ॥ 3 ॥

144 ನೇ ಪದ

ಹಳಿಪ್ಯಾಟಿ ಬಸಯ್ಯಗೆ ಹೇಳಿದ ಐತಾನ ಪದ

ಐತಾನದ್ದ ಮೈನೊ ಚುಮ್ಮಾ ॥ ದೇಹಮೈಥುವನದಿಂದ ಆದ ತಾಯಿ ತಂದಿಯ ಸೊಮ್ಮಾ ॥ಪ॥ ಎಲವು ತೊಗಲನರಸುತ್ತಿ । ಅದು ಹೊಲದು ಮಾಡಿದ ಮಲ । ಮೂತ್ರದ ತಿತ್ತಿ । ಚಲವಯಾವದು ಹೇಳೊ ಮುಕ್ತಿ ॥ ನಿನ್ನ ಹೊಲಸು ಮುಚ್ಚಿಕೊಳ್ಳೊ ಛೀಮೂಳಕತ್ತಿ ॥1॥ ಅವ ಇವಯಂಬುವದ್ಯಾಕೋ ಧುಡಕಿ । ನಿನ್ನ ನೌಮಾಸ ಹೊತ್ತುಹೆತ್ತವಳೆ ಕುಂಡಡಕಿ ॥ ಭವದೋಳು ಬರುವ ದೆಬ್ಬಡಿಕಿ ॥ ಅನುಭಾವದ ನೆಲಿ ತಿಳಿ ನಿನ್ನ ನೀ ಹುಡಿಕೀ ॥ 2 ॥ ಧರಿಯೊಳಧಿಕ ಬಿದನೂರ ಅಲ್ಲಿ ಮೆರೆವ ಮಂದಿರ ಮಡಿವಾಳಮತಿಸಾರ । ಅರವುಬಲ್ಲನು ಪರಿಪೂರ ಮೇಲೊರಸಿ ತೊಳಿದರೇ । ಶುಚಿಯಾಯಿತೇ ಶರೀರ ॥ 3 ॥

145 ನೇ ಪದ

ನಿನ್ನ ನಿಜವು ನೀನು ತಿಳಿವಲ್ಲಿ ॥ ಬಿನ್ನ ಬಡುವದೇನು । ಮಣ್ಣಗೂಡುವದೇ ಬಲ್ಲಿ ॥ ಪ ॥ ಹಲವು ಜನ್ಮದಿ ತಿರುಗುತಬಂದಿ । ಮಲತ್ರಯದೊಳಗೆ ಮೋಹಿಸಿ ನಿಂದಿ । ಹೊಲಿಯೊಳು ಹುಟ್ಟಲಿಕ್ಕೊಲ್ಲೆಂದಿಗಂದಿ । ಕುಲಚಲದಿಂದ ಗೆದ್ದು । ಹಿಂದಿಂದೇನು ತಂದಿ ॥ 1 ॥ ಇಲ್ಲದಂತದಕೇ ಆಶಿಯಮಾಡಿ । ಕಲ್ಲುದೇವರಿಗೆ ಭಾಗ್ಯವುಬೇಡಿ । ನೆಲ್ಲಿಕಾಯಿಷ್ಟುಸಕ್ಕರಿ ನೀಡಿ । ಇಲ್ಲೆವರಸಿದಿನ್ನೆಲ್ಲಿಂದ ತಂದಿತು ಕೋಡಿ ॥ 2 ॥ ಧರಿಯೊಳಧಿಕ ಶ್ರೀ ಚಣಮಗೇರಿ । ಅಲ್ಲಿ ಮೆರೆವಮಂದಿರ ಮಹಾಂತಸಾರಿ ॥ ಅರವು ವಿಚಾರಿಸಿ ಶೂನ್ಯ ನೀ ಸೇರಿ। ಕುರಹು ಕಂಡರೆ ನೀನು ಮರಳಿ ಭವಕೇಬಾರೀ ॥ 3 ॥

146 ನೇ ಪದ

ಆಳಖೊಟ್ಟಿಆಳಖೊಟ್ಟಿ ಆಳಖೊಟ್ಟಿ । ನೀ ಬಳಲುವದ್ಯಾಕೋ ಹುಚ್ಚಗೊಟ್ಟಿ॥ ಸುಳ್ಳೆ ನೀಮಾಡುದೆಲ್ಲ ಭಮಿಬಿಟ್ಟಿ । ನಿನ್ನಂಗದೊಳಗೆ ಮೂರಾಬಟ್ಟಿ ॥ಪ॥ ಹಟ್ಟಿದ್ದಳ್ಳಕ್ಹೋಗುವದೋ ನಿಂತ್ಹುಟ್ಟಿದ ಮಕ್ಕಳು ಸಾಹುವದೋ ॥ ಕಟ್ಟಿದಮನಿ ಬಿದ್ಹೋಗುವದೋ ಹೊಲನಟ್ಟುನಗಸಲು ಬೀಳಾಗುವದೋ ॥ 1 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಅಟ್ಟುಂಡ್ಹೋರಯಕ್ಹೋಗುವದೋ । ನೀ ತ್ಹೊಟ್ಟುಟ್ಟಿದ್ದರಕಾಗುವದೇ ॥ ಇಟ್ಟವಡವಿ ಸವಿದೋಗ್ಗುವದೋ । ಬಚ್ಚಿಟ್ಟ ಬದಕು ಬಯಲಾಗುವದೋ ॥ 2 ॥ ಭಕ್ತಿಯಲ್ಲ ಭತ್ತದೋ । ವಿರಕ್ತಿ ಜಾರತ್ವದೋ ॥ ಮುಕ್ತಿ ಮಾಯಿಗ್ಹಾದೋ । ಸರ್ವಶಕ್ತಿ ಮಹಾಂತನಿತ್ಯಾದೋ ॥ 3 ॥

147 ನೇ ಪದ

ಸೂಕ್ಷ್ಮಾಂಗ ಮಹೇಶ್ವರ ಷಟ್‌ಸ್ಥಲ ಪದಗಳು

ಸಾಕ್ಷಿ ತಿಳಯೋ ನಿಜವಾ । ಓ । ವಾದಿ । ಸಾಕ್ಷಿ ತಿಳಿಯೋ ನಿಜದಾ ॥ ಮೋಕ್ಷದಾಯಿಕ । ವಿರುಪಾಕ್ಷಕೇನಾದೀ ॥ಪಲ್ಲ॥ ಅವದರಿಂದಿದು ಆಯಿತು ಬ್ರಹ್ಮಾಂಡ ॥ ಮೂವರೊಳಗಹಾನ ಮೋಜಿನಪಿಂಡ ॥ 1 ॥ ನೋಡುವ ನಯನಕ್ಕೆ ನಾನಾಕಲ್ಪ ॥ ಜೋಡಳಿದರೆ ಅದು ಜ್ಯೋತಿ ಸ್ವರೂಪ ॥ 2 ॥ ಲೋಲ ಶ್ರೀ ಬಿದನೂರ ಮಹಾಂತೇಶನ ॥ ಲೀಲ ಮಡಿವಾಳಾಖ್ಯತಾನೆ ಸರ್ವೇಶ ॥ 3 ॥

148 ನೇ ಪದ

ಬೇಗ ನೀ ಸೇರೊ ಹೋಗೊ ಗೊತ್ತು । ಆಕೊ ಈಗ ಹಿಗ್ಗಿಸಿಗಸಾಗಿ । ಹೋಗುತಾದ ಮಾಗಿಹೊತ್ತು ॥ ಪ ॥ ಸುತ್ತ ಕಂಚಿಕಾರೀಕಳ್ಳಿ । ಅಲ್ಲೆ ಹತ್ತೆಂಟು ಮಂದಿ ಮುತ್ತಿಮಾಡುತಾರ ತಳ್ಳಿ ॥ ಕೊತ್ತಲಿಲ್ಲದ ಕುರುಪನಳ್ಳಿ । ಯಲೋ ಕತ್ತಲಾದಮೇಲೆ ಬಿಡರು । ಆಗ ಬಾಳನೆಳ್ಳಿ ॥ 1 ॥ ಒಬ್ಬವ ಒಳ್ಳೆವ । ಈ ಊರಲ್ಲಿ ನೋಡೊ ವೇದ್ಯಾ ಅವನಕೀರ್ತಿ ಮೂರುಲೋಕದಲ್ಲಿ ॥ ಡಬಲನೀನು ಕೇಳಬಲ್ಲಿ । ಇನ್ನಿಬ್ಬರು ಹಾರಬಲ್ಲವರ್ಹೋಗೊದಿಲ್ಲವರೆಲ್ಲಿ ॥ 2 ॥ ಅಡ್ಡ ಹೆಸರು ಕೇಳುತ ಹೋಗೊ ಘನಗುಡ್ಡದಯೋಗಿ । ಮಹಾಂತೇಶನೆಂದು ಕೂಗೋ ॥ ಹೆಡ್ಡಗುಣಗಳೆಲ್ಲ ನೀಗೋ । ಆ ಮಹಾದೊಡ್ಡವರ ಕಂಡು ತಲೆಬಾಗಿ ವಸ್ತಿಯಾದೋಗೊ ॥ 3 ॥

149 ನೇ ಪದ

ಎಲೇ ನೀ ಮಾಡಿಕೊಳ್ಳೊ ಗೊತ್ತು । ಅಲ್ಲಿಂದಲ್ಲೆ ಹೋಗುತಾದೋ ಬಹಳ ಮಂದಿ ಸತ್ತು ॥ ಖ್ಯಾಲಿಂದಲ್ಲಿ ನೋಡಿದಲ್ಲೆ ನೀನ್ಯಾಕೆ ಹಲವು ಚಿತ್ತು ॥ ಪ ॥ ಕಂಡ ಕಡಿಗೆ ಹೋಗಬೇಡ । ಅಲ್ಲಿ ಬಂಡಾಗಿ ಮರಳಿಮರಳಿ ಬರುವದೇನು ಪಾಡ ॥ ಹೆಂಡರನ್ನು ಜೆರ್‍ರಿಲ್ಲ ಜೋಡ । ಭೂಮಂಡಲದೊಳಗೆಲ್ಲ । ಇದೆ ಕವಲನಾಡ ॥1॥ ಹಿಂದೆ ನಾನಾದೇಶ ತಿರಗಿ । ಬಹಳ ನೊಂದು ಬೆಂದು ಕಂದಿಕುಂದಿ ಚಂದಗೆಟ್ಟೆನು ಸೊರಗಿ ॥ ಮಂದಿ ಮಕ್ಕಳಂತಿತ್ತು ಮರಗಿ । ಇಲ್ಲಿಬಂದು ಮಾಡಿಕೊಡೆ ಉಂಡು ಉಟ್ಟು ಹೊನ್ನಿನ ಚರಗಿ ॥ 2 ॥ ಹಿರಮನಿ ನಿನಗಾಗಿ ಬಿಡದೇ । ನಮ್ಮ ಸರಶೆಟ್ಟಿ ತಾನಾದಲ್ಲಿ । ಇದೇನಂದರಿಡುತೆ ॥ ದೊರಿ ಮಹಾಂತೇಶನ ಕೈಯಲ್ಲಿ ಕೊಡುತೆ । ಮುಂದೆ ಪುರವು ಹಾಳಾದರೆ ಕೂಡಿಕೊಂಡು ನಡುತೇ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

150 ನೇ ಪದ

ಆಯಿತ ಆಯಿತ ಆಯಿತ ಆಯಿತೆಂತೀ । ಆಗಮಾಡದೆ ನೀ ಕುಂತಿ ॥ ಹೋಯು ಹೊಯ್ತುಹೊಯ್ತೋಯೆಂಬುದ್ದು । ಹೋಗ ದೆಸುಳ್ಳೇ ಅಂತೀ ॥ ಪ ॥ ನೀತಡಕೀ ಆಯಿತಂತೀ । ನೀರುಕುಡಿಲಾಕೆಕುಂತಿ ॥ ನೀರಡಕಿ ನಿನಗಾದಮೇಲೆ ನೀರಿಂದಿನ್ಯಾಕೋಚಿಂತೀ ॥ 1 ॥ ಹಸಿವು ಏನಗಾಯಿತಂತೀ । ಹಸಿದು ಅಶನವೇ ತಿಂತೀ ॥ ಹಸಿವು ನಿನಗಾದಮೇಲೆ । ಅಶನದಿನ್ಯಾಕೊಚಿಂತಿ ॥ 2 ॥ ರತಿಯಮೋಹ ಆತ್ತಿಂತೀ । ಸತಿಯಳ ಕಾಲ್ದಸಿಲೆ ಕುಂತಿ ॥ ರತಿಯ ಮೋಹವಾದಮೇಲೆ । ಸತಿಯಳ ದಿನ್ಯಾಕೊ ಚಿಂತಿ ॥ 3 ॥ ನಿದ್ರಿಯನಗಾಯಿತಂತೆ । ನಿದ್ರಿಚೋಕಿಸುತೆ ಕುಂತಿ ॥ ನಿದ್ರಿ ನಿನಗಾದ ಮೇಲೆ । ನಿದ್ರಿಸುವದಿನ್ಯಾಕೊ ಚಿಂತಿ ॥ 4 ॥ ಸೊಗಸು ಎನಗಾಯಿತಂತಿ । ನಗುತ ಮಹಾಂತೇಶನಂತಿ ॥ ಸೊಗಸ ನಿನಗಾದಮೇಲೆ । ವಗಿಯುವದಿನ್ಯಾಕೊ ಚಿಂತಿ ॥5॥

151 ನೇ ಪದ

ಕಾಲ ಒದಗಿ ಬರುವಷ್ಟರ್ತಿಗೆ ನಿನ್ನ ಕರ್ಮವು ತೀರಿರಬೇಕಪ್ಪ ॥ ಬಾಲಪ್ರಾಯ ಮುಪ್ಪಾಗ ವತನಕೆ । ಆಯುಷ್ಯ ನಿಶ್ಚಿತಿಲ್ಲಪ್ಪ ॥ ಪಲ್ಲ ॥ ಕರ್ಮವು ತೀರೊಷ್ಟರ್ತಿಗೆ ಸಂಸ್ಕೃತಿ ಹರ್ಮವು ಹತ್ತಿಡಬೇಕಪ್ಪ ॥ ಧರ್ಮ ವಿಚಾರದಿ ಬಯಕೆಯು ತೋರುವದು । ವರ್ಮವನರದಿರಬೇಕಪ್ಪ ॥ 1 ॥ ತನು ಮನ ಧನ ತ್ರಿವಿಧ ವಂಚನಿಲ್ಲದೆ । ಘನ ಗುರುವಿಗೆ ಸಲ್ಲಿಸುವದಪ್ಪ । ಅಣುಹಿಡಿದಣುಮಾತ್ಮನಾದುದು ಎಂಬ ಅನುಭವ ಸಾಧಿಸುವದಪ್ಪ॥2॥ ನಿರಂಕಾರ ನಿರಸತ್ವವೆ ನಿಜಡರು ಇರು ಅರಮನಿ ತಾನಪ್ಪ ॥ಮೆರೆವ ಚಿಣಮಗೇರಿ ಗುರು ಮಹಾಂತೇಶನ ಪರಮ ನಿರಂಜನ ನೀನಪ್ಪ ॥ 3 ॥

152 ನೇ ಪದ

ಎಲ್ಲಿಗ್ಹೋದರೇನು । ಏನಾದರೇನಾದೊ । ಯಾವನಿಗಾಗದು ಸ್ವಾರ್ಥ । ಎಲ್ಲರು ಸರಿಯಾಗಿ ಸವಿಮಾಡಿಕೊಳ್ಳಿರಿ । ಸವಿಯಾದೊ ಶಿವನ ಪದಾರ್ಥ ॥ ಪ ॥ ಅವರ ಸೊಮ್ಮು ಅವರಿಗೆ । ಇವರ ಸೊಮ್ಮು ಇವರಿಗೆ । ಮಾಡಿದೊಳ್ಳೇದಲ್ಲೋ ಘರ್ತ ॥ ಭವ ಭವದೋಳು ತಂದು ಕಾಡಬೇಕೆಂಬುದು ಯಮನೀ ಗಿರುವದು ನಿನ್ನ ಗುರ್ತ ॥ 1 ॥ ಒಬ್ಬನ ಸಿಂತ್ರಿಸಿತಂದು । ಉಬ್ಬಿಲಿ ಹಬ್ಬವಮಾಡಿ । ಉಂಡೇರಾದೆನೊ ಸಮರ್ಥ ॥ ಕಬ್ಬಿಣ ಕುಡಿದ ನೀರಿನಂಗೇರಾಯಿತೇ । ಕುಂಡೀಲಿ ಕಳದೋ ನೀ ವ್ಯರ್ಥ ॥ 2 ॥ ಜರತಾರ ದಡಿಧೋತ್ರ ಹರಿಹರಿದು ಹೋಗುವದು । ಹಸನೇರಾದೇನೊ ಗಾತ್ರ ನರ ಅಸ್ತಿ ಚರ್ಮ ಮಂಡಲವಾಗಿ । ತಾ ತುಂಬಿತುಳಕ್ಯಾಡುವದು ಮಲ ಮೂತ್ರ ॥ 3 ॥ ನೆಲದಲ್ಲಿ ಹೂಳಿದು ನೀರಲ್ಲಿ ಮುಳಗುದ್ದು । ಅಗ್ನಿಯಲ್ಲಿ ಸುಟ್ಟುದ್ದೆಷ್ಟೊ ॥ ಸಲೆ ವಾಯಿ ಆಕಾಶಾತ್ಮನೊಳಾದುದ್ದು । ಗುರು ತೋರಿಸಿಬಿಡ ರವಿಯಷ್ಟು ॥4॥ ನಿತ್ಯವಾದ ವಸ್ತು । ಎತ್ತಹೋಗುವದಲ್ಲ । ಸುತ್ತಾಲೆ ನಟ್ಟಾದೀಮುಗಿಲು ॥ ನಿತ್ಯಚಿಣಮಗೇರಿ । ಕರ್ತು ಮಹಾಂತೇಶನ ಭೃತ್ಯೋಪಚಾರವೆ ಮಿಗಲು ॥ 5 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

153ನೇ ಪದ

ಮಾಡಿ ಉಣ್ಣೋ ಬೇಕಾದಷ್ಟು । ನೀ ಬೇಡಿ ಉಣ್ಣೋ ನಿಡಿದಷ್ಟು ॥ ಕೇಡಿಲ್ಲದರೊಳ್ಳೆಳ್ಳಷ್ಟಿ । ನಾನೋಡಿ ಹೇಳಿದೆನು ಖುಲ್ಲಷ್ಟು ॥ ಪ ॥ ಮಾಡಿ ಉಂಡುವಗೆ ಕರ್ಮವಿಲ್ಲ । ಬಲಿ ಬೇಡಿ ಉಂಡುವಗೆ ಧರ್ಮಿಲ್ಲ । ಮಾಡದೇ ಬೇಡದೆ ಮೂರು ಮಲವು ಕಳವು ಮಾಡಿದವಗೆ ಸುಖ ಧರ್ಮಿಲ್ಲ ॥ 1 ॥ ಮಾಡಿದವನುಂಡಾನು ಮಡಿಗಡಬ । ಎಲೋ ಮಾಡಲ್ಲದವನಿಗೇನಾದಲಡಬ ॥ ಮಾಡಿಸಿ ಬೇಡಿಸಿ ಕೊಂಡುಕೊಡದವನಿಗಾಡಬಾರದೊಪ್ಪಿಗದಡನು ॥ 2 ॥ ವಾಣಿ ಶುದ್ಧವಾಗಿ ನುಡಿಬೇಕೊ ॥ ನಿನ್ನ ಮಾಣಿ ಶುದ್ಧವಾಗಿ ನಡಿಬೇಕೊ ॥ ಪಾಣಿ ಶುದ್ಧವಾಗಿ ಕೊಡಬೇಕೊ । ಒಳ್ಳೆ ಕಾಣಿ ಶುದ್ಧವಾಗಿ ಕೊಳ್ಳಬೇಕೊ ॥ 3 ॥ ಪಾಪಿಯಬದಕದು ಪ್ರಾಯಶ್ಚಿತ್ತಾ । ನೋಡೊಪುಣ್ಯದ ಫಲ ಇದು ಸಂಪತ್ತ ॥ ಪಾಪ ಪುಣ್ಯಕೆ ಪಿತಜಗ ವ್ಯಾಪಿಸುವದು । ಹುಸಿ ಭವ ಬಿತ್ತ ॥ 4 ॥ ಸತ್ಯ ಹಿಡಿದು ಸಾವು ಪಾಡ । ಅಸತ್ಯಹಿಡಿದು ಬದುಕುವದು ಬೇಡ ॥ ಭೃತ್ಯನಾಗೋ ಮಹಾಂತಗೇ ಮೂಢ । ತನು ನಿತ್ಯವಲ್ಲ ಗಾಳಿಯಗೂಡ ॥ 5 ॥

154 ನೇ ಪದ

ಭವಮಾಲಿಯೆನಿಸುವ । ಭವನೋಡೋ ಮನವೆ । ಭವನೋಡೋ ಮನವೇ । ಅನುಭವ ನೋಡೋ ಮನವೇ । ಅವನಿವ ಅವಯವದೋಳೀಹ । ನವ ನವಗೂಡು ಘನವೇ ॥ಪ॥ ಮೂರು ಮೂರು ಮೂರಾರೌದು । ಮುವತ್ತಾರಾ ರಾಗಿಹುದು ॥ ನೂರುಸಾಸಿರಮೀರಿ ಬೇರೆ ಅರಿಗಾರೆನಿಸುವದು ॥1॥ ಎತ್ತ ನೋಡಿದರತ್ತಅದು ॥ ಅತ್ತೆಮಾಡಿದರತ್ತೆ ॥ ವತ್ತಿಹಿಡಿದರೊತ್ತಿಲಿಹುದು । ಮುತ್ತಲು ತನ್ನಸುತ್ತೆ ॥ 2 ॥ ತ್ರಾಸಿಗೊಸುರುಲಿಲ್ಲ । ಲೋಕೇಶ್ವರ ಸರಿಯಲ್ಲ ॥ ವಾಸ ಚಿಣಮಗೇರಿ । ಮಹಾಂತೇಶ ಕಾಸನಲ್ಲ ॥ 3 ॥

155 ನೇ ಪದ

ಸುಳ್ಳೆಂಬುವರಿವಗೆ । ಹೊಯ್ಯಿಬಾಯಿಮೇಲೆ । ಸವ್ವಾಲೆವ್ವ । ಸವ್ವಾಲೆ ॥ ಬೈವರಬೈಗಳು ಮಾಯ ಕೈಮೇಲೆ । ಸವ್ವಾಲೆವ್ವ ಸವ್ವಾಲೆ ॥ ಪಲ್ಲ॥ ಮಾಡಿದವರಿಗದು । ಮಾಡಿದಷ್ಟಾಗುವದು ॥ ಸ॥ ನೀಡಿದವರಿಗದು । ನೀಡಿದಷ್ಟಾಗುವದು ॥ ಸ ॥ ॥ 1 ॥ ಕಾಡಿದವರಿಗದು । ಕಾಡುವದೆ ಇರುವದು ॥ ಸ ॥ ಕೇಡಬಯಸಿದವರಿಗೇ ಕೇಡೇ ಆಗುವದು ॥ಸ ॥ ॥ 2 ॥ ಕೊಂದವರಿಗೀ । ಕೊಲಿಯೆಂದಿಗಿ ತಪ್ಪದು ॥ಸ॥ ನಿಂದೆಯಾಡಿದವರಿಗೇ । ಹಂದಿಯಜನ್ಮವು ॥ ಸ ॥ ॥3 ॥ ಬಾಯಿಗೆ ಬಂದಂಗೆ ಬೊಗಳುವ ಮಾನವರು ॥ ಸ ॥ ನಾಯಾಗಿ ಎಲವಾಯ್ದು ಹೊಲೆಗೇರಿ ಕಾಯುವರು ॥ ಸ॥ ॥4 ॥ ಮಾನವನಳಿದಾವ ಮಾನಿಲ್ಲದೆ ಹೋಗುವ ॥ಸ ॥ ಧನ್ಯದಹಿಸಿದವಗನ್ನೊಂದನಾಗದು ॥ ಸ ॥ ॥ 5 ॥ ಲಂಚವ ತಿಂದವ ಹಂಚಾಗಿ ಹೋಗುವ ॥ ಸ ॥ ಸಂಚಿತ ಭೋಗವು । ವಂಚಿಸಬಾರದು ॥ ಸ ॥ ॥ 6 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸಂತಾನನಳ್ಳಿದವ । ನಿಸ್ಸಂತನಾಗುವ ॥ ಸ ॥ ಸ್ವಂತೆರ ಹೆಳಿದರ ಅಂತರ ಪಿಶಾಚಿ ॥ ಸ ॥ ॥ 7 ॥ ನಿಷ್ಠಿಯಿಲ್ಲದವನು ತಾ ನಷ್ಟಾಗಿ ಹೋಗುವ ॥ ಸ ॥ ದೃಷ್ಟಿ ಒಳ್ಳೇದಿಲ್ಲದವ ಭಷ್ಟತಾನಾಗುವ ॥ ಸ ॥ ॥ 8 ॥ ಬಡವರ ಬಗಿವಲ್ಲ । ನಡಗೂಲಿ ಸಿಗಲಿಲ್ಲ ॥ ಸ ॥ ಉಡುವವರ ಸೇಶವಲ್ಲ । ಎಡದುಂಗಷ್ಟರಯಿಲ್ಲ ॥ ಸ ॥ ॥ 9 ॥ ದೈವಮನ್ನಿಸುವಲ್ಲ । ದೇವಷ್ಣ ತನಗಿಲ್ಲ ॥ ಸ ॥ ಸಾವಧಾನ ನಡಿಯಿಲ್ಲ ನೂತನಗ ಬಿಡಲಿಲ್ಲ ॥ ಸ ॥ ॥ 10 ॥ ತಾ ಪುಣ್ಯದವನಲ್ಲ. ಪಾಪದ ಭಯವಿಲ್ಲ ॥ ಸ ॥ ಆ ಪರ್ರಶಿವ ಮಹಾಂಪ್ಪನ ದಯವಿಲ್ಲ ॥ ಸ ॥ ॥ 11 ॥

156 ನೇ ಪದ

ಆ ಯಮಧರ್ಮನೇ ಸಾಧುಯಲೋ । ನೀ ಮಾಡುಬೇಡೋ । ವಿಪ್ರಭೇದವ ॥ ಸ ॥ ನಿಷ್ಟುರಹಳಿವ ನೋಡುವ ಭ್ರಷ್ಟರನವ ಕಾಡುವ । ಅಷ್ಟಾವರ್ಣ ಹಿಡದಾಡುವ ॥ ಅವಶ್ರೇಷ್ಠರು ಬರೆ ಇದ್ದರೋಡುವ ॥ 1 ॥ ಮಾಯೆ ಮೃತ್ಯೇಶ್ವರ ನಂಬುವ । ಬಾಯಬಡಿದು ಮನಕೊಂಬುವ ॥ ನಾಯಕನರಕ ತುಂಬುವ । ಅವ ಸುಗಣತರಿಗೆ ಶಿವನೆಂಬುವ ॥ 2 ॥ ಸುಲಭ ಚಿಣಮಗೇರಿ ಸಲೆಮಹಾಂತೇಶನ ಕಾರಿಯ ವಲಿಸಲು ಹೌದುಬ್ಬೈರಿಯ । ಅವವಲಿಯುವ ತನ್ನತಾ ವೈರಿಯ ॥ 3 ॥

157 ನೇ ಪದ

ಜಡದೇಹಿ ನೀನಲ। ಜಡ ಆತ್ಮನಾನೆಂಬಿ। ಜಡನಹೌದೆಂತೆಲೆ ಜೀವಾತ್ಮ ॥ ಜಡವಾಗ ಜಡಹೋಗ ಬಲ್ಲಡ ಜಡಜಡ । ಜಡಜಡವಲ್ಲನೀ ಪರಮಾತ್ಮ ॥ ಪ ॥ ಇಲ್ಲಾತ್ಮನೆ ನೀನಿದ್ದಾತ್ಮಾಗುವಿ । ಇದ್ದಾತ್ಮನೆ ನೀನಿಲ್ಲಾತ್ಮಾಗುವಿ । ಇಲ್ಲದ್ದೊಂದಿದ್ದ ದ್ದೊಂದಿದ್ದರೆ । ಇದ್ದುದ್ದು ಇಲ್ಲಾಗ ಬರದಿರೋದಾಗುವಿ ॥ 1 ॥ ಧರ್ಮವೊಂದಾಗಲಿಕ್ಕೆ । ಕರ್ಮ ಹತ್ತಾದವು । ಕರ್ಮವೊಂದಕ್ಕೆ । ಧರ್ಮಹತ್ತಾದವು । ಕರ್ಮಹತ್ತರೊಳ ಗಾದ । ಧರ್ಮ ಧರ್ಮೇಜಯ । ದರ್ಮಾತ್ಮರಿಂ । ಕರ್ಮ ಕರ್ಮೇಲಯ ॥ 2 ॥ ಧರ್ಮಾ ಗಬಲ್ಲುವಿ । ಕರ್ಮಾಗಬಲ್ಲುವಿ । ಧರ್ಮಾಗಿ ಕರ್ಮಾಗದಿದ್ದರೆ ॥ ಧರ್ಮವೇ ಧರ್ಮವು । ಕರ್ಮವೇ ಕರ್ಮವು । ಧರ್ಮ ಕರ್ಮಿಲ್ಲಾಗದಿರಬಹುದು ॥ 3 ॥ ಅರುವಾಗುವದಕ್ಕೆ । ನೀ ಅರುವಾಗು ದಿನಸಾದಿ । ಮರುವಿಗೆ ಮರುವಾಗೋ ದಿನಾಸಾದಿ ॥ ಅರುವಿನ ದಿನಸದು । ಎರವಾಗಬಾರದು । ಮರುವಿನ ದಿನಸರುವಾಗಿ ಸದು ॥ 4 ॥ ಆ ಅರುಮರುವಾಗುವದು । ಮರು ಅರುವಾಗುವದು । ಅರವು ತಾನಲ್ಲ ತಾ ಮರವಲ್ಲ । ಅರು ಆರುವಾದರೆ । ಅರವು ಹರದಿರಬೇಕು । ಮರು ವಾದರು । ಮರವು ಒದಗಿರಬೇಕು ॥ 5 ॥ ಅರುವಾಗ ಬಲ್ಲುವಿ । ಮರುವಾಗಬಲ್ಲುವಿ । ಅರವು ಮರುವು ಆಗಿದ್ದರೆ ॥ ಅರುವಿಗೆ ತಾನಧಿಕಾರಿಯೆಂದರೆ ಬೇರೆ । ಮರುವಿಗೆ ಮತ್ತೊಬ್ಬನೆನಬೇಕೂ ॥ 6 ॥ ಅರುವದು ಸುಖವನ್ನು । ಅರಿತೊಮ್ಮೆ ನೋಡಿದಿ । ಮರುವದು ಸುಖವು ನೋಡದರಂತೆ ॥ ಅರುವಾದರರುವಾದಿ । ಮರುವಾದರ ಮರುವಾದಿ । ನೆರೆ ಆದಹ್ಯರದಾಗದಿದ್ದರಿಲ್ಲ ॥ 7 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ರೂಪಾಗುವದಕೇ । ಆ ರೂಪಗೇಸನಬೇಕು । ರೂಪಾಗೋ ರೂಪಾದ್ದಿ ಎಲೆ ಆತ್ಮ ॥ ರೂಪಾಗೊರೂಪ ನಿರುಪಾದಮೇಲೆ । ಪಾಪ ಪುಣ್ಯಗಳೆರಡೇನಾವುದು ॥8 ॥ ಸತ್ತದೊಂದ್ವಿ ನೋದ ಅತ್ತದೊಂದ್ವಿನೋದ ಸತ್ತದ್ದೆಅತ್ತದ್ದು ಅತ್ತದ್ದೇ ಸತ್ತದ್ದು ॥ ಸತ್ತಾದರೆ ಚಿತ್ತಾಯಿತು । ಚಿತ್ತಾದರೆ ಸತ್ತಾಯಿತು । ಮತ್ತೊಂದಿದ್ರೆ ಹ್ವೇಳ ಮಹಾಂತ ನೀನಲ್ಲದ್ದು ॥ 9 ॥

158 ನೇ ಪದ

ಭಜನಿ ಪದ

ಕಾಯೋ ಶ್ರೀಸಾಂಬಶಿವ ಒಲ್ಲೆಭವ ॥ಪ॥ ಅಂಡಜ ಪಿಂಡಜ । ಶ್ವೇತಜ ರಾಯುಜ । ತಂಡ ಬಂಡೋ ನೀ ಭ್ರಮ ಅದೇ ಶ್ರಮ ॥ ಚಿತ್ರಸು ಸೋತ । ಮಿಶ್ರಜ ಭೀತ ॥ ಪತ್ರದೋಷ । ಇಹಪರ ಅಹೋಹರ ॥ 2 ॥ ಮೃಡಮಹರಿತೇಶ । ಹಿಡದಿರು ಕ್ಲೇಶ ॥ ಕೊಡು ನಿನ್ನೊಳೈಕ್ಯ ಪದನಿರ್ವಾಣದೆ ॥3॥

159 ನೇ ಪದ

ಮಂಗಳಾರುತಿ ಪದ

ಜ್ಯೋತಿ ಬೆಳಗುತಾದೋ । ಜಗಜಗ । ತಾನೆ ಹೊಳೆಯುತಾದೋ । ಜಗ ಜಗ ॥ ಜ್ಯೋತಿ ಬೆಳಗುತಾದ । ತಾನೆ ಹೊಳೆಯುತಾದ । ಜ್ಯೋತಿ ಬೆಳಗುತಾದೋ । ಜಗಜಗ । ತಾನೆಹೊಳೆಯುತಾದೋ । ಜಗಜಗ ॥ ಪ ॥ ಮಾನಸ ತುದಿ ಮೇಲೆ । ಜ್ಞಾನಕೆ ನಿಲಕದೇ ॥ ತಾನೆ ಹೊಳೆಯತಾದೋ । ಜಗಜಗ । ಜ್ಯೋತಿ ಬೆಳಗುತಾದೋ ಜಗಜಗ ॥ 1 ॥ ಹಸ್ತಮಗಿರಿ ಚನ್ನ । ಮಸ್ತಕದೋಳ ಚಲುವ ವಸ್ತು ಹೊಳೆವುತಾದೋ ಜಗಜಗ । ತಾನೆ ಹೊಳೆವುತಾದೋ ಜಗಜಗ ॥ 2 ॥ ಮಧ್ಯದಿ । ತುಂಗ ಗುಡ್ಡದಯೋಗಿ ॥ ಅಂಗ ಹೊಳೆವುತಾದೋ । ಜಗಜಗ । ತಾನೆ ಹೊಳೆವುತಾದೋ । ಜಗಜಗ ॥ 3॥

160 ನೇ ಪದ

ಕಡ್ಡಿ ಬತ್ತಿ ಪದ

ಕಡ್ಡಿಬತ್ತಿ ಬೆಳಗುಬನ್ನಿರೇ । ಕಾರುಣ್ಯನಿಧಿಗೆ । ಕಡ್ಡಿಬತ್ತಿ ಬೆಳಗುಬನ್ನಿರೇ । ಕಡ್ಡೀಬತ್ತಿಬೆಳಗಬನ್ನಿ । ಗುಡ್ಡದಯ್ಯಗ ಒಲಿಸುಬನ್ನಿ । ದಡ್ಡತನಬಿಟ್ಟು ನಾವು ದೊಡ್ಡ ಸ್ವಾಮೀ ಪಾದಕೆದೆರಗೀ ॥ಪ ॥ ಇಂದು ಮಡಿಯನುಟ್ಟುತೊಟ್ಟು । ಗಂಧಕಸ್ತೂರಿ ಫಣೆಯೋಳಿಟ್ಟು ॥ ಇಂದುಧರಗೆ ವೀಳೆಕೊಟ್ಟು ಮಂದಗಮನೆರ ಅರ್ತಿಯಿಟ್ಟು ॥1 ॥ ಲೋಕನಾಥನೆಂದು ಬಂದು । ಏಕದೇವ ಈತನೆಂದು ॥ ಕಾಕುಮನದ ಭ್ರಮಿಯ ಕೊಂದು । ಏಕಚಿತ್ತದಲ್ಲಿ ನಿಂದು ॥ 2 ॥ ದೇಶಕಧಿಕ ಚಿಣಮಗೇರಿ । ವಾಸವಾದ ಕವಿಯಸಾರಿ ॥ ಆಶಿ ಅಳಿದು ಹರುಷತಾಳಿ । ಮಹಾಂತಪದವಿ ಕೊಡುವಸೂರಿ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

161 ನೇ ಪದ

ಸ್ಥಲಾಂಗ ಭಕ್ತನ ಷಟ್‌ಸ್ಥಲದ ಪದಗಳು

ಶಿವ ಶಿವ ಶಿವ ಶಿವ ಶಂಭೋ ಶ್ರೀ ಮಹಾದೇವ ಶಿವಶಂಭೋ ॥ ಪ ॥ ಹಲವು ಜನ್ಮ ತಿರಗಿದ್ದೇ । ನಾ ಕುಲಛಲಕೆ ಮರಗಿದ್ದೆ । ಅಲ್ಲಿ ನೆಲಿಗಾಣದೆ ಸೊರಗಿದೆ ॥ ನಿನ್ನ ಹೊಲಬರಿಯದೆ । ಕೊರಗೀದೇ ಕೊರಗೀದೇ ಕೊರಗೀದೇ ॥ 1 ॥ ಮನ್ಮಥಗೊಡಲವು ಕೊಟ್ಟೇನಾ । ಸನ್ಮತಮಾರ್ಗವು ಬಿಟ್ಟೇನಾ । ಧರ್ಮತನೀತಿಯ ತೊಟ್ಟೇನಾ । ಉನ್ಮತ್ತಗುಣದಲ್ಲಿ ಕೆಟ್ಟೇನಾ । ಕೆಟ್ಟೇ ನಾ ಕೆಟ್ಟೇ ॥ 2 ॥ ಅಶನವ್ಯಸನ । ವ್ಯಸನಕ್ಕೆ ನಾ । ಪೆಸರವ ತೋರಿದೆ ಟಕ್ಕೆ । ಈ ವಿಷಯದ ಹೊನ್ನಿಯ ಹೊಕ್ಕೆ ॥ ನಾ ಬಿಸಜ್ಯಾಪ್ತಣುಗಗೆ ಸಿಕ್ಕೆ । ನಾ ಸಿಕ್ಕೆ ನಾ ಸಿಕ್ಕೆ ॥ 3 ॥ ಖಳಜನ ಗೆಳೆತನ ಮಾಡಿ । ನಾ ಹಳದೇನು । ಹಳಬರ ನೋಡಿ । ನಾ ಬಳಲಿದೆ ॥ ಬಲಕೋರ್ಯಾಡಿ ॥ ನಾ ಕಳೆಗಳೆದುಳದೇನು ಕೋಡಿ । ನಾ ಕೋಡಿ ನಾ ಕೋಡಿ ॥ 4 ॥ ಪೊಡವಿ ಯೊಳಗ ಚಿಣಮಗೇರಿ । ಆ ಸಡಗರ ಮರಡಿಯನೇರಿ । ಆ ಮೃಡಮಹಾಂತೇಶಗೆ ದೂರಿ । ನಾ । ಬಿಡಿಸಿಕೊಳ್ಳುವೆ ಭವದಾರಿ । ಭವದ್ದಾರಿ । ಭವದಾರಿ ॥ 5 ॥

162 ನೇ ಪದ

ಷಟ್‌ಸ್ಥಲ ವಂದಾಗೋ ಸಮಯಕ್ಕೆ । ಕಡಿ ಸಿಡಿಯತ್ಯಾಕೇ ॥ ಮಡಿ ವಾಳಯೋಗಿ । ನಾಗಶ್ಯಾಸ । ಸಿದ್ಧರಾಮ । ಮಹಾಂತಮಡದಿ ॥ ಷಟ್ ॥ ॥ ಪ ॥ ಆರುಸ್ಥಲವು । ಲಿಂಗವಾದರೆ ಮೂರಲಿಂಗ ಬೇರೆ । ಮೂರುಮುದ್ರಿ ಮುಂದ ಗೊಂಡರೇ ತಾರಾದ್ರಿ ದೂರೇ ॥ ಕಾರುಮಿಂಚೀನೊಳೊಪ್ಪು । ಕಣ್ಣಿಗೇ ತೋರಿ ತೋರದಂಧಕರೆ ॥ ಷಟ್ ॥ ॥ 1 ॥ ಅಷ್ಟಾವರ್ಣ ಅಂಗವಾಗಲು । ಸೃಷ್ಟಿ ಸೇವಿಸಿರಲು । ನಿಷ್ಟವಂತರಾಪ್ತರಾಗಲೂ । ಸೃಷ್ಟಿಚನ್ನಕ್ಕೆ ಮಿಗಲು ॥ ಭ್ರಷ್ಟ ಭಯವು । ಬಂದುನೋಡಲು । ಅಷ್ಟರೊಳಗೇ । ದೃಷ್ಟಿತಗಲು ॥ ಷಟ್‌ಸ್ಥಲವಂದಾಗೊ ॥ 2 ॥ ಬಲ್ಲೀದನೆನಸಿ ಮೆರೆವ ಬಿದನೂರ । ಅಲ್ಲಿರುವನ್ಯಾರು । ಸಲಲಿತ ಮಹಾಂತ ಮಹಾಗುರು ಬಲ್ಲವರೇ ಬಲ್ಲರದು ॥ ಎಲ್ಲಿ ಇಲ್ಲದನುಭವಕೇ । ಬೆಲ್ಲ ಬೇವ ಸವಿಯದ್ದೋದರು ॥ ಷಟ್ ॥ ॥ 3 ॥

163 ನೇ ಪದ

ವಿರಕ್ತರಪ್ಪ । ಜಂಗಮರಪ್ಪ । ಕೇಳಲಾಕೆ ಬರ್ತಾರ ಹೇಳೊ ನಮ್ಮಪ್ಪ ॥ ಹೇಳದಿದ್ದರೆ ನಿಮ್ಮ ಗೋಳ ನೋಡಪ್ಪ । ಸೋದರಳಿಯ ಚನ್ನಬಸವಣ್ಣ । ಬರತಾ ನಪ್ಪ ॥ ಪ ॥ ಆದಿ ಅನಾದಿ ಅಳಿದವರಪ್ಪ । ಮರ್ತ್ಯದೊಳಗೆ ಕರ್ತು ಮಾಡುವರಪ್ಪ ॥ ಮಾಡದಿದ್ದರೇ ಪಾತಕರಾಗುವರಪ್ಪ । ವಿರಕ್ತರಂಬುದು ಪುಟ್ಟಿತಲ್ಲಪ್ಪ ॥ 1 ॥ ವಿರಕ್ತರಂದರೆ ಮೂರಕ್ಷರಪ್ಪ । ಮೂರು ಮೂಲಿಗೆ । ಮೂರು ಲೋಕಾದವಪ್ಪ ॥ ಮೂರೇಳು ಯುಗವನ್ನು । ಮುಚ್ಚಿಹಾಕ್ಯಾದಪ್ಪ । ನಿಮ್ಮುತ್ಯನ್ನೆಷರ್‍ಯಾರಿಟ್ಟಾರ್ಹೇಳೊ ನಮ್ಮಪ್ಪ ॥ 2 ॥ ಮರ್ಕಟಬುದ್ಧಿಯವರು । ವಿರಕ್ತರಪ್ಪ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರಕ್ತಮಠದೊಳು ತೊಟ್ಟಿಲ ಕಟ್ಟುವನ್ಯಾರೆಪ್ಪ॥ ಇಂಥವರು ವಿರಕ್ತರು ಹೌದೇನಪ್ಪ। ಗುಡ್ಡದಮಹಾಂತೇಶ ಹ್ಯಾಂಗ್ಯಾಸ್ಯನೋ ತಪ್ಪ॥ 3 ॥

164 ನೇ ಪದ

ಅಯ್ಯಾಚಾರ ಮಾಡುವ ವೇಳೆಯಲ್ಲಿ ಹಳಿಪ್ಯಾಟಿ ಬಸಯ್ಯಗೆ ಹೇಳಿದ ಅಹಂಕಾರಕ್ಕೆ ಶಿಕ್ಷೋಪದೇಶದ ಪದ

ಹಿರಿದು ಕಿರಿದಾವದಾದರಿಯೋ ಖಳತಿಲಕ ॥ ಅರಿಯದರೀಯದಂದರೆ। ಹೊಡೆಯುವೇ ಕೆರು ಹರುತನಕ ॥ ಪ ॥ ನಿಮ್ಮ ತಂದಿತಾಯಿಯ ಸೊಮ್ಮು ಶುಕ್ಲಂಗಳಿಗೆ। ನಮ್ಮ ತಂದಿಯ ತಾಯಿ ಸೊಮ್ಮುಗಳಿಗೆ ॥ ಇಮ್ಮಡಿಯ ತೋರಿದರೆ ಸುಮ್ಮನೆ ನಾನಡಿವೆ। ಹಮ್ಮು ಮಾತಿನ ಹೊದರು। ಚುಮ್ಮಾ ನಿನಗ್ಯಾಕೋ ॥ 1 ॥ ನಿನಗೆಷ್ಟು ಮದಗಳವೋ ॥ ನನಗಷ್ಟು ಮದಗಳಾವೋ ॥ ನನಗೆಷ್ಟು ತನುವೋ। ಅವು ನಿನಗೆಷ್ಟು ತನುವೋ ॥ ನನಗೆ ಕರಣಂಗಳವೋ। ನಿನಗೆ ಕರಣಂಗಳಾವೋ। ಘನವನರಿಯದ ಬಡಶುನಕ ॥ ನಿನಗ್ಯಾಕೋ ॥ 2 ॥ ನಡಿನುಡಿಯು। ನಿನ್ನವೋ। ನಡಿನುಡಿಯು ನನ್ನುವೋ। ಬೆಡಗ ಸಡಗರ। ನಿನ್ನುವೋ। ನನ್ನುವೋ ॥ ಪೊಡ ವಿಯೊಳು ಮೆರೆವ। ಕಡಕೋಳ ವಾಸ। ಮಹಾಮಹಾಂತ। ಮಡಿವಾಳಖ್ಯನ ಗೊಡವಿ ತುಡಗ ನಿನಗ್ಯಾಕೋ ॥ 3 ॥

165 ನೇ ಪದ

ಬಸಯ್ಯಗೆ ಕುಲಮದದ ಶಿಕ್ಷೋಪದೇಶದ ಪದ

ದಾವದೋ ಕುಲ। ದಾವದೋ ॥ ಕುಲದ ವಿವರವ। ತಿಳದ್ಹೇಳೆಲ ಮೂಢ ॥ ಪ ॥ ಉಂಡನ್ನ ಉದಕದಿಂದೆ। ರಸ ಜಮಗೂಡಿ ತಿಮಿರೆದ್ದು। ತಾವಿರ್ವರು ಹೋರ್‍ಯಾಡಿ। ತಮ್ಮ ಇಬ್ಬರ್ವೀರ್‍ಯವು। ತಾವಂದುಮಾಡಿ ॥ ತಮ್ಮಪ್ಪ ನ್ಹೆಸರಿಟ್ಟು। ಅಳಳಳ ಹಾಡೀ ॥ 1 ॥ ಒಂಬತ್ತು ತಿಂಗಳ ತಾಯಿಯ ಹಾಟು। ತಂದಿಂದು ಅರಗದ್ಯಾಣಷ್ಟು॥ ಅದರೊಳು ಕೂಡಿ ಬಂದಾದ ಜೀವ ವಂದಿಷ್ಟು। ಮೂಬೆರಕಿ ಮೂಳ ನಿನಗ್ಯಾಕಿಷ್ಟು ನೇಟು ॥ 2 ॥ ಶ್ರೋಣತದೊಳು ಕುಲ ಇನ್ನೂರ ಹದಿನಾರು ಶುಕ್ಲದೊಳಗೆ ಆದೊ ಅದಕೆ ಅಪಾರೋ ॥ ಆತ್ಮನ ಲೆಕ್ಕವು ಅದು ಬಹುದೂರೋ। ನಿನ್ನ ಕುಲಾವುದು। ಇದರೊಳು ತೋರೊ ॥ 3 ॥ ಯೋನಿಯೊಳಗ ಹುಟ್ಟಿದಮೇಲೆ ಬಲ್ಲಾತನೇನೋ। ಬಲ್ಲಾತನಾದರೆ। ಖಿಲ್ಲತಾನೇನೋ। ಖಿಲ್ಲತಾನಲ್ಲಾದರೇ। ಹುಲ್ಲುಮಾತೇನೊ। ಹುಲ್ಲುಮಾತಿಲ್ಲಾದರಲ್ಲಮ್ಮ ತಾನೋ ॥ 4 ॥ ಬಿದನೂರ ಮಡಿವಾಳಯ್ಯನ ಮಾತು। ಹುಚ್ಚು ಹಂಗರಿಗಿ ಬಸಲಿಂಗಪ್ಪಗೇ ಮನಮೆಚ್ಚು॥ ಬಲ್ಲನುಭಾವಿಗೆ ಬೆಲ್ಲದ ಅಚ್ಚು। ಹಳಿ ಪ್ಯಾಟಿ ಬಸಯ್ಯಗಿದು ಎದಿಗಿಚ್ಚು ॥ 5 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

166 ನೇ ಪದ

ಲೊಚದಾವದೋ । ಇದರೋಳು ನೀಚದಾವದೊ ॥ ನಾಚುವದ್ಯಾಕೋ ಎನ್ನಮುಂದೆ । ಬೂಚರ್ಯಾಕೋ ಬರಿದಮೇಲೆ ॥ ಪ ॥ ತುಲ್ಲ ತುಣ್ಣಿಲಿಂದೆ ಹುಟ್ಟಿ । ಹೊಲ್ಲಹೊಲಿಯದೇಹ ತೊಟ್ಟಿ। ಬಲ್ಲೆನೆಂಬೋ ಬಿಂಕದಿಂದೇ । ವಳ್ಳಿವಳ್ಳಿ ಸುಳೆ ಕೆಟ್ಟಿ ॥ 1 ॥ ಹಾಲುಭ್ಹಾನ್ನ ಉಂಬೆನಂದಿ । ಹೇವು ತಿಂಬುದ್ಯಾವದ್ಹಂದಿ ॥ ಕಾಲ ಮೂಲನರಿಯದೆ । ಒಳ್ಳೆ ಶೀಲವಂತನಾಗಿ ಬಂದಿ ॥ 2 ॥ ಅರಳಗುಂಡಿಗಿ । ಹಳೆಯ ಪ್ಯಾಟಿ ಬಸವ । ಕುಲಥಲಕೆ ಹೋರ್‍ಯಾಡಿ ಪಶುವ ॥ ತಿಳಿಯೋ ನಿನ್ನ ನೀನೆ ಅಸವ ಒಳಗೆ ಹೊರಗೆ ಯಾವ ಯಶವ ॥ 3 ॥

167 ನೇ ಪದ

ಮಡಿವಾಳನು ಬಾಲ್ಯತ್ವದಲ್ಲಿ ಚಂಡು ಆಡುವಾಗ ನೀರು ತರುವ ಹೆಣ್ಣುಮಗಳಿಗೆ ಚಂಡುಹಾರಿ ಬಡಿಯಿತು. ಆ ಹೆಣ್ಣು ಮಗಳು ಹಾಟ್ಯಾ ಹಾಟ್ಯಾಯೆಂದು ಬೈದಳು. ಆ ವೇಳೆಯಲ್ಲಿ ಮಡಿವಾಳನ ತಾಯಿಯು ಬಂದು ಈ ಪದವನ್ನು ಹಾಡಿದಳು.

ಹಾಟ್ಯಾ ಹಾಟೆನುಬ್ಯಾಡ । ಹಾಟ ಸಣ್ಣದಲ್ಲ। ಅದು ಬಲು ದೊಡ್ಡದು ತಂಗೀ । ಅದು ಬಲು ದೊಡ್ಡದು ತಂಗೀ ॥ ಪ ॥ ಹಾಟಿನಲ್ಲಿ ಜಗನಾಟೀ ಉತ್ಪನ್ನ ವಾಯಿತು । ಅದು ಬಲು ದೊಡ್ಡದು ತಂಗೀ ॥ ಪ ॥ ತನುಯೆಂಬೊ ಪಟದಲ್ಲಿ ಘನ ಗುರು । ಶಿವತಾನು ವಾಸಮಾಡ್ಯಾನ ತಂಗಿ । ವಾಸಮಾಡ್ಯಾನ ತಂಗಿ ॥ ಈ ದೇಹ್ಯಾಕ ಬಂದು ಹಸುತೃಷೆಗೊಳಿಸಿತು । ಅದು ಬಲು ದೊಡ್ಡದು ತಂಗೀ ॥ 1 ॥ ಆಧಾರದಲ್ಲಿ ಬಂದು । ಭೇದಿಸಿ ಕುಳಿತೀತು । ಅದು ಬಲು ದೊಡ್ಡದು ತಂಗೀ । ಅದು ಬಲು ದೊಡ್ಡದು ತಂಗೀ ॥ ಸ್ವಾದಿಷ್ಟದಲ್ಲಿ ಬಂದು । ಮುಷ್ಟ್ಯಾಗಿ ಕುಳತೀತು । ಅದು ಬಲು ದೊಡ್ಡದು ತಂಗೀ ॥ 2 ॥ ಮಣಿಪುರದಲ್ಲಿ ಬಂದು । ಉತ್ಪನ್ನ ವಾಯಿತು । ಅದು ಬಲು ದೊಡ್ಡದು ತಂಗಿ । ಅದು ಬಲು ದೊಡ್ಡದು ತಂಗೀ ॥ ಅನಾಹತದಲ್ಲಿ ಬಂದು । ಅದ್ಭೂತವಾಯಿತು । ಅದು ಬಲು ದೊಡ್ಡದು ತಂಗಿ ॥ 3 ॥ ದೇವದಾನವರೆಲ್ಲ। ಮನಮುನಿಗಳೆಲ್ಲ। ಅದರೊಳಗ ಹುಟ್ಯಾರ ತಂಗೀ । ಆದರೊಳಗೆ ಹುಟ್ಯಾರ ತಂಗಿ ॥ ನಾವು ನೀವುಯಲ್ಲ। ಅದರೊಳಗೆ ಹುಟ್ಟೇವಿ । ಅದು ಬಲುದೊಡ್ಡದು ತಂಗೀ ॥ 4 ॥ ದರಿಯೋಳು ಬಿದನೂರ ಗುರುವಿರುಪಾಕ್ಷ ಅದರೊಳಗ ಹುಟ್ಯಾನ ತಂಗಿ । ಅದರೊಳಗ ಹುಟ್ಯಾನ ತಂಗೀ ॥ ಹಾಟ ತೀರದಮೇಲ ಗೂಟಕ ಬಡಿದಾರು। ಅದು ಬಲು ದೊಡ್ಡದು ತಂಗೀ ॥5॥

168 ನೇ ಪದ

ಮುಡಚಟ್ಟನೋಳು ಬಂದು । ಮುಟ್ಟಿ ತಟ್ಟಿ ಅಂತೀರಿ । ಮುಡಚಟ್ಟಿ ಎಲ್ಲ್ಯಾಽದ್ದೇಳಣ್ಣ ॥ ಮುಟ್ಟಾದ ಮೂರುದಿನಕ ಹುಟ್ಟಬಂದಿರಿ ನೀವು ॥ ಮುಡಿಚಟ್ಟೆ ಲ್ಲಾನದ್ದೇಳಣ್ಣ ॥ ಪ ॥ ತೊಗಲೊಳು ತೊಗಲ್ಹೊಕ್ಕು । ತಗಲಿ ಬಂದವ ನೀನು ತಗಲಮಾತಾಡುವರೇನಣ್ಣ ॥ ಇದರ ಬಗೆಯ ತಿಳಿಯದೆ।ವಗದು ಮಾತಾಡಿದರೇ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಗೀಗೇಡಿ ಕಾಣುತಾದಣ್ಣ ॥ 1 ॥ ಎಲವಿನಾಲಯದೊಳು । ಒಳಗೊಕ್ಕು ನೀಕುಂತು ಓಡ್ಯಾಡಬೇಡ ನೀಕೇಳಣ್ಣ ॥ ಎಲವು ತೊಗಲ ಮಲ್ಲಮೂತ್ರ ಮಾಂಸವು ನಿನ್ನಲ್ಲಿ ಕಾಣುತಾದಣ್ಣ ॥ 2 ॥ ಊರಸರಕವು ತಿಂದು ಬೋರ್ರ್ಯಾಡ್ಡಿಂಡುವ ಯಮ್ಮಿ । ಹಾಲಿನ ಸವಿ ನೋಡಣ್ಣ ॥ ಅದರ ಸ್ವಾದ್ಧತ್ತಿ ನೀ ಉಂಡು ಗಂಡಾಗಿ ಕುಂತೀರಿ ಶೀಲ ಎಲ್ಲಿ ಉಳಿತ್ತೇಳಣ್ಣ ॥ 3 ॥ ಊರಭಾವಿಯನೀರ ದಾರಾದರು ತರುವರು । ನಿಮ್ಮ ನೀರ ಬಾ ರಾವೇನಣ್ಣ ॥ ಲಿಂಡೆನಳ್ಳ ಹೋಗಿ ನದಿಯ ಕೂಡಿದಮೇಲೆ । ನೈವೇದ್ಯ ಹೇಗಾದವು ಹೇಳಣ್ಣ ॥ 4 ॥ ಸೂಸಲಾಡುವ ದೇಹ ಸೋಸಿ ನೀರವ ಮಾಡಿ । ಮಡಿ ಮಾಡಿಕೊಳಬೇಕಣ್ಣ ॥ ನಮ್ಮ ಧೀರ ಮಹಾಂತೇಶನ ಬಿಡದೆ ಕೊಂಡಾಡಿದೆರೆ । ಕುಡಿತಾನ ಮಡಿಯಾಗುವದಣ್ಣ ॥ 5 ॥

169 ನೇ ಪದ

ಪೂಜವೇನಲೋ । ನಿನ್ನ ಪೂಜವೇನೆಲೋ ॥ ಅಜ್ಞಬಾನ ಕಾಶಿಮಾಡಿ । ಕೊಜ್ಞನಂತೇ ತಿರುಗುತ್ತಿದ್ದಿ ॥ ಪೂಜವೇನೆಲೋ । ನಿನ್ನ ಪೂಜವೇನೆಲೋ ॥ ಪ ॥ ಜ್ಯಾತಿಭೇದ ಮಾಡಲಿಲ್ಲ । ಜ್ಯೋತಿರೂಪ ಕಾಣಲಿಲ್ಲ ॥ ಪ್ರೀತಿಪಕ್ಷಫಲವು ಪಡಿವ । ಸುಜಾಣನಲ್ಲ ॥ 1 ॥ ಶರೀರ ಧರ್ಮ ಅಡಗಲಿಲ್ಲ ॥ ಕರ್ಣಕರ್ಮ ಕಡಿಯಲಿಲ್ಲ ॥ ತಿಳಿಯಲಿಲ್ಲ । ಗುರುವು ಕೊಟ್ಟ ಮಂತ್ರದರ್ಥದರವು ಹಿಡಿದು ನಡಿಯಲಿಲ್ಲ ॥ 2 ॥ ಭುಕ್ತಿ ತಿಳಿಯಲಿಲ್ಲ । ಯುಕ್ತಿಶಕ್ತಿ ತಿಳಿಯಲಿಲ್ಲ ॥ ಯುಕ್ತ ಉಕ್ತ ಮಡಿವಾಳಾಖ್ಯ ಮುಕ್ತನೆಂಬುದು ಹೋಳಿಯಲಿಲ್ಲ ॥ 3 ॥

170 ನೇ ಪದ

ಯಂತು ವಿರತಿಯೋ ನಿಂದು । ಯಂತು ವಿರತಿಯೋ ॥ ಸಂತಿ ಸೂಳೀ ಮಗನೆ । ನಿನ್ನಂತರಂಗದನವು । ಅರಿಯಲಿಲ್ಲ ॥ ಪ ॥ ಇಂದ್ರಿನಿಂದು ಬಂಧುರೆಲ್ಲಿ ಇಂದ್ರಿ ಸೋಸುದೇನು ಬಲ್ಲಿ ॥ ಇಂದ್ರಿಯಂತಗಳಾದ । ಹತ್ತುರಂಧ್ರದ ವ್ಯವ್ಹಾರವದು ॥ 1 ॥ ಕೌಪೇವೀರ್ಯ ತೋಳಿಯೋ ಜಲದಿ ॥ ಅಪಮಾನ ತಿಂದ ಭವಿಯೋ ಪಾಳೀ ನೀಯಲ್ಲಿ ಹುಟ್ಟಿ । ತಾಪಬಡುವವ ಭಂಗನರಿ ॥ 2 ॥ ಮನವಿಕಾರ ತನ್ನೋಳಿರಲು । ಮನ ಸಜಾದಿ । ಆಗೋದ್ಹ್ಯಾಂಗ ॥ ಘನಕೆ ಘನ ಮಹಾಂತನಾತ್ಮ । ತನಯನೊಂಬೊ ಅನುಭವ ಅರೀ ॥ 3 ॥

171 ನೇ ಪದ

ನೋಡಿ ಭಜಿಸೊ ಮಹಾಂತೇಶ್ವರಲಿಂಗ । ಕೂಡಿಕೊಳ್ಳುವ ತಾ ನಿನ್ನಂಗ ॥ ಮಾಡಬೇಡೊ ಪರನಾರಿಯರ ಸಂಗ । ತೋಡೆ ದಿವಸ ಪ್ರಾಯ ಹುಚ ಮಂಗ ॥ ಪ ॥ ಅಷ್ಟಮದವನಳಿದಷ್ಟಪಾಶ ಪರಿದಷ್ಟಭೂತಗುಣಗಳು ನೀಗೋ । ಅಷ್ಟಾವರ್ಣ ಹಿಡಿದಷ್ಟಾರ್ಚನೆಯಿಂದಷ್ಟದಳದಿ ನೀ ಬೆರಗಾಗೋ ॥ ದುಷ್ಟಮಾನವರ ತಂಟಕೆ ಹೋಗದೆ । ನಿಷ್ಟವಂತರಿಗೆ ತಲೆಬಾಗೊ ॥ 1 ॥ ಆಶಿ ಬಿಡದೆ ಪರದೇಶವ ತಿರುಗುತ ಕಾಶಿಯಾತ್ರಿ ಮಾಡಿದರೇನೊ । ಸಾಸಿರ ಜನ್ಮದ ದೋಷವ ಕಳಿಯದೆ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಏಸೊ ದಿವಸ ಬದುಕಿದರೇನೊ ॥ ಕಾಸುವೀಸುಗಳು ದಾಸೋಹ ಮಾಡುತ । ಈಶನ ನೆನಿದರೆ ಕಡಿಮೇನೊ ॥ 2 ॥ ಪೊಡವಿಯೊಳಗ ಮಿಗ್ಗ ದೃಢಸೈದಾಪುರದಡ ವೀಗಿಡದ ಮೊರಡಿಗೆ ಬಂದೆ । ಪ್ರೌಢಮಹಾಂತೇಶನ ಬಡಗಲ ದಿಕ್ಕಿನೊಳು । ಒಡೆಯಹಾನ ಪರಮಾನಂದ । ಮಡಿವಾಳ ದೇಶಿಕ । ಬಿಡದ್ಹೇಳಿದ ಪದ । ನುಡುಕೊಂಬುವರಿಗೆ ಬಹುಚಂದ ॥ 3 ॥

172 ನೇ ಪದ

ಯಲಲೆ ಶ್ರೀ ಮಹಾಂತ ಮಾರಾಯ । ಸಲ್ಲುವದೇನೋ ನಿಮಗ್ಹಿಂತ ನ್ಯಾಯ ॥ ಅಲುಕುಮಲಕಿಗೆ । ತಳಕಿಕ್ಕಿದೆನ್ನರಿಯ ಸರಿಯದವಗಾಗದೀ ಸಾಯು ॥ ಪ ॥ ಹಡಗದ್ಯಾವರಕೊಬ್ಬನಟ್ಟಿ । ತುಡಗಿಗಿಗೊಬ್ಬನ ಬೆನ್ನಿಂದ ಬಿಟ್ಟಿ ॥ ಕಡಲ ದ್ರವ್ಯ ನೀ ಬಚ್ಚಿಟ್ಟಿ । ಬ್ಯಡದರೇನವ ಕೊಡುವನೆ ಶೆಟ್ಟೀ ॥ 1 ॥ ಕೋಟಿಕಾನಿಗೆ ಕಾವಲಿ ಇಟ್ಟಿ । ಕೋಟಿ ಇಲಿಗಳಿಗೆ ಅಪ್ಪಣೆ ಕೊಟ್ಟಿ ॥ ನೇಟಸೀದರೇನವ । ಕೊಡುವನೆ ತುಟ್ಟಿ । ಚೀಟಿಯೊಳಗಿದ್ದ ಲೆಕ್ಕ ಮುಂದಿಟ್ಟ ॥ 2 ॥ ಸಲಹಿ ಯನ್ನ ಮಾಡಿದಿ ಜಟ್ಟೀ । ಭಲೆರೆ ಹುಲಿಯಮೇಲ ಕಾಳಗಿ ಬಿಟ್ಟಿ ॥ ಕೊಲ್ಲಲು ಸ್ಥಾಯಲು ಬ್ಯಾಡೆಂಬೊದಿಟ್ಟಿ । ಚೆಲುವ ಮಹಾಂತ ಏನಿದು ತಿಟ್ಟಿ ॥ 3 ॥

173 ನೇ ಪದ

ಮಹಾ ಮಹಾಂತಯೆನ್ನಿ । ಜಯ ಜಯ ಮಹಾ ಮಹಾಂತಯೆನ್ನಿ ॥ ಆ ನಿರ್ವಯಲಾಗುವ ಬನ್ನಿ ಮಹಾ ಮಹಾಂತಯೆನ್ನಿ । ಜಯ ಜಯ ॥ ಪ ॥ ದಶನಾಡಿಗಳಿರ್ರ್ಯಾ । ಮೋಹದ ದಶ ಇಂದ್ರಿಗಳಿರ್ರ್ಯಾ ॥ ನಸಿಮುಸಿಯಾಗುವ । ಘಸಣಿ ಇದ್ಯಾತಕೆ । ದಶವಾಯುಗಳಿರ್ರ್ಯಾ ॥ 1 ॥ ನವನಾದಗಳಿರ್ರ್ಯಾ । ಅಲ್ಲಿ ನವ ಮೋದಗಳಿರ್ರ್ಯಾ ॥ ಅವ ಇವಯೆಂಬುವ । ಭವಭ್ರಮಿಯಾತಕೆ । ನವ ದೈವ ಗಳಿರ್ರ್ಯಾ ॥ 2 ॥ ಅಷ್ಟಭೂತಗಳಿರ್ರ್ಯಾ । ಯಲೊ ಯಲೊ । ಅಷ್ಟತನುಗಳಿರ್ರ್ಯಾ ॥ ಅಷ್ಟವಿಷ್ಟರೊಳು । ಕಷ್ಟಬಡುವದೇನು । ಅಷ್ಟಮದಗಳಿರ್ರ್ಯಾ ॥ 3 ॥ ಸಪ್ತಧಾತುಗಳಿ ರ್ರ್ಯಾ । ಪತಿವೃತ ಸಪ್ತಮಾತೃಗಳಿರ್ರ್ಯಾ ॥ ತಪ್ತವಾದ ಹುಸಿ ಸಪ್ತವಿದ್ಯಾತಕೆ । ಸಪ್ತವ್ಯಸನ ಗಳಿರ್ರ್ಯಾ ॥ 4 ॥ ಆರು ವರ್ಗಗಳಿರ್ರ್ಯಾ । ಮೇಲಾಧರು ಬ್ರಹ್ಮಿಗಳಿರ್ರ್ಯಾ ॥ ತೋರಡಗುವಾತನು । ಘೋರಿಸುವದ್ಯಾತಕೆ । ಆರು ಉರ್ಮಿಗಳಿರ್ರ್ಯಾ ॥ 5 ॥ ಪಂಚ ಕ್ಲೇಶಗಳಿರ್ರ್ಯಾ । ಶೋಕದ ಪಂಚಕೋಶಗಳಿರ್ರ್ಯಾ ॥ ಸಂಚರಿಸುವ । ಈ ಸಂಚರವ್ಯಾತಕೇ । ಪಂಚಪಾಶಗಳಿರ್ರ್ಯಾ ॥ 6 ॥ ನಾಲ್ಕು ಜಾತಿಗಳಿರ್ರ್ಯಾ ॥ ಮತ್ತು ನಾಲ್ಕು ಗಾತ್ರಗಳಿರ್ರ್ಯಾ ॥ ಮೆಲ್ಕಲೆ ಅರಿಯದೆ । ಹೀಲ್ಕುಲಯಾತಕೆ । ನಾಲ್ಕು ಕರಣಗಳಿರಾ ॥ 7 ॥ ಮೂರು ಪಾಪಗಳಿರ್ರ್ಯಾ । ಮರವಿಯ ಮೂರು ತಾಪಗಳಿರ್ರ್ಯಾ ॥ ಮೂರಾರೊಳಗೆ । ಮೀರುವದ್ಯಾತಕೆ । ಮೂರು ಗುಣಗಳಿರ್ರ್ಯಾ ॥ 8 ॥ ಎರಡು ಕರ್ಮಗಳಿರ್ರ್ಯಾ । ಸುತ್ತುವ ಎರಡು ವರ್ಮಗಳಿರ್ರ್ಯಾ ॥ ಎರಡೆರಡೆಂಬುವ । ಹುರಡಿ ನೋಳೇನದೆ । ಎರಡು ಸೊಮ್ಮುಗಳಿರ್ರ್ಯಾ ॥ 9 ॥ ಒಂದೇ ಜೀವಗಳಿರ್ರ್ಯಾ । ಹಲವು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಒಂದೇಭಾವಗಳಿರ್‍ಯಾ॥ ಒಂದ್ಯೊಂದ್ಯಾಗೆಲು । ಅಂದಿಂದ್ಯಾತಕೆ । ಒಂದೇ ಆತ್ಮಗಳಿರ್‍ಯಾ ॥ 10 ॥ ಸರ್ವ ಜ್ಞಾನಿಗಳಿರ್‍ಯಾ । ಸರ್ವ ಸುಖಿ ಸರ್ವಮೌನಿಗಳಿರ್‍ಯಾ ॥ ಸರ್ವ ಮಹಾಂತನೆ । ಇರುವದಿನ್ಯಾತಕೆ । ಸರ್ವ ಅಡುವಿಗಳಿರ್‍ಯಾ ॥ 11 ॥

174 ನೇ ಪದ

ಅಲ್ಲಂತ್ಯಾವದ್ದೇಳಲಿ । ನಾನು ಹೌದಂತ್ಯಾವದ್ದೇಳಲಿ ॥ ಅಲ್ಲೆ ಹೌದು ಹೌದೆ ಅಲ್ಲ । ಬಲ್ಲ ಜಾಣರು ಬಲ್ಲಂತಿರಲಿ ॥ ಪ ॥ ಶಾಸ್ತ್ರ ಓದಿ ಹೇಳ್ಯೋದ್ಹೌದು । ಶಸ್ತ್ರಪಿಡಿದು ಹೇಳೋದೌದು ॥ ಶಾಸ್ತ್ರೇಶಸ್ತ್ರ । ಶಸ್ತ್ರೆಶಾಸ್ತ್ರ । ಶಸ್ತ್ರಶಾಸ್ತ್ರ ವಸ್ತು ಅಲ್ಲ ॥ 1 ॥ ಧರ್ಮಬಿತ್ತಿ ಬೆಳೆವದ್ಹೌದು । ಕರ್ಮಹತ್ತಿ ಅಳಿವದ್ಹೌದು ॥ ಧರ್ಮೇ ಕರ್ಮ । ಕರ್ಮೇ ಧರ್ಮ । ಧರ್ಮ ಕರ್ಮಕೇ ವರ್ಮೇನಿಲ್ಲ ॥ 2 ॥ ನಾವು ಐನೋರೆಂಬದ್ಹೌದು । ನೀವು ಭಕ್ತರೆಂಬದ್ಹೌದು । ನಾವೇ ನೀವು ನೀವ್ಹೇ ನಾವು । ನಾವು ನೀವು ಮಹಾಂತೇಶನಲ್ಲ ॥ 3 ॥

175 ನೇ ಪದ

ನಗಬೇಕ ಏನಳಬೇಕ ॥ ಈ ಜಗದ ಜನರು ಮಾಡ್ವ । ಹಗರಾಣವನ್ನು ಕಂಡು ॥ ಪ ॥ ಆರು ವರ್ಗವನಿಳಿದವರಾರಿಲ್ಲೆಂಬುವರು । ಆರು ವರ್ಗವನಳಿದ । ಹಿರಿಯರನ ಸೇರರು ॥ ಆರು ಮೂರು ಮೂವತ್ತಾರೆಂದು ಹೇಳುವರು । ಘೋರ ನರಕ ಸಾಗರದೊಳು ಬೀಳುವರು ॥ 1 ॥ ಧರ್ಮವಾಚರಿಸಿರಲು ಓಲೈಸರು । ಕರ್ಮವ ಬೆರಸಿ ಕಂಡರೆ ಸೇರರು ॥ ನಿರ್ಮಲವಾದ ನಿಜವಮ್ಮನರಿಯರು । ವರ್ಮವಿಲ್ಲದೆ ವರ್ಮ ಹೊಂದಿಸಿ ನುಡಿವರು ॥ 2 ॥ ಒಮ್ಮನದವರ ನಂಬಿಗಿ ಕಂಡರೆ ಸೇರರು । ತಮ್ಮನ ನಂಬಲು ತಾವು ಕಡಿಗ್ಯಾಸರು ॥ ಗುಮ್ಮನೆ ನಮ್ಮ ಮಹಾಂತೇಶನ ಹೊಂದರು । ಚುಮ್ಮ ಸುಳ್ಳೆಮಕ್ಕಳು ಸುಮ್ಮನೆ ಕೆಡುವರು ॥ 3 ॥

176 ನೇ ಪದ

ಸಾಂಬ ಸದಾಶಿವ । ಕಾಯೊ ಹರಾ ॥ ಪ ॥ ಹಲವು ಜನ್ಮದಿ ನಿನ್ನ ಹೊಲಬದಪ್ಪಿದೆನಾ ॥ ಒಲಿದು ಈ ಭವಗೆಲಿಸಯ್ಯೋ ಹರಾ ॥ 1 ॥ ಕಕುಲತಿಗೆ ಮನಸಿಕ್ಕಿ ಬಳಲಿದೆನಾ ॥ ದುಃಖಬಡುವದೇನಯ್ಯಯ್ಯೋ ಹರಾ ॥ 2 ॥ ಮೃಡಮಹಾಂತೇಶನ ಹಡದ ಕುಮಾರನಾ ॥ ಬಿಡದೆ ಇರು ಹಿಡಿಬೇಗ ಕೈಯ್ಯೋ ಹರಾ ॥ 3 ॥

177 ನೇ ಪದ

ನ್ಯಾಯ ಹೇಳಿರಿ ಮಾನಾಡದೈವ । ನ್ಯಾಯಹೇಳಿರಿ ॥ ಪ ॥ ಒಬ್ಬವಳ ಹೊಟ್ಟಿಲೆ ಇಬ್ಬರು ಹುಟ್ಯಾರ । ಒಬ್ಬರಗೊಬ್ಬರು ಹೋರ್‍ಯಾಡುತ ॥ ಒಬ್ಬನವ್ವನೊಬ್ಬ ಉಬ್ಬುಬ್ಬಿ ಬೈವಾಗ । ಇಬ್ಬರ ಹೇಳುವದಲ್ಲ ಒಬ್ಬವನ ತೋರಿಲ್ಲ ॥ 1 ॥ ಸೂಳಿಯ ಮಕ್ಕಳು ಏಳೇಳು ಲೋಕವು । ಕಾಳಗದಲ್ಲಿ ಬಂದು ಕಾದುತಲಿ ॥ ಸೂಳೆಮಕ್ಕಳಿಗೆ ಸೂಳೆಮಕ್ಕಳೆಂಬ । ಸೂಳೆಮಕ್ಕಳಿಗೆ ಸೂಳೆ ಮಕ್ಕಳು ॥ 2 ॥ ಶಂಡನ ಸುಗಡಿಗೆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಗಂಡನಮಾಡಲು । ಗಂಡಗೆ ಗಂಡಸ್ತಾನಿಲ್ಲೆಂಬುವ್ವಳು ॥ ಪುಂಡ ಮಹಾಂತನ ಮುಂಡಿಗ್ಗಿ ಸಾಕ್ಷಿಯಾದ । ಕಂಡಮಾತಿಗೆ ಬಹಳ ಬಂಡಾಟವ್ಯಾತಕೆ ॥ 3 ॥

178 ನೇ ಪದ

ನಾವ್ಹ್ಯಾಂಗ ಮಾಡಬೇಕರೋ ಜಿನರ‍್ಯಾ । ನೀವ್ಹೇರೆ ಹೇಳಿಕೊಡಿರೋ ॥ ಕಾವಲಿಲ್ಲದ ನೀರ ಕಳಿಯದೆ ಕವಳಿಗೆ । ಮೋಹದ ಗಂಡ ಹಿಡಿದ ಮಲಿ ಉಂಬ ಕೂಸಿಗೆ ॥ಪ ॥ ಅಯ್ಯನೇ ಕರದೊಯ್ದು । ಭಕ್ತ ತನ್ನ ಸ್ತ್ರೀಗುಣನೀಡ ಹೇಳಿದ । ಪ್ರೀಯಹೋದ ಉದ್ಯೋಗಕ್ಕೆ । ಸ್ತ್ರೀಯಳು ಕರೆದಳೇಕಾಂತಕೇ ನಯಕೆ ಬಯಕೆ ಚಲ್ಲೆನಕೆ ಬಾಯಿಬಿಟ್ಟು ಬಯ್ಯುತಾಳೆ ॥ 1 ॥ ಆಳಿದರೆ ಗುರುವಿನಾಣೇ । ನೀ ಯನ್ನ ಆಳದಿದ್ದರೇ ಲಿಂಗದಾಣೇ ॥ ಬಾಳಗೇಡಿಯಾಗಬೇಡ । ಹೇಳಿದ ಭಕ್ತಗೆ ಮಾಚಬೇಡ ॥ ಅಳಿಯಬೇಡ ಉಳಿಯಬೇಡ । ಮೇಲೆ ನಿನ್ನ ಜಂಗಮದಾಣೆ ॥ 2 ॥ ಬಂಡಕೊಂಬ ಬಿದನೂರ ಪುರದ । ಈ ಮಾತು ಕಂಡೋಟು ಮಡಿವಾಳ್ಹೇಳಿದ ॥ ಗುಂಡುಳ್ಳವರ್ಹೋಗಬೇಡ । ರಂಡೇರಿಲ್ಲದ್ಹೋಗಬೇಡ । ಹಡಿರಿಯಬೇಡ ಹೊಡಿಯಬೇಡ । ಪುಂಡ ಮಹಾಂತೇಶನಾಣೆ ॥ 3 ॥

179 ನೇ ಪದ

ಅಜಪ್ತ ತಮಾಸಿ ಪೋಕ್ಯಾಳೋ । ಅಜ ಹರಿ ರುದ್ರಗ ಮೀರ‍್ಯಾಳೊ ॥ ಅಜಗುಜ ಮಾತಿಗೆ ದೂರಾಳೋ । ಮಜಮಹಜ್ಞಾನಕ ತೋರ‍್ಯಾಳೋ ॥ ಪ ॥ ಪೋರಿ ನೋಡಿದರ ತುತ್ತಹಾಳೋ । ದಾರಿ ತೆಲಿಮೇಲ ಹೊತ್ತಾಳೋ । ಸೀರಿ ನಿಲಿಗಿ ಮ್ಯಾಕೆತ್ಯಾಳೋ । ಮೂರುಲೋಕ ಮುರಿದು ಒಳಗೋತ್ಯಾಳೋ ॥ 1 ॥ ಈ ಹೆಣ್ಣಯಾರಿಗೆ ಕಾಣ್ಯಾಳೆ । ಎಲ್ಲರ ಕಣ್ಣಗ ಹೂಣ್ಯಾಳೊ ॥ ತುಣ್ಣಿಗಿ ಹುಟ್ಟಲ್ದ ಹೆಣ್ಣ ಹಾಳೊ । ಕಣ್ಣಕಟ್ಟೀ ನೋಡೊ ಕಾಣಸುತಾಳೋ ॥ 2 ॥ ತೊಗಲಮೇಲ ಬೆಳಸ್ಯಾಳ ತೆಪ್ಪ । ಮುಗಿಲಿಗಿ ಮುಟ್ಯಾಪ ನೋಡಪ್ಪ । ಅಗಲಾಡಿತು ಜಗ ಜನರಪ್ಪ । ಈ ಬುಗಲಿನೊಳಗೆ ಮಡಿವಾಳನೆಪ್ಪ ॥ 3 ॥

180 ನೇ ಪದ

ಮೃಡಮಹಾಂತೇಶನ ಬೆಡಗಿನ ನಿಜಸುಖ । ಹುಡುಕಿ ಪಡೆದ ಮಡಿವಾಳ ಯೋಗಿ ॥ ಪೊಡವಿಯೊಳಗೆ । ರೂಪ್ಹಿಡಿದು ಸಮಸ್ತಕೆ । ಹೊಡವಡುವೇನು । ಇದೇ ತಲೆಬಾಗಿ ॥ ಪ ॥ ಮೇಲುಗಿರಿಗೆ ಹೋದ ಲೋಕದವರ ಕಾಲಿಗಿ । ಬೀಳುವದ್ಹ್ಯಾಂಗಿಲ್ಲಿ ॥ ಈ ಲೋಕದ ಗಣಸಾಲದೆ ಶರಣೋಗಿ । ಮೂರ್ಲೋಕ ವಾದಾತನಾಗಿಲ್ಲಿ ॥ 1 ॥ ಚತುರ ಸಿಂಹಾಸನ । ಪತಿಗಳು ಪದಯುಗ ಧೃತಂಜ ಫಣೆ ತಿಲಕವನಿಟ್ಟೆ ॥ ನುತಶೆಡು ಕಟ್ಟ್ಯಾಧಿಪತಿಗಳ । ಮತ್ತೋರ್ಜಿತ । ನೀತಿ ಕೀರ್ತಿಗೆ ಕಿವಿ ಕೊಟ್ಟೆ ॥ 2 ॥ ಹಿರಿತನದವರುಟ್ಟರೆ । ದೊಗೆದೊಸನವ ಭರದಿ ಸೆಳೆದು

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮೈಗ್ದೊದುಕೊಂಡೇ ॥ ಪರಿಪಂಹಿ ಬಹುಬಗಿಯ ಮೆರೆವ ಮಹಾಂತರ । ಚರಣರಕ್ಷ ಕಣ್ಣಲಿ ಕಂಡೆ ॥ 3 ॥ ನೂರು ಸಾವಿರ । ಮತ್ತಾರು ಸಾವಿರ । ಆರಾರು ಸಾವಿರ । ಶೇಷನುಂಡೆ ॥ ಈರ ಭಕ್ತಗಣವಾರ । ಮುಡಿದ ಕೊರಳಹಾರ । ಪುಷ್ಪದ್ದೋಸನೆಗೊಂಡೆ ॥ 4 ॥ ವಸುಧಿಯಾಗಲದುಂಬೆ । ನವ ಮಹತ್ವದ । ಪೆಸರುಗೊಳ್ಳಿವದೆನ್ನಗಸವಲ್ಲ ॥ ಪಶುಪತಿ ಅಣುರೇಣ ಅಸಮೊ । ಘುಹಾ ಘುಘಾಂತೋ ಮಹಿಮನೆಂದುಸುರ್ವದು ವೇದದ ಸೊಲ್ಲ ॥ 5 ॥ ಎಲ್ಲ ಸ್ವರೂಪಿ ವಲ್ಲಭನೆಂಬುದು । ಬಲ್ಲೆ ನಲ್ಲದೆನ್ನಗೆರಡಿಲ್ಲ ಹುಲ್ಲು ಕಲ್ಲು ಹೌದಲ್ಲಿ ಇಲ್ಲಿ । ಹೊಲ್ಲದೋಳಾದೆಂಬೋದು ಸಲ್ಲ ॥ 6 ॥ ಚಂದ್ರದಿನಿಂದ್ರ । ಮುನೀಂದ್ರ ಗಣೇಂದ್ರ । ಋಷೀಂದ್ರ ಯತೀಂದ್ರಗೇ ಶರಣಾರ್ಥಿ ॥ ಇಂದ್ರ ಉಪೇಂದ್ರ ಖಗೇಂದ್ರ ಮೃಗೇಂದ್ರ ನಗೇಂದ್ರ । ದೀಗೇಂದ್ರಗೆ ಶರಣಾರ್ಥಿ ॥ 7 ॥ ರಾಗಿಗೆ ರೋಗಿಗೆ ಭೋಗಿಗೆ ಜೋಗಿಗೆ । ತ್ಯಾಗಿಗೆ ಯೋಗಿಗೆ ಶರಣಾರ್ಥಿ ॥ ಮಾಗಿಗೆ ಬೇಗಿಗೆ ಕಾಗಿಗೆ ಗೂಗಿಗೆ । ಸೋಗಿಗೆ ಶೀಗಿಗೆ ಶರಣಾರ್ಥಿ ॥ 8 ॥ ಜಾರಗೆ ಚೋರಗೆ ಬೀರಗೆ । ಪೀರಗೆ ಶೂರಗೆ ಶರಣಾರ್ಥಿ ॥ ಊರೀಗೆ ದಾರೀಗೆ ನಾರೀಗೆ ನೀರಿಗೆ । ಘಾರೀಗೆ ಮೀರೀಗೆ ಶರಣಾರ್ಥಿ ॥ 9 ॥ ಹಲವು ನಾಮರಿಗೆ ಹಲವು ರೂಪರಿಗೆ । ಹಲವು ಕ್ರಿಯರಿಗೆ ಶರಣಾರ್ಥಿ ॥ ಹಲವು ಜಾಣರಿಗೆ ಹಲವು ಮುಗ್ಧರಿಗೆ । ಹಲವು ಛಲವತಿಗೆ ಶರಣಾರ್ಥಿ ॥ 10 ॥ ಸರ್ವ ಕರಣರಿಗೆ ಸರ್ವ ಹರಣರಿಗೆ। ಸರ್ವ ವರಣರಿಗೆ ಶರಣಾರ್ಥಿ । ಸರ್ವ ಭರಣರಿಗೆ ಸರ್ವ ಮರಣರಿಗೆ । ಸರ್ವ ಶರಣರಿಗೆ ಶರಣಾರ್ಥಿ ॥ 11 ॥ ಸರ್ವಜೀವರಿಗೆ ಸರ್ವ ಭಾವರಿಗೆ । ಸರ್ವ ದೇವರಿಗೆ ಶರಣಾರ್ಥಿ ॥ ಸರ್ವ ಬ್ರಹ್ಮಾಂಡಕೆ ಸರ್ವ ಪಿಂಡಾಂಡಕ । ಸರ್ವ ನಿರ್ವಯಲಿಗೆ ಶರಣಾರ್ಥಿ ॥ 12 ॥ ವಿಲಸಿತ ನಿಜವಸ್ತು ಬಾಯಿಲಿ ಕಲಿತೋದಿದವರು । ಗೆಲಿದು ಕಳಿವರೆ ಈ ಭವ ದುಃಖವ ॥ ಸುಲಭ ಚಿಣಮಗೇರಿ ಸಲೆ ಮಹಾಂತೇಶನು । ಒಲಿದು ಕೊಡುವ ತಾ ಶಿವಸುಖವ ॥ 13 ॥

181 ನೇ ಪದ

ನಿರಾಲಂಬ ಸ್ವಯಂ ಬ್ರಹ್ಮ ನಿರ್ವಯಲ ಸ್ಥಲ

ಬ್ರಹ್ಮಯೆಂಬುವದದು ಬ್ಯಾರಿಲ್ಲ ॥ ಬ್ರಹ್ಮವೇ ತಾನ್ಹೌದೆಂಬುವನೆಲ್ಲ ॥ ಪ ॥ ಅಷ್ಟತನುವಿನ ಮರಿವಳಗಾದೆ । ಅಷ್ಟಮದಗಳ ತಳಿದುಳಿದಾದೆ ॥ ಅಷ್ಟ ಪಾಶಕೆ ಸಿಕ್ಕು ಮಿಕ್ಕ್ಯಾದೆ । ಅದು ಅಷ್ಟಪರ್ವತಕ್ಕಿಂತ ಸುತ್ತಲಿ ಬಹುಕಷ್ಟ। ಬಡಿಸುವ ಕಾಲಿಗೆ ಕಾಲ ಅದು ಇಷ್ಟು ಸಾಸ್ವೀ ಸಾವಿರಪಾಲ ॥ 1 ॥ ಯೋಗಿ ಭೋಗಿಯು ತಾನಾಗ್ಯಾದೆ । ಆಗ ಮಗಳಿಗೆ ಅಣಕಿಸುತಾದೆ ॥ ಅದು ಹ್ಯಾಗೊ ಯಂದರೆ ಬಂಧನ ಭಾರ । ನಾ ಬೇಗ ತಿಳಿವೇನಂದರೆ ಘೋರ । ಈ ಭೂಗಗನದೊಳು ತುಂಬ್ಯಾದ ಪೂರ ॥ 2 ॥ ಆರು ಮೂರ್‍ಕೈರಡಳಿದೊಂದೆ ಅದೆ । ಮೀರಿ ಅಗಣಿತ ತೋರುತಲಾದೆ ಬಾರೆನುತ ಕರೆದರೋ ಎನುತಾದೆ ॥ ಅದು ಆರಿಸಿ ನೋಡಲು ಕಾಣುವದಲ್ಲ। ವಿಸ್ತಾರ ಹೇಳಲು ಬಾಯಿಗೆ ಬೆಲ್ಲ। ಬಿದನೂರ ಮಡಿವಾಳ ದೇಶಿಕ ಬಲ್ಲ ॥ 3 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

182 ನೇ ಪದ

ತಾನೆ ಬಯಲಾಗುವದೊ ತನ್ನೊಳು ತಾ ತಿಳಿದ್ಹೋಗುವದೋ ॥ ತಾನೆ ನಾನು ನೀನೆಂಬೋಸಾರಮಪ ತಿಳಿದಮೇಲೆ ॥ ಪ ॥ ಚಿಕ್ಕವರೆಲ್ಲರು ಕೂಡಿ ಚಕ್ಕನೇ ಗ್ರಾಮವನ್ನು ಮಾಡಿ ಪಕ್ಕನೆ ಹೆತ್ತವರು ಅತ್ತ ಕರೆಯಲು ! ಆಟವೆಲ್ಲ ಲೊಳಲೊಟ್ಟಿ ಆಗಲು ॥ 1 ॥ ಡೊಂಬರೆಲ್ಲರು ಕೂಡಿ । ಬೊಂಬಿ ಆಕಾರವ ಮಾಡಿ । ಅಂಬರ ದೊಳಗೆ ಗಿಮಿಗಿಮಿ ತಿರುಗುತ್ತೆ । ಸಂಭ್ರಮಾಗಲೇ ಸರಿದು ಹೋಗಲೆ ॥ 2 ॥ ಛಲವ ನೆಲ್ಲವ ಹರಿದು । ತಾನದು ಮುಟ್ಟಿಯನು ಬಿಗಿದು । ಸಲೆ ಮಹಾಂತೇಶನು ಮಟ್ಟೆಯನುಳಿಸಲು । ನೆಲೆಯಿಲ್ಲದೆ ತಾ ನೆಲೆಗಾಣಲೋ ॥ 3 ॥

183 ನೇ ಪದ

ಭೇಡೊ ಭವಬ್ರಾಂತ। ಯಾವನೋ ಮಹಾ ಮಹಾಂತ ॥ ಮಾಡಿದ್ದೆಲ್ಲವು ತಾನೇ । ಆಗುದ್ದೆಲ್ಲವು ತಾನೇ। ನಿನಗ್ಯಾಕೊ ಏಕಾಂತ ॥ಪ॥ ಪೈಲೆ ಹುಟ್ಟಿದವನ ಹೆಸರ ಇಟ್ಟರ‍್ಯಾರ‍್ದೇಳೋ । ಸೋ ಎಂಬೋ ಅರ್ಥ ನಿನಗೆ ತಿಳಿಯದಿದ್ದರೆ ಕೇಳೊ ॥ 1 ॥ ನಾಮ ಆತಾಗಿರಬೇಕಾದರೇ । ಅಕ್ಷರ‍್ಯಾರಿಂದಾದಾ'ವೋ ॥ ಆ ಮಹತ್ವನಿಂದಾದಕ್ಷರ ಆತಗೆ ನಾಮ್ಹ್ಯಾಂಗಾದವೋ ॥ 2 ॥ ವಸ್ತು ನೋಡಿರೆಂದು । ಕಣ್ಣು ಕಿಸ್ತು ತೋರುತ್ತಿದ್ದರು ॥ ವಸ್ತುನೋಡುವವನ । ತಾವ್ಯಾವಲ್ಲಿ ಬಚ್ಚಿಟ್ಟಿದ್ದಾರೋ ॥ 3 ॥ ಬ್ರಹ್ಮವೆಂದು ಕೂಗುತಾವೋ । ಬಲ್ಲವೇನೊ ವೇದ ॥ ಬ್ರಹ್ಮ ತಾ ಮುಂಚಿದ್ದಮೇಲೆ ವೇದ ಬಲ್ಹ್ಯಾಂಗಾದಾವೋ ॥ 4 ॥ ಬ್ರಹ್ಮತಾ ತಾನಾಗುವದಕ್ಕೆ । ವೇದ ಅಗಣಿತ ಆದವೋ ॥ ಬ್ರಹ್ಮಾನೂದನಾದೆಂನೆಂಬೊ ಯೋಗಿಗೇನಾದವೋ ॥ 5 ॥ ಸ್ವಾಮಿ ಸ್ಮರಣೆನೇಮಿಸಿ ನೀ ಪರವಾಸದೊಗಿದ್ದೇ ನಂದಿ ॥ ಕಾಮತಾರ್ಥ ಕೊಡುವದಕೆ ಸ್ವಾಮಿ ಬಂದರೇನಂದಿ ॥ 6 ॥ ಪಂಚಮುಖಿ ಸಹಸ್ರಮುಖಿ । ಅನಂತಮುಖಿ ಆಗಮಶುದ್ಧಿ॥ ವಂಚನಿದ್ದಮೇಲೆ ನಿನ್ನ ಗಾಗುವದೇನಾಸಿದ್ಧಿ ॥ 7 ॥ ಬಸವ ಎನಗೆ ತಾಯಿ ತಂದಿ । ಬಂಧು ಎಂದು ಸಾರಿದಿ ॥ ಬಸವ ಪುರಾಣ ಶಿವಪೂಜೆ ಪೆಟ್ಟಿಗಿ । ಯಾರಮೇಲೆ ಹೇರಿದ್ದಿ ॥ 8 ॥ ಹರ ಹರಿ ಎಂಬ ಮತನ ಹಿಡಿದು । ಮಥನವು ಮಾಡಿಹೋದರೊ ॥ ಹರ ಹರಿ ಅವರ‍್ಹ್ಯಾಂಗಿರಲಿ ತಮ್ಮ ನೀನೆ ತಿಳಿಯೋ ನೀದಾರೋ ॥ 9 ॥ ಕಂಜನಂದರೆ ಕಂಜನಾದಿ । ಕುರಜನಂದರೆ ಕುಂಜನಾದಿ ॥ ನಂಜುಂಡಂದರೆ ಅದು ಕಂಡರ್ಥ । ಮುಂದಕೆ ನಡಿಯೋದಂದಿ ॥ 10 ॥ ಒಂದೆ ಮಂತ್ರ ಒಂದೇ ಜಪಮಣಿ । ಒಂದೇ ಮನ ಸಾಕಾಗದೆ । ಸಂದೇಹದಲ್ಲಿದ್ದು । ಸತ್ತುಹೋಗಿ ಜನ್ಮ ನೀಗದೆ ॥ 11 ॥ ಕಂಡವರ ಕಂಡು । ಉಂಡು ಉಟ್ಟು ಇಟ್ಟ ತೊಟ್ಟು॥ ಪುಂಡಲೆಂಡ ಶಂಡತನವು ಎಲ್ಲ ಇಲ್ಲೆ ಇಟ್ಟ ॥ 12 ॥ ಡಂಬಕದ ಡಂಬರವ ಕಂಡು । ನಂಬಿದಾಯಿತಲ್ಲದೆ ॥ ಡಂಬಕ ಒಂದು ಹೋದಮೇಲೆ । ಇಂಬು ತನಗಿನ್ನೆಲ್ಯಾದೆ ॥ 13 ॥ ಬಲ್ಲವರು ತಾವು ಕೇಳೋದಿಲ್ಲ । ಅರಿಯದವರಿಗ್ಹೇಳೋದಲ್ಲ ॥ ಎಲ್ಲಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಇಲ್ಲದಂತಾದೊಂದು । ಏನೊ ತಾಸೌಗ್ಯಾದಲ್ಲ ॥ 14 ॥ ದಡ್ಡನಾಗಿ ದೊಡ್ಡ ಗುಡ್ಡ ದಯೋಗಿಯೆಂದೆ ನಲಿದೆ ॥ ದಡ್ಡನಲ್ಲ ಶಾಣೆನಲ್ಲ । ಮೊದಲೆ ನಾನಿಲ್ಲದೇ॥ 15 ॥

184 ನೇ ಪದ

ಕಲ್ಪಿತವು ನಿನಗ್ಯಾಕೋ ಕಂದ॥ ನಿರ್ವಿಕಲ್ಪ ತಾ ಬ್ರಹ್ಮಾನಂದ ॥ಪ॥ ಒಂದೇ ಬಹು ಸಂದೇಹವೇನೊಏದು ಬಂದೆ । ಬಹು ಸಂದೇಹವೇನೊ ॥ ಅದು ಏಸೋಂದಾಗುವದಿಲ್ಯಾಕ ತಾನೋ ॥ 1 ॥ ವೇದ ವೇದ ವೇದಾಂತವು ಮಿಥ್ಯ ॥ ನೀನು ಸಾಧಿಸುವದೇನಾದೊ ಸತ್ಯ ॥ 2 ॥ ಸತ್ಯ ಸುಲಭ ಶ್ರೀ ಗುರು ಮಹಾಂತೆಲ್ಲ॥ ಮಹಾ ಚಲುವ ಮುಕ್ತಿಯಂಬುದೇನಿಲ್ಲ ॥ 3 ॥

185 ನೇ ಪದ

ಇಲ್ಲೇ ಇದ್ದದ್ದ ಇದ್ದುದಿಲ್ಲೇ । ಅದು ಸೊಲ್ಲಲಾಗದು । ಸುಮ್ಮನಲ್ಲೆ ನಲ್ಲೆ ॥ ಪ ॥ ಸ್ಥಾಣುವಿನಲ್ಲಿ ಕಂಡಚೋರ । ಅದು ಕಾಣಲು ಮತ್ತೊಂದಾಕಾರ ॥ ಮಾಣದು ನಾನಾ ವಿಚಾರ । ಅಪ್ರಮಾಣವೆನಿಸುವ । ಓ ಪರನಲ್ಲೆ ॥ 1 ॥ ನೋಡಲು ನೋಡಲಾದದ್ದು । ಹೋಗಿ ನೋಡಲು ಮುಂದಕ್ಹೋಡದು ॥ ಗೌಡ ತಿರಗಲೆಂದೆ ಬಾಹುವದು । ಕೈನೀಡಿ ಹಿಡಿಯೋ ಬಯಲಾಗುವದು ನಲ್ಲೇ ॥ 2 ॥ ಮೊದಲೇ ಬ್ಯಾರೆಂಬೋದೊಂದುಂಟು । ಆದಕ್ಹಿದರುವದೇ ವಾಜಿಮಿಗಂಟು ॥ ನದರಿಕ್ಕುವವ ಯಾವತಂಟು । ನೀ ಚದುರೆ ಹೇಳಿದಕ್ಯಾಕೇಳೆಂಟು ॥ 3 ॥ ಮನಿಯೋಳು ಮಲಗಿಕೊಂಡಲ್ಲಿ । ನೀನು ಕನಸಿನೋಳೋಡ್ಯಾಡುವದೆಲ್ಲಿ ॥ ಘನಬಿನಗಿನ ದಿನಸಲ್ಲಿ । ನೀ ಕಂಡದನ್ನು ತಿಳಿ । ಮದಲೇನು ಬಲ್ಲಿ ॥ 4 ॥ ಪೊಡವಿಯೊಳಗೆ ಕಡಕೋಳ ತನ್ನ । ಪಡದವರವಗುಣ ಹಾಳ ॥ ಮೃಡ ಮಹಾಂತಪುರ ಮಡಿವಾಳ । ಸಂಸಾರ ನಡಸಿದ ಅಳಳಳ್ಳುಪ್ಪಿ ಹೇಗೆ ॥ 5 ॥

186 ನೇ ಪದ (ಮುಕ್ತಿಸ್ಥಲ)

ಇಲ್ಲೇ ನಿಜನಿರ್ವಯಲೋಳು । ತೋರಡಗುವ ಹುಸೀ ಸ್ವಯಂಭು ತಾನೇ ॥ ಎಲ್ಲ ಸದ್ರ ವಿಚಿತ್ತಕರಣ । ನೆರಳೆಂಬು ಗುರಳೀಗತಾನೇ ॥ ಪ ॥ ತಾನೇ ಮಹಾದಾಕಾಶ ಗಗನಗುಂಹೆಗುಪ್ತ ಅನಾಮಿಕ ತಾನೇ ॥ ಮಿಸುಕು ಸ್ಪಂದಳಳನೆಹ ತರೇಣಣು ಮಹಾಮಹಾತ್ಮ ತಾನೇ ॥ 1 ॥ ತಾನೇ ಚಿತ್ಕಳೆ ಚಿನ್ನಾದವ ಚಿದ್ಬಿಂದುಯೆನಿಸುವದು ತಾನೇ ॥ ತಾನೆ ಅಸ್ತಿಭಾತಿಪ್ರೀತಿ ಆದದ್ದು ತಾನೇ ॥ 2 ॥ ಕನ್ನೇಸ್ವನ್ನೆರಾಕೃತಿ । ಸುಪ್ತಭುಜಂಗಸ್ವರೂಪವು ತಾನೇ ॥ ಓಂನಮಃ ಶಿವಾಯ ಸಿದ್ದಂ ಅಂಅಃಳಕ್ಷರಕ್ಷರವು ತಾನೇ ॥ 3 ॥ ಆದಿ ಅನಾದಿ ಸುರಾಳ ನಿರಾಳೆಂದ ನುಪಮಂ ನಿರೂಪಂ ತಾನೇ ॥ ವೇದಾಗಮ ಶಾಸ್ತುಪನಿಷದೆಂತ್ರವು । ಮಂತ್ರವು ತಂತ್ರವು ತಾನೇ ॥ 4 ॥ ಒಂದೆರಡ್ಮೂರು ನಾಲ್ಕೈದಾರೇಳೆಂಟೊಂಬತ್ತು ತಾನೇ ॥ ಮುಂದ್ಹತ್ತು ಶತಸಹಸ್ರ। ಅನಂತ ಸಂಖ್ಯಗಣಿತಗಣಿತವು ತಾನೇ ॥ 5 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ಫಟಿಘಟ್ಟಿ ಕಾಲೋ ಯಲೋ ಯುಗ ಜುಗ ಪ್ರಳಯೆಪ್ರಳಯವು ತಾನೇ ॥ ಸ್ಫಟಿಕ ಘಟಾಂತರ ಜ್ಯೋತಿಯೋಳ್ಳಿಸೆವ । ತೇಜೊರಾಶಿಯು ತಾನೇ ॥ 6 ॥ ತನು ಕರುಣೇಂದ್ರಿಯು ಘ್ರಾಣ ಪ್ರಕೃತಿ ಪರಿಪೂರ್ಣ ವಯವು ತಾನೇ ॥ ತನ್ಮಯ ಚಿನ್ಮಯ ನಿರುಪಾದಿ ರೂಪಾದಿ. ಸಹಜಸಹಜವು ತಾನೆ ॥ 7 ॥ ದೃಗಮನ ಭಾವವಸ್ತ್ರ ಮುದ್ರಲಕ್ಷಲಕ್ಷವು ತಾನೇ ॥ ಬಗ್ಗೆ ಬಗೆ ಚಿತ್ರವಿಚಿತ್ರ । ದಶಾಂಗುಲ ಪ್ರಮಾಣ ಪ್ರಮಾಣವು ತಾನೇ ॥ 8 ॥ ಕುರುಡ ಕುಂಟಾದರು । ಕರಚಲ್ವಾದರು । ಮರಣರು ವಿಲ್ಲವು ತಾನೇ ಬರೆಮೈಯಿದ್ದರು । ಜರತರ ಹೊದ್ದರು । ತಿರಿತನ ದೊರಿತನ ತಾನೇ ॥9॥ ಅರಗಳಿಗಳಿಯಲು । ಸ್ಥಿರ ವಾಗುಳಿಯಲು । ಅಳಿಯುವದು ಉಳಿಯುವದು ತಾನೆ ॥ ಖರೇಮುರಿಕರವಿಗೆ ಒಪ್ಪುವತಿಪ್ಪೆಗೇ । ದೋಷಕ್ಕೆ ದೋಷನು ತಾನೇ ॥10॥ ಹುಟ್ಟದ ಘೊದಲೇನದು ಸತ್ತಾಯ್ತು । ಸತ್ತದ್ದು ಹುಟ್ಟದು ತಾನೇ ॥ ಹುಟ್ಟೋದು ಸಾಯುವದು । ಭ್ರಾಂತಿಗೆ ಭ್ರಾಂತ ಭ್ರಾಂತವು ತಾನೇ ॥ 11 ॥ ತಾನೇ ನೀನು ನೀತಾನಲ್ಲ । ನೀ ತಾನಾಗದು ಇಲ್ಲತಾನೇ । ತಾನಾದರಿದುದ್ದು । ತಾನಾದ್ದರಿಯದು । ಯೇನೋ ತಾನಲ್ಲ ತಾನೇ ॥ 12 ॥ ಭುವನದೋಳ್ಳೊಪ್ಪುವ । ಕಡಕೋಳ ಗುಡ್ಡದ ಮಹಂತಪುರ ಪತಿಯು ತಾನೆ ॥ ತವನಿಧಿ ನಿಜ ಸುಖ । ಸುಧಾಬ್ಧಿಚಂದ್ರಮ । ಭವಮುಕ್ತ ಆದಿತ್ಯತಾನೇ ॥ 13 ॥

187 ನೇ ಪದ

ಓ ಎಂಬುವದ ನೀದೋರುವದೇನೊ ॥ ಅಲ್ಲಿ ಬಾಯೆಂಬೋ ಕರ್ತ ಯಾವ್ವಾನೋ ॥ ಪ ॥ ಕರದರೋ । ಯನುವದು ಕರಿಯೋ ॥ ತನ್ನ ಕರದವ ಯಾವ್ವಾನೋ । ನಾನಾದರಿಯೋ ॥ 1 ॥ ತನ್ನನ್ನೇ ತಾ ಕರಕೊಂಬ ॥ ತಾನೇ ತಾನಿದ್ದೀರಲದೋಯಂಬೋ ॥ 2 ॥ ಸ್ವಯವೇ ಶ್ರೀ ಗುರು ಮಹಾಂತೇಶ ॥ ಒಳ್ಳೆ ಕ್ರಿಯವೇ ತಾ ಕರ್ಮುಪದೇಶ ॥ 3 ॥

188 ನೇ ಪದ (ಭಜನಿ ಪದ)

ಶಿವ ಶಿವ ಶಿವ ಶಿವ ಸದಾಸ್ಮರಣಿ ಶಿವನಾಮವೋವೋ ॥ ಪ ॥ ನಡಿನುಡಿ ಕೆಡಗುಡದ್ಧಿಡದಾಚರಿಸುವೇ ॥ ದೃಢಸಡಗರ ವ್ಯಾವ್ಹಾರವೋವೋ ॥ 1 ॥ ಲಯ ಗಮನಂಗಳ । ಬಯಲ ನಿವಾರಣ । ದಯಾನಿಧಿ ಗುರುಪಾದಸೇವವೋವೋ ॥ 2 ॥ ಅಷ್ಟವಿಧಾರ್ಚನೆ । ತೃಷ್ಟಿಕನಕಮಲ ॥ ದೃಷ್ಟಿಸಿಲಿಂಗ । ಶಿವದ್ರಿಷ್ಟಿವೋವೋ ॥ 3 ॥ ಪಾವನ ಜಗದಘದಾವನ ॥ ಮತ್ಸಜೀವನ ಜಂಗಮದೇವವೋವೋ ॥ 4 ॥ ಷಡುಶಕ್ತಿಯ । ಷಡುಲಿಂಗ ಷಡುಸ್ಥಲ ॥ ಷಡುಸಮರಸ । ಸದಾತ್ತವೋವೋ ॥ 5 ॥ ಹಲವಿದರ್ಹೊಲಬಿನ । ನೆಲೆಕಲೆ ಅರಿಯಲು ಸಲೆಬಲುಶೀಮೆಯೆ ! ಶಿವಧ್ಯಾನವೋವೋ ॥ 6 ॥ ಭವವಿರಹಿತದನುಭವ । ಮಹಾಂತೇಶನ ॥ ಅವಿರಳ ಸುಖ ಮನ ನಲಿಯವೋವೋ ॥ 7 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

189ನೇ ಪದ

ನೋಡೆ ಆತಪವಾರ್ಧಿ । ಇದ್ದಷ್ಟೆ ಇಲ್ಲದ್ದು ।। ನಾಡಹಗರಾಣವಿದು । ಹೌದಾದೋ ಅಲ್ಲಾದೊ ।। ಪ ।। ಕ್ಷಣತಾಸು । ದಿನಮಾಸು । ಎಣಿಸೊ ಬಹು ಯುಗಗಳೇಸು ।। ಅಣುರೇಣು ಜಗವೇಸು । ಗುಣಿಸು ಭಾಗಿಸು ವೋಸು ।। 1 ।। ಅದೆ ಬ್ರಹ್ಮವಾಯಿತು ಒಂದು । ಇದೌ ಹಮ್ಮು ಇದುವ್ಹೊಂದು ।। ಅದು ಇದು ಇಲ್ಲೆಂದು । ಭೇದರೆ ತಿಳೀ ಮುಂದು ।। 2 ।। ಬಿಸಲದೊರಿ ನೀರಿಗೆ । ತೃಷಿಯಿಂದೆ ಮೃಗಹೋಗೆ ।। ಆಸುವಳಿದೋಯ್ತು ಹ್ಯಾಗೆ ।। ಉಸರಲೇನದು ಈಗೆ ।। 3 ।। ದೂರವು ತೋರಿತು । ಸಾರವು ಸಾರಿತು ।। ಮಾರಿಗೆ ಮೀರಿತು । ಬ್ಯಾರ್ಯಾಗಿ ಬೀರಿತು ।। 4 ।। ಅಲ್ಲಿಯೂ ಬಿಸಲಲ್ಲೆ । ಇಲ್ಲಿಯೂ ಬಿಸಲಲ್ಲೇ ।। ಎಲ್ಲಮಹಾಂತನಲ್ಲೆ ನಲ್ಲೇ ನಿಮ್ಮಂತೀಲೆ ।। 5 ।।

190 ನೇ ಪದ

ಆಡಬಾರದು ಮಾತು । ಆಡಿದೆ ನಿನಗೊತ್ತು ।। ನೋಡಲಾದದು ಧಾತು ನಾಡೆಲ್ಲ ಹಬ್ಬೀತು ।। ಪ ।। ಬಾಯಿಲ್ಹೇಳುವದಲ್ಲ । ಕಿವಿಗೆ ಕೇಳುವದಿಲ್ಲ ।। ಮೈಗೆ ಮುಟ್ಟುವದಲ್ಲ । ಕಣ್ಣಿಗೆ ಕಾಣುವದಿಲ್ಲ ।। 1 ।। ಕಾಲಿಂದ ನಡೋದಿಲ್ಲ । ಕೈಯಿಲಿಂದ ಹಿಡೋದಿಲ್ಲ ।। ಸೋಲುಗೆಲುವದಲ್ಲ । ಕೂಡಲಕ್ಕಿರಡಿಲ್ಲ ।। 2 ।। ಮನವು ನೆನವುದಲ್ಲ । ಮನಕೆ ತಾಬ್ಯಾರಿಲ್ಲ । ಘನಕೆ ಗೋಚರವಲ್ಲ । ತನಗೆ ತಾ ಮಹಾಂತಿಲ್ಲ ।। 3 ।।

191 ನೇ ಪದ

ಪಾಮರತ್ವವು ಬ್ಯಾಡ । ಆತ್ಮರಾಮ ನಾಮೋರಾಮ ।। ಕ್ಷಮವಂತ ನೀನಾಗು ಸಜ್ಜನಪ್ರೇಮ । ಸದ್ಗುಣಧಾಮ ।। ಪ ।। ಪುರಾತರೋಚನವು ಬಲ್ಲಿ । ಕೇಳುವೀ ಕಿರಾತನುಡಿ ಕಿವಿಯಲ್ಲಿ ।। ದುರಾತ್ಮನೀಗುವಲ್ಲಿ । ನೀನು ಸ್ಥಿರಾತ್ಮ ನಾಗುವದೆಲ್ಲಿ ।। 1 ।। ಬಲ್ಲಿದತ್ವವು ಬರಲಿ । ಗುರು ಚರದಲ್ಲಿ । ವಿಶ್ವಾಸವಿರಲಿ ।। ಬಲ್ಲವಗೇನಿದು ಹರಲಿ । ನೋಡಾಸ್ತಿ ಸಲ್ಲದು ಸಂಸ್ಕೃತಿ ಇರಲಿ ।। 2 ।। ಕಡಕೋಳ ಮೃಡ ಮಹಾಂತೇಶ ತಾನೇನೆ ಮಡಿವಾಳ ಜ್ಞಾನಪ್ರಕಾಶ । ಹಿಡಿದಿರು ಮನದೊಳು ಕ್ಲೇಶ ನಿಜಸುಖಪಡಿ ತೊಡಕದು ಭವಪಾಶ ।। 3 ।।

192 ನೇ ಪದ

ಜಯತೆಂದು ನಮಿಸುವೆ । ಜಯತೆಂದು ನುತಿಸುವೆ । ಜಯ ಜಯತೆಂದು ಒಲಿಸುವೇ । ಶೋಬಾನ್ವೇ ।। ಈ ಮಹಾಂತನ । ಜಯತೆಂದಾರುತಿ । ಬೆಳಗುವೇ । ಶೋಬಾನ್ವೇ ।। ಪ ।। ಆಧಾರದೊಳ್ ಭಕ್ತಿ ನಾದಸಕ್ರಿಯಶಕ್ತಿ । ಆದ ಆಚಾರಲಿಂಗ ತಾನೇ । ಶೋಬಾನ್ವೇ । ಈ ಮಹಾಂತನ । ಸಾಧಿಸಿ ನಾನು ತಿಳದೇನ ।। ಶೋ ।। ।। 1 ।। ಸ್ವಾಧಿಷ್ಟನಾದಿ ಮಹೇಶಾ । ನಾದಸುಜ್ಞಾನಶಕ್ತಿ ಆದ ಶ್ರೀ ಗುರುಲಿಂಗ ತಾನೇ ।। ಶೋ ।। ಈ ಮಹಾಂತನ ಭೇದಿಸಿ ನಾನು ತಿಳದೇವ ।। ಶೋ ।। ।। 2 ।।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಮಣಿಪುರಕ ಪ್ರಸಾದಿ । ಗುಣಮಣಿ ಇಚ್ಛಾಶಕ್ತಿ । ತ್ರಿಣಯ ಶಿವಲಿಂಗನಾದ ತಾನೇ ಶೋಬಾನ್ವೇ ॥ ಈ ಮಹಾಂತನ ಅಣಿವಿಗಣವಾಗಿ ತಿಳಧೇನ ॥ ಶೋ ॥ ॥3॥ ಅನಾಹತದೋಳ್ ಪ್ರಾಣ ಘನಲಿಗಿ ಆದಿಶಕ್ತಿ । ಅನಗ ಜಂಗಮಲಿಂಗ ತಾನೇ ॥ ಶೋಬಾನ್ವೇ ॥ ಈ ಮಹಾಂತನ ಮನಶುದ್ಧವಾಗಿ ತಿಳಿದೇನ ॥ ಶೋ ॥ ॥4॥ ವಿಶುದ್ಧಿಯಲ್ಲಿ ಶರಣ ಸುಶುದ್ಧ ಪರಶಕ್ತಿ । ಪ್ರಸಿದ್ಧ ಪ್ರಸಾದಲಿಂಗ ತಾನೇ ॥ ಶೋ ॥ ಈ ಮಹಾಂತನ ತ್ರಿಶುದ್ಧವಾಗಿ ತಿಳದೇನ ॥ ಶೋ ॥ ॥5॥ ಅಗ್ನಿಯೋಳೈಕ್ಯನಾದ ಆಜ್ಞಾತ್ಯ ಚಿತ್ತ ಶಕ್ತಿ । ತಾ ಜ್ಞಾನಮಹಾಲಿಂಗ ತಾನೇ ॥ ಶೋ ॥ ಈ ಮಹಾಂತನ ಮಹಾಜ್ಞಾನದಿಂದ ತಿಳದೇನ ॥ ಶೋ ॥ ॥6॥ ಇಷ್ಟಪ್ರಾಣನು ತಾನೇ । ದೃಷ್ಟಭಾವನು ತಾನೇ । ಅಷ್ಟರೋಳ್ ಆದ ಮಹಾಂತನೇ ॥ ಶೋ ॥ ಈ ಮಹಾಂತನ ನಿಷ್ಠಿಯೋಳಿರ್ದು ತಿಳದೇನ ॥ ಶೋ ॥ ॥7॥ ಆ ಲೋಕ ಈ ಲೋಕ ಮಾಲೋಕ ಮೇಲ್ಗಿರೀ ಮೇಲ ಹೊದಕಿಯ ಆದ ತಾನೇ ॥ ಶೋ ॥ ಈ ಮಹಾಂತನ ಮೂಲವು ನಾನು ತಿಳದೇನ ॥ ಶೋ ॥ ॥8॥ ತಾನೇ ತಾನೆರಡಾದ । ತಾನೇ ತನೊಂದಾದ ನಾನು ನೀನೆಂಬೋದೆರಡೇನ ॥ ಶೋಬಾನ್ವೇ ॥ ಈ ಮಹಾಂತನ ತಾನೆ ನಾನಾಗಿ ತಿಳಿದೇನ ॥ ಶೋಬಾನ್ವೇ ॥ ॥9॥

193 ನೇ ಪದ

ಭವಬಂಧವು ಬೇಕಾಗಿ । ಮುಕ್ತಿ ಬಹಸುವ ಶಿವಶರಣರು ಹೇಳಿರಿ । ಇದಕೇನು ಮಾಡುವ ॥ಪ॥ ಕೊಡುವೇನಂದರೆ ಕೊಳ್ಳ । ಕೊಡದಿದ್ದರೆ ಬಿಡುವಲ್ಲ ॥ ಕೇನು ಮಾಡುವ ॥ಪ॥ ಕೊಡುನೆಂದರೆ ಕೊಳ್ಳ । ಕೊಡದಿದ್ದರೆ ಬಿಡುವಲ್ಲ ॥ ಬುಡನದು ಕಡಿಗಾಣದೇ । ನುಡಿಗಡಣವು ಬಹುಬಲ್ಲ । ಬಿಡಹೋಗಿ ಗಂಟು ಬಿದ್ದಿತು । ಮಾರ್ಬಡಿಸಬಲ್ಲ ದೃಢ ಭಕ್ತರೆಲ್ಲ । ಸಂಹರಿಸಿರಿ ಸುಳ್ಳಲ್ಲ ॥1॥ ಸತಿ ಸುತ ಸೊಸಿ ಮೊಮ್ಮಗಳಳಿಯ । ಪಿತ ಮಾತಕ್ಷೇತ್ರದಿ । ಶಿ ಸಹಸ್ರ ಸ್ವರೂಪ ಆಪ್ತ ಬಂಧು ಬಂದಷ್ಟು ॥ ಸತತ ಸೌಭಾಗ್ಯವಾಗಲು । ಸುಮ್ಮನಿರನಿಷ್ಟು । ಗತವಾವಾದರದಕೆ ಸಮ್ಮಿ ಸನ್ಯಾಸ ಕೆಳ್ಳಷ್ಟು ॥2॥ ಭೋಗವ ಬಿಟ್ಟು ಯೋಗವು ಮಾಡೆ ಬೋಳ್ಕೀರ್ತಿ । ಭೋಗವ ಬಾರದು । ಯೋಗದಿ ಮುಕ್ತಿಂದಿಗಿಲ್ಲ ॥ ಭೋಗವಿರಲು ಭೋಗಿಸುವನೆ ಭೋಗೇಶ್ವರ । ಯೋಗವಾಗಲು ಮಹಾಂತ್ಯೋಗಿಗೆ ರಾಗಿಲ್ಲ ॥3॥

194 ನೇ ಪದ

ಗೋಪ್ಯವಾಗಿದ್ದನುಭವ ಹೋಳೊದೆನ್ನ ಕಡಿಗೆ ಅಪ್ಯಾಯನ ಮಾಡಿ ಕೊಂಬುವದು ನಿನ್ನ ಕಡಿಗೆ ॥ಪ॥ ಸ್ಮರನ ಕಾಮದ ದ್ರವ್ಯ ವ್ಯವಹಾರವೆಂದು । ಈಸು ತಂದು ಸರಿಪಾಲಿಗೆ । ಸತಿ ಪತಿಗಳು ಮಾಡಿದ ವ್ಯವಹಾರವು । ತರುಣಿಗೇ ನುಳಿತು ತನಗೇನು ಬಂತು ॥ ಯರವಿನವರು ಯರವು ವಯ್ದರೆ । ಮೋರಿ ಆಯಿತು ಹೆಳೆಕೆರವು ॥1॥ ಇಚ್ಛೆ ಇಲ್ಲದ ಮನವು ಮುಚ್ಚುಗೊಳಿಸುವದೇನು । ಹುಚ್ಚ ನಾಯಿಗೆ ಕಚ್ಚು ಕಲಿಸಿದಂತೆ ॥ ಕಚ್ಚಗಡಕರಿಗೆ । ನಿಜದೆಚ್ಚರ ಇನ್ನೆಲ್ಲಿಹದೋ ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಸ್ವಚ್ಛವಾದಾತ್ಮಜ್ಞಾನೊಂದೆ ನಿಶ್ಚಿಂತೇ ॥ 2॥ ತಾಯಿ ಮದವಿಯಾದವಗೆ ವಾಯು ನ್ಯಾಯಗಳುಂಟೆ ಬಾಯಿ ಮುಕಳಿಯ ಮುಚ್ಚಿಕೊಂಡಿತು ॥ ಮಾಲೋಕ ಸಾಯದೇ। ಸತ್ತ ಕಡುಕೋಳ ಗುಡ್ಡದ ಮಹಾಂತೇಶನ । ಜಿ ಎಂಬುವುದಾಗಿ ಪಾಣಿಮೇ ಡುಬೇ ನವಲಾಕ ॥5॥

195 ನೇ ಪದ

ಮೋಕ್ಷ ಅಪೇಕ್ಷಾದವ ಗುರುವಿನ್ಯಾಕ ಹುಡುಕ । ಸಾಕ್ಷಾತವನ ತನ್ನೊಳು ಮಾಡ್ಯಾನಡಕ ॥ಪ॥ ಅಷ್ಟಭೋಗೈಶ್ವರ್ಯ ಕೊಟ್ಟಮೇಲವಗೆ॥ ನಷ್ಟಾಗ್ಗೊ ಭವ ಬಂಧ ಹುಟ್ಟಿಲ್ಲದವಗೆ ॥ 1 ॥ ಅರ್ಥ ಪ್ರಾಣಭಿಮಾನ । ಹೋದಮೇಲವಗೆ ॥ ತುರ್ತು ಜೀವನ್ಮುಕ್ತಿ ಬಾರದ್ಯಾಕಿವಗೆ ॥ 2 ॥ ತನ್ನಾತ್ಮ ಸುಖ ಸಂಭ್ರಮಾಗಲೆಂದವಗೆ ॥ ಜೀವ ಭಾವದ ಭ್ರಮಿ ಇದ್ಯಾತಕಿವಗೆ ॥ 3 ॥ ವಾಜಿಮಿ ಅನುಭವ ಮೋಜಾಯಿತಿವಗೇ ॥ ಲಾಜೀಮಿ ನಿರ್ವಾಣ ತೇಜಿಸಿತವಗೇ ॥ 4 ॥ ಕಡಕೋಳ ಗುಡ್ಡದ ಮಹಾಂತಪುರದಪಗೇ । ವಡಲಾದ ಮೇಲೆ ಶಾವಿರಲ್ಲಿದಿವಗೇ ॥ 5 ॥

196 ನೇ ಪದ

ಇಲ್ಲದ ಸೊಂಟದ ಗಾಳಿದ್ದು। ಎಲ್ಲ ತಾನಾಯಿತ್ಯಾಂಗೆ। ಬಲ್ಲನುಭವಿಗಳು ತಿಳಿರಿ ಎಲ್ಲಲೋಕಾಗುವದ್ಯಾಂಗೆ ॥ ಪ ॥ ಆಯಿತು ಅಗತ್ಯ ಅಗತ್ಯ ಆಯ್ತು। ಆಯಿತೆಂಬೊ ಮಾಯಿತೇನಾಯಿತು । ಆಯಿತಾಗ ಸೌಖ್ಯ ಸ್ವಯತಾಗಿ ಆಯ್ತಾಯ್ತು ಇಂತೆಂಬೋದೇನಾಯ್ತು । ಆಯಿತಾಗೋದಾಗೋದಾಯ್ತು ॥ ಕೈಯಿಂದೆ ಮಾಡೋದಾಯ್ತು। ಬಾಯಿಂದೆ ಹೇಳೊದಾಯ್ತು॥2॥ ಆದುದಕೆ ಆದುದ್ದಾಯಿತು। ಆದದ ಕದೇ ಆಯ್ತು ॥ ವೇದವೇದಾಂತ ಸಿದ್ಧಾಂತವಾಯಿತು । ಮೋದ ಮುದ ಮಹಾಂತ ಮಹಾಂತಾಯ್ತು॥ 3 ॥

197 ನೇ ಪದ

ಸ್ವಯಂಜ್ಯೋತಿ ತನ್ನ ಬೆಳಗೆ । ತ್ರಿಲೋಕವಾಯಿತೊಳಗೆ ॥ ಸ್ವಯಂ ಬ್ರಹ್ಮಯಂಬೋ ತಿಳಿಗೆ । ಸ್ವಯಂವಾಗದಾಗದಿಳಿಗೇ ॥ಪ॥ ಲಗೆ ತಗೆಮಿಗಲಾಗು ತಾದೇ । ಭುಗಿಲ್ ಭುಗಿಲೆಂಬತಾದೇ ॥ ದಗದಗ ದಹಿಸುತಲಾದೇ । ಜಗಜಗ ಜಗಾಸುತಾದೇ ॥ 1 ॥ ತಣ್ಣಗಲ್ಲ ಬೆಚ್ಚಗಿಲ್ಲ ಸಣ್ಣದಲ್ಲ ದೊಡ್ಡದಲ್ಲ। ಬಣ್ಣವೊಂದು ತೋರೋದಲ್ಲ। ಕಣ್ಣಿಗೆ ಕಾಣುವದಿಲ್ಲ॥ 2 ॥ ಕ್ಷಣಗಳಿಗೆ ತಾಸುವಿಲ್ಲ। ಎಣಿಸಲಿಕ್ಕಾಗೆ ಸಾಲದಲ್ಲ। ಅಣುರೇಣುವಾಯಿತಲ್ಲ। ತೃಣದ ತೂಕಾಗದೆಲ್ಲ॥3॥ ಜನನಿ ಜನಕಾದಿ ಬಂದು ॥ ವನತಿ ಮನಿ ಮಕ್ಕಳೆಂದು ॥ ನೆನವು ಮನಬಾರದೆಂದು ತನುವು ತನಗಾಗದೊಂದು॥ 4 ॥ ಆಯಿತಂದರೆ ಆಗಲಿಲ್ಲ। ಹೋಯಿತೆಂದರೆ ಹೋಗಲಿಲ್ಲ॥ ಸ್ವಾಯಿತಾದರೆ ಸ್ವಾಸ್ತಿಯಿಲ್ಲ। ಮಾಯಿತಾದರು ಮಹಾಂತಗಿಲ್ಲ॥ 5 ॥

198 ನೇ ಪದ

ಕೊಂಡು ಕೊಳ್ಳುವ ವ್ಯವಹಾರಕ್ಯಾಕೆ ಅನುಮಾನ। ಕೊಡದೇ ಕೇಳಬೇಕಾದ ರದಕೆ ಜಾಮೀನ ॥ ಪ ॥ ರಜಪತ್ರ ರುಜಪತ್ರ ಮದ್ದಾಸ್ತಿ ಜಾಮೀನ। ಗುಜರಾಣಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಘನಮಾತ್ರ ಆಗುವದು ಅಜ್ಞಾನ ॥ ನಿಜವಾದಮೇಲೆ ಸರ್ವವು ತಾನೇ । ತನ್ಮಯವು ಉಜರುಂಟೆ । ತನ್ನರ್ಥ ಪ್ರಾಣ್ನಾಭಿಮಾನ ॥ 1 ॥ ಶ್ರದ್ದೆನಿಶ್ಚಯ್ಯಸಾವಧಾನನುಭವ ಆನಂದ । ಶುದ್ಧವಾದರೆ ನಿರಾಳಾರಿದ್ದು ಬಹುಚಂದ ॥ ಮಿದ್ದು ಮುದ್ದಿಯು ಮಾಡುವಿನ್ನೂರ್ಧದಿನಾರ್ಥಾಗಿ । ಕದ್ದು ಮೆದ್ದರೆ ಬಿಡದು ಎಂಥು ಭವ ಭಂಧ ॥ 2 ॥ ಸಮರಸದ ನುಡಿ ಚಂದ । ಸ್ಸಮರಸ್ಥದ ನಡಿಚಂದ । ಸಮರಸದ ಗುರು ಶಿಷ್ಯರಾಟ ಚಂದ ॥ ಸಮರಸವೇ ಸರ್ವಸೌಭಾಗ್ಯ ಸುಖ ಸಂಪನ್ನ । ಸಮರಸವೆ ಮಹಾ ಮಹಾಂತ ಮುಕ್ತಿಕಂದ ॥ 3॥

199 ನೇ ಪದ

ನಿಜ ಕಾಲಜ್ಞಾನದ ಪದ

ಭಯವ್ಯಾಕೊ ಮಗನೇ । ನಿರ್ವಯವಾಗೋತನಕೇ ॥ ಪ ॥ ಸತಿ ಸುತರು ಪಿತ ಮಾತೆ । ಅತಿಮಿತ್ರ ಶತ್ರುಗಳು । ಶತಮುಖದಷ್ಟು ಭೋಗಗಳು ಬಯಲೇ ॥ ವ್ರತ ನೇಮ ಸತ್ಯ ಸತ್ಕರ್ಮ ಸದ್ಗುಣ ಬಯಲೆನುತ । ವರಣ ಅಷ್ಟಾಂಗಯೋಗ ಬಯ್ಯಲೇ ॥ 1 ॥ ತಾರಷ್ಟ ತತ್ವ ತನುಮೇರುಸಾಗರ್ರಬಯಲೇ । ದ್ವಾರ ವೈಕುಂಠ ಸತ್ಯವು ಸ್ವರ್ಗ ಬಹುಲೇ ॥ ಮುರಾರಿ ಹರಿ ವಿರಂಚಿದ್ರಾದಿ ಮುನಿನಿಕರ । ಮೂರು ಲೋಕವು ಮೊದಲು ಘುಂಬಬಯಿಲೇ ॥2 ॥ ತಾಸು ಮಾಸಬ್ದ ಯುಗಜುಗ ಪ್ರಳಯ ಮಹಾಪ್ರಳಯ । ಸೋಂ ಸದನದ ಆದಿಪರಬೊಮ್ಮ ಬಯಲೆನಿಸಿ । ಇಹ ಪರ ತತ್ವಮಸಿ ಆಸ್ತಿಭಾತಿ । ಪ್ರೀತಿ ಖ್ಯಾತಿ । ಮಹಾ ಮಹಾಂತೋಕ್ತಿ ಮುಕ್ತಿ ಬಯಲೇ ॥3॥

200 ನೇ ಪದ

ಹೇಸೌವ ಹೇಸೌವ । ಮಾಯ ಸಂಸಾರ ತಿಳಿಸವ್ವ ಬಾಸವ್ವ ॥ ನಿನ್ನ ನೀನೆ ತಿಳಿದು ನೋಡವ್ವ ಹೇಸೌವ ॥ ಪ ॥ ವಿಸ್ಮಯತರದಿಂದೆ ಹುಟ್ಟಬಂಜೆಯ ಮಗಬಂದ । ಭೀಷ್ಮಾಚಾರ್ಯನ ಮಗಳ ಮದುವಿಯಾದ ಕೇಳ್ ಸುಳ್ಳಿನ್ನ ಖರೆ ಮಾಡಲ್ಲೇನಾ ॥ ಭೀಷ್ಮಾಚಾರ್ಯನ ಮಗಳ ಮದುವಿಯಾದ ಮದುಮಗನು । ಭಸ್ಮಾಸುರ ಕ್ಷೇತ್ರಯಾತ್ರಿಗ್ಹೋದ ಕೇಳ್ ಸುಳ್ಳಿನ್ನ ಖರೇಮಾಡಲೇನಾ ॥ 1 ॥ ಬಿಸಲಿ ತೀರ್ಥ ಮಿಯ್ಯಲಿಕೇ ಸೆಳವಿಗ್ಹೋಗಿ ಸತ್ತನು । ಘನವೆಲ್ಲ ಕೂಡಿ ಶ್ರಮಗೈದಾರು । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ ಘನವೆಲ್ಲ ಕೂಡಿ ಶ್ರಮತೆಗೆದು ಶುದ್ಧೈಸಲು । ಹಸನವಾದದ್ದು ಹೇಳುವೇ ನೀವು ಕೇಳಿರಿ । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ 2 ॥ ಸತಿಸಂಗವಿಲ್ಲದೆ । ಶತಸಹಸ್ರ ಸುತರು ಹುಟ್ಟಿ । ಪಿತ ಸತ್ತಸುದ್ದಿ ಕೇಳಲ್ಕೊಬ್ಬಿಲ್ಲ । ಕೇಳ್ ಸುಳ್ಳಿನ ಖರೆ ಮಾಡಲೇನಾ ॥ ಪಿತ ಸತ್ತಸುದ್ದಿ ಕೇಳಲ್ಕೊಬ್ಬಿಲ್ಲದಿರತಿರಲು । ಧೃತ್ರಾಷ್ಟ ಕಂಡ ಹೇಳವ ಓಡಿಬಂದ । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ 3 ॥ ಮೂಕ ಹೇಳಲು ಕಿವುಡ ತಾ ಕೇಳಿ ಬೆರಗಾದ । ಕಾಕತಾಳನ್ಯಾಯವಿದು ವಾಜಿಮಿ ಕೇಳ್ ಸುಳ್ಳಿನ್ನ ಖರೇ ಮಾಡಲೇನಾ ॥ ಕಾಕತಾಳ ನ್ಯಾಯ ವಿಜಮಿಯಾದ ಮೇಲೆ ಜ್ಯಾಕಿಗುಂದದೆ ಸುಮ್ಮನಾಗು ॥ ಕೇಳ್ ಸುಳ್ಳಿನ್ನ

CC0. In Public Domain. Jangamwadi Math Collection, Varanasi

Digitization by eGangotri and Sarayu Trust, Funding by MoE-IKS

ಖರೆ ಮಾಡಲೇನಾ ॥ 4 ॥ ಬೆಳಗಾದ ನಿಬ್ಬೆರಗಿಗೆ ವರಳಕ್ಕೆ ಹರವಿದೆ । ವರ ವರಸಿ ಕೇರಿ ಹಾರಿಸಿದೆ । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ ವರ ವರಸಿ ಕೇರಿ ಹಾರಸಿದೆ ತವಡವ ತಗಿದು । ಪರಮನ್ನ ಅಟ್ಟುಹುಟ್ಟು ಮುರದೇನಾ । ಕೇಳ್ ಸುಳ್ಳಿನ್ನ ಖರ ಮಾಡಲೇನಾ ॥ 5 ॥ ಅಟ್ಟನ ಉಂಬದಕೇ ಹುಟ್ಟುವರು ಸಾಲರು । ಹುಟ್ಟುವರ್ಹಸವು ಹೋಗದಟ್ಟನ್ನಾಗದು ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ ಹುಟ್ಟುವರ್ಹಸವು ಹೋಗದಟ್ಟನ್ನಾಗದು ನೋಡಿ । ಅಟ್ಟಟ್ಟ ಗಡಿಗಿಯ ವಡದೇನ । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ 6 ॥ ಆಡುವ ಗಡಿಗಿಯ ವಡಿಯಲು । ಒಡಲು ತೃಪ್ತಿಯಾಯಿತೆಂದ । ಒಡಿಯು ಕಡಕೋಳ್ ಗುಡ್ಡದಯೋಗಿ । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ ಒಡೆಯ ಕಡಕೋಳದ ಗುಡ್ಡದ ಮಹಾಂತಪುರ ಮಹಾಂತೇಶನ । ಬಿಡದೆ ನೀವು ಹಾಡಿಕುಟ್ಟಿ ಬರೆಬಾಯಿ । ಕೇಳ್ ಸುಳ್ಳಿನ್ನ ಖರೆ ಮಾಡಲೇನಾ ॥ 7 ॥

201 ನೇ ಪದ

ಸಾವೇ ಬೆಳೆದಿತು ಸಾಘೇ ಸತ್ತಿತು । ಸಾವೇ ಅತ್ತಿತು ॥ ಸಾವೇ ಅರ್ತಿತು ಸಾವೇ ಬೆರ್ತಿತು ।ಸಾವೇ ಮರ್ತಿತು ತನ್ನ ಮುರಿದೆ ॥ಪ ॥ ಸಾವೇ ಅವರ್ಕ್ಕಾದುದ್ದೋ । ಅವರ್ಕ್ಕಾದಿ ಸಾವೆ ಕಠೋರಾದುದ್ದೋ । ಸಾವೇ ತಾರಕವಾದುದ್ದೋ ಚಂದ್ರಾದಿತ್ಯ ಸಾವೇ ಆತುಮವಾದುದ್ದೋ ॥ ಸಾವೇ ಗಗನ ಸಮಾರ ಅಗ್ನಿಯು ಸಾವೇ ಜಲನೆಲ ಮೇರು ಹಯ ಗಜ । ಸಾವೇ ಗಿರಿ ಕಮಟಾದಿಶಕ್ತಿಯು ಸಾವೇ ತಾ ಬ್ರಹ್ಮಾಂಡವಾದುದ್ದೋ ॥ 1 ॥ ಸಾವೇ ತಾ ಬೀಜಾದುದ್ದೋ । ಆ ಬೀಜಾದಿ ಸಾವೆ ತಾ ಸಸಿಯಾದುದ್ದೋ । ಸಾವೇ ತಾ ಫಲವಾದುದ್ದೋ । ಆ ಫಲರಸ ಸಾವೇ ತಾ ಜಮವಾದುದ್ದೋ ॥ ಸಾವೇ ಶ್ರೋಣಿತ ಶುಕ್ಲಶರೀರವು । ಸಾವೇ ಮನ ಪೌನಾದಿ ವಿಷಯವು ಸಾವೇ ಸುಖದುಃಖ ಮೋಹ ಆಶೆಯು । ಸಾವೇ ತಾ ಪಿಂಡಾಂಡವಾದುದ್ದೋ ॥ ಸಾವೇ ಪರಶಿವನಾದುದ್ದೋ । ಪರಶಿವನೊಳು ಸಾವೇ ಸ್ಥಿರಚರವಾದುದ್ದೋ । ಸಾವೇ ಕರ್ಮೆರಡಾದುದ್ದೋ । ಪುಣ್ಯವು ಪಾಪವು ಸಾವೇ ಸರ್ವ ವ್ಯವಹಾರಾದುದ್ದೋ । ಸಾವೇ ಇಹಪರ ನರಕ ಸ್ವರ್ಗವು । ಸಾವೇ ಮನು ಮುನಿ ಸಕಲ ಸಂಭ್ರಮ । ಸಾವೇ ಮಂತ್ರ ಮಹಾಂತ ಮುಕ್ತಿಯು । ಸಾವೇ ಬಯಲಿಗೆ ಬಯಲಾದುದ್ದೋ ॥ 3 ॥

202 ನೇ ಪದ

ಸರ್ವೇಶ್ವರನೆ ಸರ್ವಾದುದ್ದೆಲ್ಲ । ಸರ್ವರು ತಿಳಿವದು ಸಾಕ್ಷೀಯ ಇಲ್ಲ । ಸರ್ವೇಶ್ವರನ ಗುರು ಸ್ವಯಂಭುಲಿಂಗ । ಸ್ವಯಂಭುಲಿಂಗನೆ ಗುರು ಆ ಮುದ್ದಸಂಗ । ಮುದ್ದಸಂಗನ ಗುರು ವಿರಾಟನಂಗ । ಆ ವಿರಾಟನ ಗುರು ತಾನಿದ್ದು ಇಲ್ಲ । ಇದ್ದು ಇಲ್ಲದವನ ಗುರು ಏನು ಇಲ್ಲ । ಅಲ್ಲಾದವರ ಗುರು ಯಾವನು ಇಲ್ಲ॥ ಇಲ್ಲಾದ ವನ ಗುರು ಇಲ್ಲೇ ಇಲ್ಲ ॥ ಪ ॥ ಆ ಸರ್ವೇಶ್ವರನಾದ ಆವರ್ಕ।

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಆವರ್ಕದೊಳಗೆ ತಾನಾದ ಕಠೋರ । ಆ ಕಠೋರಥೊಳಗೆ ತಾ ಮಾಯಾಕಾರ । ಮಾಯಾಕಾರ ದೋಳಗೆ ತಾರ್ಕವಿಸ್ತಾರ । ತಾರ ವಿಸ್ತಾರದಿ ಚಿಲಿ ಪೂರ್ಣಚಂದ್ರ । ಚಂದ್ರನಿಂದಿತ್ತಾದ ಆದಿತ್ಯಸಾಂದ್ರ ॥ ಆದಿತ್ಯನಿಂದಾತ್ಮನಾದಾಕಾಶ । ಆಕಾಶವೆ ವಾಯು । ಅಗ್ನಿ ಪ್ರಕಾಶ । ಅಗ್ನಿ ಅಪು ಪೃಥ್ವಿ ಇವೆ ನವಖಂಡ । ನವಖಂಡಮಯವಾದದ್ದೇ ಈ ಬ್ರಹ್ಮಾಂಡ ॥ 1 ॥ ಆ ಸರ್ವೇಶ್ವರನೊಳಗಿದ್ದುದ್ದೆ ಚಿತ್ತು । ಚಿತ್ತುವಿನೊಳಗಾಯಿತ್ತು ಆನಂದಗೊತ್ತು । ಆನಂದಯೆಂಬುದೆ ಅದೆ ನಿತ್ಯ ತೃಪ್ತಿ । ನಿತ್ಯತೃಪ್ತ್ಯಾದದ್ದು ಸುಧಿಯ ಸುಧಾಪ್ತ । ಆಪ್ತವಾದುದ್ದು ಸರ್ವಕಾದಿ ಪ್ರಸಾದ । ಆ ಪ್ರಸಾದವೆ ಎಲ್ಲ ಬಿತ್ತು ಬೀಜಾದ । ಬೀಜಥಿಂದಾಯಿತು ವನೌಷಧಿಗುರ್ತ ॥ ಆ ವನೌಷಧಿ ಸಕಲಫಲವು ಪದಾರ್ಥ । ಫಲಪದಾರ್ಥದ ರಸ ಶುಕ್ಲಶ್ರೋಣಿತ । ಶುಕ್ಲ ಶ್ರೋಣಿತದೊಳಗಾದ ಸಪ್ತಧಾತು । ಧಾತುವಿಗೆ ಬೇಕಾಯಿತು ಏಸೊಂದು ಮಾತು । ಮಾತು ಮಾತ್ರಕೆ ಮೂಲ ಅಕೃತಿಗೊಂಡ । ಆದೆ ನೋಡೋ ಆಯಿತು ಇದೇ ಪಿಂಡಾಂಡ ॥ 2॥ ಆ ಸರ್ವೇಶ್ವರನಾದ ತಾನೀಪಿಂಡಾಂಡ । ಪಿಂಡಾಂಡದೋಳರವತ್ತಾರು ಕೋಟಿ ದಂಡದಂಡಿನೊಳಗೆ ದಶ ಇಂದ್ರಿಯ ತಂಡ । ಇಂದ್ರಿಗಳಿಗೆ ಪಂಚಪ್ರಾಣ ಪ್ರಚಂಡ । ಪಂಚಪ್ರಾಣಕೆ ನಾಲ್ಕುಕರಣ । ಕರಣ ಕರಣಕ್ಕೆ ಕರ್ತೃ ತ್ರಿವಿ ಧಾತ್ಮಚರಣ । ತ್ರಿವಿಧಾತ್ಮನಿಗೆ ತಾನೇಕಾತ್ಮ ಚೈತನ್ಯ ॥ ಆ ಚೈತನ್ಯಕ್ಕೆ ಪಂಚಾಮೃತನ್ನ । ಆ ಅನ್ನದಲ್ಲುಂಟು ಷಡ್ರುಚಿ ಸವಿಯು । ಸವಿಯಲ್ಲಿ ಸುಖಮೋಹದಾಸಿಯ ಹವಿಯು । ಆಶಿಹವಿಗೆ ಷಡ್ವರ್ಗದುಪದ್ರ । ವರ್ಗದುಪದ್ರಕೆ ಕರ್ಮಸಮುದ್ರ । ಬಹಳ ಕಷ್ಟಾದರೆ ಆಗದೆನೋವ । ಆನೋವಾದ ಮೇಲೇಕೆ ಬಾರದು ಸಾವ । ಸಾವಾಗುವಾಗ ಸಾಧಿಸು ಸದ್ಭಾವ । ಭಾವಿಲ್ಲದಿರೆ ಇಲ್ಲ ಗುರು ಮಹಾಂತದೇವ ॥ 3 ॥

203 ನೇ ಪದ

ಸೈ ಶಬಾಸಿ ವಾಯಿಕೃತಿದೇವಿಯಗಂಡ । ಅಕ್ರಳ್ ವಿಕ್ರಳ್ ರಾಯ ಪ್ರಚಂಡ ॥ ಅಂಯಿಸಿಚ್ಯಾರಲಾಕ ನಿನ್ನ ಪಿಂಡಾಂಡ । ಅಕೋಟವಿಕೋಟ ಆದ ಬ್ರಹ್ಮಾಂಡ ॥ ಪ॥ ನೀ ನಿರೂಪಾದುದ್ದರಿಯೋ । ಆ ಸೊಂಟರಗಾಳಿ ತಾನಾದಪರಿಯೋ ॥ ಭುಪ ನಿನಗಿಲ್ಯಾವನು ಸರಿಯೋ । ಪುಣ್ಯಪಾಪವಿಲ್ಲ ಬಹುಹುಚ್ಚು ದೊರಿಯೋ ॥ 1 ॥ ಅದುದ್ದಾದುದ್ದಾರ । ಆಗದಾಗದಿಲ್ಲ ವಿಚಾರ ॥ ಆದಿಕಾರಣ ಕಾರಣಕಾರ । ಏನೋ ಏನೊ ನಿನ್ನವತಾರ ॥ 2 ॥ ಸರ್ವಗುಣ ಸಂಪನ್ನನು ಹೌದು ಆವಗುಣ ಪರಿಪೂರ್ಣವಾಗಿಹುದು । ಸರ್ವಬೊಮ್ಮ ಅದುನುಭವದು । ಮಹಂತಪುರ ಮಹಾಂತನಲನಲದು ॥ 3 ॥

204 ನೇ ಪದ

ಭಾವ ಭವ ಭವ ಭಾವ । ನೀರ್ಭಾವದೇವನವನ ತಿಳೀ ನೀನೆ ಆ ದೇವಾ ॥ ಸಾವಸದೊಳ್ ಗಿರು । ಗುರುಪಾದಸೇವ । ಜೀವ ಶಿವನೆಂಬುದೇನನುಭಾವ ॥ ಪ। ಆ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ವಿರಾಟರಿಯನ್ನ ಆಚಿಲಿಲ್ಲ । ಆ ಘಿರಾಟರಾಯನೆ ಆದುದ್ದೆಲ್ಲ । ಆ ವಿರಾಟನು ತಾನಾದವಲ್ಲ । ಆ ವಿರಾಟಾಗದಾಗ್ಯಾಷಿಲ್ಲ ॥ 1 ॥ ಅರುವಿಗಾಶ್ರಯವಾದಾತ್ಮನೆ ಬಾಧ್ಯ । ಅರವು ಮರವುಗೊಂಡ ಇದ್ಯಾವಸಾಧ್ಯೆ ॥ ಅರವು ಅರಹಿಸಿ ಕೊಡುವವನೆ ಆರಾಧ್ಯ । ಅರವು ಮರವು ಹಾರಿಸುವದು ಚೋದ್ಯ ॥ 2 ॥ ಶೀಕ್ಷವೆ ಮೊದಲು ಶ್ರಿಗುರುವಿನಾಪೇಕ್ಷ ಆಕ್ಷಣಕಾಗುವಡು ತನಗಪರೋಕ್ಷ ॥ ಸಾಕ್ಷಾತನಾದ ಮೇಲ್ಯಾತಕೋ ದೀಕ್ಷೆ । ಮೋಕ್ಷವೆ ಮಹಾಂತ್ಯೋಗಿ ಕರಣತಟಾಕ್ಷ॥3॥

205 ನೇ ಪದ

ಆಯಿತು ಅಮವಾಸಿ । ಅಕೊ ಅಕೋ ಹೋಯಿತು ಚತುರ್ದಸಿ ॥ ಕಾಯಿಜ ದಹನ ಮಾಡದ । ಮೂಡಿದ ಹೋಳಿಹುಣ್ಣಿವಿ ಪೂರ್ಣಶಶಿ ॥ಪ ॥ ಹಗಲೆ ಹಗಲಾಯ್ತು ರಾತ್ರಿಯು । ಹಗಲೆ ಮಿಗಲಾಯ್ತು ॥ ಬಗಿಯೋಳು ಬಗಿಯಾಯ್ತು ಈ ತ್ರಿಜಗಕ್ಕೆ ಸಿಗದ್ಹೋಯಿತು ॥ 1 ॥ ಜನನಿಯ ಯೋನ್ಹರಿತು । ಅವನಮ್ಮ ಜನಕನ । ಮಾಣುರಿತು । ಮನವು ನೆನವು ತೋರಿತು । ನಾಕಡು ಜನಿಸುವ ಜ್ಯಾಗುರಿತು ॥2॥ ನೆಲಜಲರಿಗ್ಹರಿತು । ಅನಲನಿಲಗಾರಾಗ ಹೋಯ್ತು ॥ ಸಲೆ ಬಯಲಾತ್ಮಾಯಿತು । ಮಹಂತ ನಿಲವಿಗೇತಲವಾಯ್ತು ॥3॥

206 ನೇ ಪದ

ಜಯ ಜಯ ಸರ್ವ । ಜಯ ಜಯ ನಮ್ಮ ದಯಾನಿಧಿ ॥ ಶ್ರೀ ಮಹಾಂತೇಶನ ಪರ್ವವು ಪರ್ವವು ॥ ಪ ॥ ಶ್ರೀ ಪರಬ್ರಹ್ಮವೆ ತಾನೆ ಈ ಜಗದಸ್ವರೂಪೆಂಬೊ ವೇದ ವೇದಾಂತ ಸಲ್ಲಾಪ । ಸ್ಥಾಪನಾಹುದೇ । ಕಾಮೇತ್ತಿವನ ದ್ವಿತೀಯ ವ್ಯಾಪಾರದನುವಿ ಗಾಯ್ತು । ಪುಣ್ಯ ಪಾಪ ॥ 1 ॥ ಭೋಯೆಂಬೋ ಮೂಲಪ್ರಣಾಮವೇ ಬೀಜದ ಬಳ್ಳಿ । ಬಾಯೆಂಬೊದೆನೆಲ್ಲಕ್ಷರ ಮಹಿಮಕ್ಕೆ ನಿಲವೆ ॥ ವಾಯುನೀತಿಗೇ ತಪ್ಪಬಾರದೆಂದ್ಹರಸೀ । ತಾಯಿ ಹೇಳೆಂಬುವದು ಕಾಯಿತಿಹಲವೇ ॥ 2 ॥ ಜೀವಾತ್ಮ ದೇಹ ಮನಸು ಬುದ್ಧಿ । ಚಿತ್ತೇಕಭಾವವು ತನಗಾಗಲದೇ ॥ ಅಪರೋಕ್ಷ ಸಾಹಸವೆ ಘನ ಸಾಧು ಸತ್ಪುರುಷರದೇವ ॥ ಮಹಾಂತೇಶನ ಕೃಪೆಯೇ ಮಹಾಮೋಕ್ಷ॥ 3 ॥

207 ನೇ ಪದ

ಮಂಗಳಾರುತಿ ಪದ.

ಜಯ ಜಯ ಜಯ ಮಂಗಲ ಮೂರುತಿಗಾರುತಿಯೆತ್ತಲಿಬೇಕಮ್ಮಾ । ಶಕ್ತಿಯರೇಕಿರುಬೇಕವ್ಮಾ । ನಯನದ ಜ್ಯೋತಿಯ ಜ್ವಾಕೆವ್ಮಾ ॥ ಜಯನಮಃಪಾರ್ವತಿ ಪತಿಹರಯೆನುತಲಿ । ಚಪ್ಪಳಿಗ್ಹಾಕವ್ಮಾ ॥ ಪ ॥ ಸೋಹಂ ಸುಳವಿನ ಸೂತ್ರನ ಮೂರುತಿ । ತಿರಪಿನ ತೇರಮ್ಮಾ । ತ್ರಿವಿಧ ಜಗದಾಕಾರಮ್ಮಾ । ನೋಡುವ ಭುವ ನೌತಾರಮ್ಮಾ ॥ ಅಹಂಅದರಬಿದರ ಚಿದರಕೋಲ್ ಕೊನಿಮನಿ ನವಗೋಪ್ಯಾರಮ್ಮಾ ॥ 1 ॥ ನವಕಾಂತ ಅವನಿ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನಗಾರಿಖಾನಿ । ನಿಶಾನಿ ಶಮೆದಮೆ । ವ್ಹಾವರೆ ಓದ್ಘುವ ವೇದಮ್ಮಾ । ಕಿವಿಗೊಡು ದಶವಿಧಸಿಾದಮ್ಮಾ ॥ ನವಚಕ್ರಗಲಿ ನವೀನಮಾಲಿ । ಓವಿಸ್ತು ನಾದಮ್ಮಾ ॥ 2 ॥ ಕಂಭದಮಾಟ ಕುಂಭದಗುಮಟ । ನೂರಾವಂದ । ಕಳಸಮ್ಮಾ । ಯುಗಜಗ ಹಗಲಿರಳ್ಹಗ್ಗಮ್ಮಾ । ಮುಕ್ತಿ ಮಾರ್ಗವ ಸ್ಮರಿಸಮ್ಮಾ । ಎಂಭತ್ತುನಾಲ್ಕುಲಕ್ಷ ಅನುಭವ ಛತ್ರಿಕಿ । ಶೇವಿಸ ಶೇಸಮ್ಮಾ ॥ 3 ॥ ಅಷ್ಟದಿಕ್ಕುಪಲಿ । ಸಪ್ತದಿಕ್ಕು ಬೆಳಗಲಿ । ಕುಲಗಿರಿಗೊಂಡೆಮ್ಮಾ । ಜೆಲ್ಲಹರಿ ಜೊಲ್ವರಿದಂಡೆಮ್ಮಾ । ನವರತ್ನ ಮುತ್ತಿನ ಚಂಡಮ್ಮಾ । ದಿಟ್ಟಿಸಿ ನಿಗಿನಿಗಿ । ಜಗಿಜಗಿಸುವ । ದೀವಟಗಿ ತಂಡಮ್ಮಾ ॥ 4 ॥ ಹಸುತೃಷ ಅಣಿಮಿತ । ವಿಚಿತ್ರ ಬೊಂಬಿ ಮಾಟವೆ ತಾಟಮ್ಮಾ । ಅಕ್ರಳ ವಿಕ್ರಳ ಕೂಟಮ್ಮಾ । ಬಹು ಬಹು ಬಂಗಾಲಿ ಆಟಮ್ಮಾ ॥ ಅಸಮ ಮಹಾಂತನ । ಕಾಣಗೊಡದೆ ಧೂಳದುಂಬಿ ಬುಕೀಟ ಘಾಟಮ್ಮಾ ॥ 5 ॥

208 ನೇ ಪದ

ಜಯ ಜಯೋ ಮಹಾಂತಮೂರ್ತಿ । ನಾ ಬೆಳಗುವೆ ಶ್ರೀರುದ್ರ ಆರ್ತಿಯೋ ಕಾರ್ತಿ । ಜಯ ಜಯೋ ಮಹಾಂತ ಮೂರ್ತಿ ॥ ಪ ॥ ಹತ್ತಿಯೊಳಗಿನ । ಬಿತ್ತುಕಾಳವ ತೆಗೆದು । ಹತ್ತಿ ಹಿಡಿದೆಳೆಯಿತ್ತಿ । ಹತ್ತಿ ಹಿಡಿದೆಳೆಯಿತ್ತಿ ಮೂರಂಗುಲ । ಸುತ್ತಿಮಾಡಿದೆ ಭಯಭಕ್ತಿಯಾ ಬತ್ತಿ ಜಯಜಯೋ ॥ 1 ॥ ಬಿಳಿಯ ಆಕಳ ಬೆಣ್ಣೆ । ಒಳಿತಾಗಿ ಕಾಸೀ । ತಿಳಿತುಪ್ಪದೊಳು ಬತ್ತಿ ತಳತಾನ ಸೋಸಿ ॥ ಕಳೆವುಳ್ಳ ಕಾಂತೆ ಕಟ್ಟಳಿ । ಗೈಗೈಸೀ । ಥಳಥಳಿಸುವ ಜ್ಯೋತಿ ಬೆಳಗು ನಿಶ್ಚೈಸೀ ॥ 2 ॥ ಹನ್ನೊಂದರಮ್ಯಾಲ ಇನ್ನೊಂದಿಲ್ಲೆಂದು । ಹನ್ನೊಂದು ಹಲವಾಯಿತೆಂದು ॥ ಹನ್ನೊಂದು ಮಾಡಿದ ಬಿನ್ನಿಲ್ಲದೊಂದು । ಚಿನ್ನಗುಡ್ಡದಯೋಗಿ ನೀ ದಯಾಸಿಂಧು ಜಯಜಯೋ ಮಹಾಂತಮೂರ್ತಿ ॥ 3 ॥

209 ನೇ ಪದ

ಸತ್ತು ತಿಳಿಯೊ ಗೊತ್ತು ಯತ್ತನೋಡಿದರಿತ್ತು । ಅತ್ತಿತ್ತ ನೋಡಿದರಿಲ್ಲ ಹೊತ್ತು ॥ ಕತ್ತಲೀವಳಗ ಜಗಸುತ್ತುತಲಿತ್ತು । ಅರ್ತು ತಿಳಿಯೋ ನೀ ಗುರುಪಾದ ಚಿತ್ತು ॥ ಪ ॥ ಮಾಡೇನಂದರಯಲ್ಲ ನೋಡೇನಂದರಿಲ್ಲ । ರೂಢಿಯೊಳಗ ಗುರುದೇವ ಬಲ್ಲ ॥ ಸಾಕೇನಂದರ ಸಲ್ಲ । ಬೇಕೆನಂದರ ಬೆಲ್ಲ । ಕಾಡಿನೊಳಗೋಡ್ಯಾಡುವ ಏ ಹುಚ್ಚುಮಲ್ಲ ॥ 1 ॥ ಸತ್ತವಗ ಸಾವಿಲ್ಲ । ಹೊತ್ತವಗೆ ಜೀವಿಲ್ಲ । ಮುಟ್ಟಿಕೊಂಡಾತಗೆ ದೇಹಾನಿಲ್ಲ ॥ ನೆತ್ತಿಯೊಳಗ ಇಲ್ಲ । ವತ್ತಿ ನೋಡಿದರಿಲ್ಲ ಮುತ್ತೆ ಮಹಾಂತನೆಂದು ತಿಳಿಯಲೆ ಕಲ್ಲ ॥ 2 ॥

ಸಂಪೂರ್ಣಂ

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

॥ ಓಂ ಪರಬ್ರಹ್ಮಣೇ ನಮಃ ॥

ಶ್ರೀ ಕಡಕೋಳ ಮಡಿವಾಳಯೋಗಿ ವಿರಚಿತ

ಶ್ರೀ ಮಹಾಂತೇಶ್ವರ ಅಷ್ಟೋತ್ತರ ಶತ (108) ನಾಮಾವಳಿ

ಶ್ರೀ ಮಹಾಕೈಲಾಸ ಈಶನವತಾರ ಮಹಾಂತಯೋಗಿ ॥ 1 ॥
ಕೋಟಿ ರವಿಪ್ರಕಾಶ ಸೋಮತೇಜ ಮಹಾಂತಯೋಗಿ ॥ 2 ॥
ಆದಿಗಾದಿ ಮೂಲಮೂರ್ತಿ ವೇದವೇದ್ಯ ಮಹಾಂತಯೋಗಿ ॥ 3 ॥
ನಿಗಮ ಆಗಮಗಳಿಗೆ ನಿಲಕದಂತ ಗುರು ಮಹಾಂತಯೋಗಿ ॥ 4 ॥
ಪರಮಜ್ಯೋತಿ ಸ್ವರೂಪ ಪರಮಾನಂದ ಮಹಾಂತಯೋಗಿ ॥ 5 ॥
ಪಂಚ ಅಕ್ಷರರೂಪ ಪಂಚವಕ್ತ್ರ ಮಹಾಂತಯೋಗಿ ॥ 6 ॥
ಷಡಕ್ಷರಿದೇವ ಮಹಾಮೃಡ ಮಹಾಂತಯೋಗಿ ॥ 7 ॥
ವೇದಶಾಸ್ತ್ರಪುರಾಣಾಗಮ ವಂದಿತಯ್ಯ ಮಹಾಂತಯೋಗಿ ॥ 8 ॥
ಅಜಹರಿ ನಿಮ್ಮ ಪಾದ ಭಜಿಸುವರಯ್ಯ ಮಹಾಂತಯೋಗಿ ॥ 9 ॥
ಮನಮುನಿ ದೇವಸುರಗಣ ಚರಿತಯ್ಯ ಮಹಾಂತಯೋಗಿ ॥ 10 ॥
ಸಂತರೊಳು ಶಾಂತನೀನೆ ಸಿದ್ಧಾಂತಯ್ಯ ಮಹಾಂತಯೋಗಿ ॥ 11 ॥
ಸಿದ್ಧರೊಳು ಪ್ರಸಿದ್ಧ ನೀನೆ ಪ್ರಮಾಥಾಧೀಶ ಮಹಾಂತಯೋಗಿ ॥ 12 ॥
ಸಕಲ ಮಂತ್ರ - ತಂತ್ರ ನಿಮ್ಮ ಸ್ವತಂತ್ರವಯ್ಯ ಮಹಾಂತಯೋಗಿ ॥ 13 ॥
ಜಗದ್ಗುರುವೆ ಜಗದ್ಭರಿತ ಜಗದೀಶ್ವರ ಮಹಾಂತಯೋಗಿ ॥ 14 ॥
ಜ್ಞಾನಬೋಧ ಕೊಟ್ಟು ಜನರ ಮೋಕ್ಷಿಸುವದಕೆ ಮಹಾಂತಯೋಗಿ ॥ 15 ॥
ವಸುಧಿಯಲ್ಲುದಿಸಿ ಚರರೂಪ ಧರಿಸಿದಂತ ಮಹಾಂತಯೋಗಿ ॥ 16 ॥
ದೇಶಿಕೇಂದ್ರನಾಗಿ ಸಕಲದೇಶ ಚರಿಸಿ ಮಹಾಂತಯೋಗಿ ॥ 17 ॥
ಬ್ರಹ್ಮಜ್ಞಾನ ತಿಳಿದು ಪರಬ್ರಹ್ಮನಾದಿ ಮಹಾಂತಯೋಗಿ ॥ 18 ॥
ಸೃಷ್ಟಿಯೊಳು ಶ್ರೇಷ್ಠವಾದ ಶ್ರೇಷ್ಠಗುರು ಮಹಾಂತಯೋಗಿ ॥ 19 ॥
ಅಷ್ಟಮದಗಳೆಲ್ಲ ನಷ್ಟಮಾಡಯ್ಯ ಮಹಾಂತಯೋಗಿ ॥ 20 ॥
ಇಷ್ಟಲಿಂಗ ಪೂಜೆಯಲ್ಲಿ ನಿಷ್ಠಪರನು ಮಹಾಂತಯೋಗಿ ॥ 21 ॥
ಸೃಷ್ಟೀಶ ಕರುಣಿಸು ದಯದೃಷ್ಟಿಯಿಂದೆ ಮಹಾಂತಯೋಗಿ ॥ 22 ॥
ಅಷ್ಟಾಂಗಾದಿ ಶುದ್ಧ ನಿಮಗೆ ಸಾಷ್ಟಾಂಗಿಡುವೆ ಮಹಾಂತಯೋಗಿ ॥ 23 ॥
ನಿಷ್ಠೆಯಿಟ್ಟು ನಡೆದವರಿಗೆ ಸ್ವರ್ಗ ಕೊಟ್ಟ ಮಹಾಂತಯೋಗಿ ॥ 24 ॥
ಅಷ್ಟಾವರ್ಣ ನಂಬಿ ಅಷ್ಟಧರ್ಮ ಪಡೆದಯ್ಯೋ ಮಹಾಂತಯೋಗಿ ॥ 25 ॥
ಭ್ರಷ್ಟನಾನು ಯನ್ನ ದುಷ್ಟಗುಣವು ಬಿಡಸಯ್ಯೋ ಮಹಾಂತಯೋಗಿ ॥ 26 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನೇಮವಿಟ್ಟು ನಡೆದವರಿಗೆ ಕಾಮಧೇನು ಮಹಾಂತಯೋಗಿ ॥ 27 ॥
ಕಾಮಸಿದ್ದು ಕೊಡುವಸ್ವಾಮಿ ಕಲ್ಪತರು ಮಹಾಂತಯೋಗಿ ॥ 28 ॥
ಚಿಂತಿಮಾಳ್ಪರಿಗೆ ನೀನು ಚಿಂತಾಮಣಿಯೋ ಮಹಾಂತಯೋಗಿ ॥ 29 ॥
ಸಂತು-ಸಾಧು ಜನರಿಗೆ ಅಂತಃಕರಣ ನೀನೆ ಮಹಾಂತಯೋಗಿ ॥ 30 ॥
ಚಿಂತಿಹರಿಸೊ ಎನ್ನ ಮನದ ಭ್ರಾಂತಿ ಬಿಡಿಸೋ ಮಹಾಂತಯೋಗಿ ॥ 31 ॥
ಎನ್ನ ಪಾಪವನ್ನು ಲೋಪಮಾಡೋ ಭೂಪ ಮಹಾಂತಯೋಗಿ ॥ 32 ॥
ಧರ್ಮಗುರುವೆ ರಕ್ಷಿಸೆನ್ನ ಕರ್ಮಕಳಿಯೊ ಮಹಾಂತಯೋಗಿ ॥ 33 ॥
ಆಶಪಾಶಾ ಸಕಲ ಮನದ ದೋಷ ಅಳಿಸೊ ಮಹಾಂತಯೋಗಿ ॥ 34 ॥
ಮತಿಹೀನ ಕೂಸು ನಿಮ್ಮ ದಾಸ ನಾನು ಮಹಾಂತಯೋಗಿ ॥ 35 ॥
ಕರವು ಮುಗಿದು ಸೆರೆಗನೊಡ್ಡಿ ಬೇಡಿಕೊಂಬುವೆ ಮಹಾಂತಯೋಗಿ ॥ 36 ॥
ಕರಣಿಸ್ಥುಯ್ಯ ನಿಮ್ಮ ಚರಣ ಮರೆಯ ಹೊಕ್ಕೆ ಮಹಾಂತಯೋಗಿ ॥ 37 ॥
ನಿಮ್ಮ ನಾಮ ಸ್ಮರಣೆಯನ್ನು ಮರೆಯಲಾರೆ ಮಹಾಂತಯೋಗಿ ॥ 38 ॥
ದೇವ ನೋಡೊ ನಿಮ್ಮ ಕರುಣಭಾವದಿಂದ ಮಹಾಂತಯೋಗಿ ॥ 39 ॥
ಜಗದಾತ್ಮ ಜಗದ ರಕ್ಷಕ ಜಗದ ಜನಕ ಮಹಾಂತಯೋಗಿ ॥ 40 ॥
ಮೂಜಗದೊಡಿಯ ಮುನಿಯ ಪೂಜ್ಯ ನೀನೆ ಮಹಾಂತಯೋಗಿ ॥ 41 ॥
ಯೋಗಿರಾಜ ಮುನಿಕುಲತೇಜ ನೀನೆ ಮಹಾಂತಯೋಗಿ ॥ 42 ॥
ಮಾಯಿ ಕೋಲಾಹಲ ಯತಿಲೋಲ ನೀನೆ ಮಹಾಂತಯೋಗಿ ॥ 43 ॥
ಮಾರಹರ ವೀರಶೈವ ಸುರಧೀರ ಮಹಾಂತಯೋಗಿ ॥ 44 ॥
ಮೃತ್ಯುಂಜಯ ನಿರ್ಮಲ ನಿರಂಜನಯ್ಯ ಮಹಾಂತಯೋಗಿ ॥ 45 ॥
ಕರ್ತೃ ಗುರುದೇವ ಮಹಾ ಸಮರ್ಥನಯ್ಯ ಮಹಾಂತಯೋಗಿ ॥ 46 ॥
ಮರ್ತ್ಯದೊಳಗೆ ನಿಮ್ಮ ಕೀರ್ತಿವಾರ್ತೆ ಕೇಳಿ ಮಹಾಂತಯೋಗಿ ॥ 47 ॥
ಆರ್ತುಬಂದೆ ನಿಮ್ಮ ಬಳಿಗೆ ಗುರ್ತವಿಟ್ಟು ಮಹಾಂತಯೋಗಿ ॥ 48 ॥
ಆರ್ತಿಲಿಂದೆ ಅಷ್ಟಮೂರ್ತಿ ಶ್ರೇಷ್ಠ ನೀನು ಮಹಾಂತಯೋಗಿ ॥ 49 ॥
ನಾನಾ ಜನ್ಮ ತಿರುಗಿಬಂದೆ ಮಾನಗೆಟ್ಟೆ ಮಹಾಂತಯೋಗಿ ॥ 50 ॥
ಮಾನವಿಟ್ಟು ಕಾಯೋ ಮಹಾಜ್ಞಾನ ಕೊಟ್ಟು ಮಹಾಂತಯೋಗಿ ॥ 51 ॥
ಮರವು ಬಿಡಿಸಿ ಭಕ್ತಿಸ್ಥಲದ ಅರವುದೋರೊ ಮಹಾಂತಯೋಗಿ ॥ 52 ॥
ಭಕ್ತಿ ಜ್ಞಾನ ವೈರಾಗ್ಯರಿಗೆ ಮುಕ್ತಿ ಖಣಿಯೋ ಮಹಾಂತಯೋಗಿ ॥ 53 ॥
ಕಾಡಬೇಡ ಯನ್ನ ಗುಣವು ನೋಡಬೇಡ ಮಹಾಂತಯೋಗಿ ॥ 54 ॥
ಮೂಢನಾನು ಯನ್ನ ಭವದಗೂಡ ಕಿತ್ತೊ ಮಹಾಂತಯೋಗಿ ॥ 55 ॥
ಯಡರು ತೊಡರು ಬಾರದಂತೆ ನುಡಿಸು ವಾಕ್ಯ ಮಹಾಂತಯೋಗಿ ॥ 56 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ನುಡಿದವಾಕ್ಯ ಸಿದ್ಧಮಾಡಿ ಕೀರ್ತಿಪಡದಿ .ಮಹಾಂತಯೋಗಿ ॥ 57 ॥
ಬರದಿ ಬಂದು ಮಲಗಾಣೆಂಬ ಭೂಪುರದಿ ನಿಂತಿ ಮಹಾಂತಯೋಗಿ ॥ 58 ॥
ಶಾಂತಸ್ವಾಮಿಗಳಿಗೆ ಶಪಥವಿಟ್ಟು ಮಹಾಂತಯೋಗಿ ॥ 59 ॥
ಹರ್ಷದಿಂದ ನಡೆದು ದೇಶಸಂಚರಿಸುತಲಿ ಮಹಾಂತಯೋಗಿ ॥ 60 ॥
ಧರಣಿಯೊಳಗೆ ನಿಮ್ಮ ಸರಿ ಸಾಧುರುಂಟೇ ಮಹಾಂತಯೋಗಿ ॥ 61 ॥
ಮಡಿವಾಳಯ್ಯ ಬಂದು ದೃಢದಿಂದ ಜಪಿಸುತಿರಲು ಮಹಾಂತಯೋಗಿ ॥ 62 ॥
ವರುಷ ಹನ್ನೆರಡು ಮರವು ಆಗದಿರಲು ಮಹಾಂತಯೋಗಿ ॥ 63 ॥
ತೂರ್ಯದಿಂದೆ ಹೋಗಿ ಕಮರಿಕೊಳ್ಳ ಬೀಳಲಾಗ ಮಹಾಂತಯೋಗಿ ॥ 64 ॥
ಆಕ್ಷಣಕ ಪ್ರತ್ಯಕ್ಷನಾದ ಸಾಕ್ಷಾತ ಶ್ರೀ ಮಹಾಂತಯೋಗಿ ॥ 65 ॥
ಶಿರದಮೇಲೆ ಕರವು ಇಟ್ಟು ವರವು ಕೊಟ್ಟೆ ಮಹಾಂತಯೋಗಿ ॥ 66 ॥
ಮಹಿಮಪುರುಷ ನಿನ್ನ ಮಹಿಮ ಹೇಳಲಳವೆ ಮಹಾಂತಯೋಗಿ ॥ 67 ॥
ಮೂಗಳನ್ನು ಮುಂಗೈ ಜೋಳಿಗಿಮೇಲೆ ತಂದ ಮಹಾಂತಯೋಗಿ ॥ 68 ॥
ಭಿಕ್ಷತಂದು ಅನ್ನ ಕ್ಷೇತ್ರವಿಟ್ಟು ಮೆರದಿ ಮಹಾಂತಯೋಗಿ ॥ 69 ॥
ದಾಸೋಹವನ್ನು ಲೇಸವಾಗಿ ನಡೆಸಿದಂತ ಮಹಾಂತಯೋಗಿ ॥ 70 ॥
ಬಾಲರೊಳಗೆ ಆಡಿ ಲೀಲೆ ಮಾಡಿದಯ್ಯ ಮಹಾಂತಯೋಗಿ ॥ 71 ॥
ಜ್ಯಾಂಡಾದೈತ್ಯಗಟ್ಟಿ ಹಿಂಡು ದನಾ ಕಾಯಿಸಿದ್ದಿ ಮಹಾಂತಯೋಗಿ ॥ 72 ॥
ರಾಯನೊಬ್ಬ ಸೈನ್ಯದೊಡನೆ ಹಸುತ್ತಬರಲು ಮಹಾಂತಯೋಗಿ ॥ 73 ॥
ಅಷ್ಟು ಸೈನ್ಯಕೆಲ್ಲ ಅನ್ನ ಉದಕ ಕೊಟ್ಟೆ ಮಹಾಂತಯೋಗಿ ॥ 74 ॥
ಹುಟ್ಟ ಬಂಜೆಯರಿಗೆ ನೀನು ಪುತ್ರಕೊಟ್ಟಿ ಮಹಾಂತಯೋಗಿ ॥ 75 ॥
ಅಂಧಕರಿಗೆ ದಿವ್ಯ ಚಂದ ಕಣ್ಣು ಕೊಟ್ಟಿ ಮಹಾಂತಯೋಗಿ ॥ 76 ॥
ಕಿವುಡ ಮೂಕರಿಗೆ ಕರ್ಣಮಾತುಕೊಟ್ಟಿ ಮಹಾಂತಯೋಗಿ ॥ 77 ॥
ಗೌಡನಿಗೆ ಬಂದ ಮಹಾರೋಗ ಬಿಡಿಸಿದಯ್ಯ ಮಹಾಂತಯೋಗಿ ॥ 78 ॥
ನದಿಯು ತುಂಬಿಬರಲು ಮೇಲೆ ನಡೆದು ಬಂದ ಮಹಾಂತಯೋಗಿ ॥ 79 ॥
ಸೇವೆ ಮಾಡುವ ಕಬ್ಬಲಿಗನ ಭವಕೊಲ್ಲಿದಯ್ಯೋ ಮಹಾಂತಯೋಗಿ ॥ 80 ॥
ಹಿಡಿದಭೂತ ಬಿಡಿಸಿದಂತ ಭೂತನಾಥ ಮಹಾಂತಯೋಗಿ ॥ 81 ॥
ಕಾಯ್ದ ತೈಲದೊಳಗೆ ಸ್ನಾನಮಾಡಿ ತೋರಿದಯ್ಯ ಮಹಾಂತಯೋಗಿ ॥ 82 ॥
ಕಾಡುವ ಕಂಟಕವನ್ನು ಓಡಿಸಿದಯ್ಯೊ ಮಹಾಂತಯೋಗಿ ॥ 83 ॥
ಪಿಂಡದೊಳಗಿನ ಎಲ್ಲರೋಗದ ಗಂಡ ನೀನೆ ಮಹಾಂತಯೋಗಿ ॥ 84 ॥
ಭಕ್ತಿಯಿಟ್ಟವರಿಗೆ ಜೀವನ ಮುಕ್ತಿಕೊಟ್ಟಿ ಮಹಾಂತಯೋಗಿ ॥ 85 ॥
ವೈರಿ ಗಂಟಲಗಾಣ ವೈರಿ ಮಸ್ತಕ ಶೂಲ ಮಹಾಂತಯೋಗಿ ॥ 86 ॥

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪೊಡವಿಜಟುನರು ಬೇಡಿದ್ದನ್ನು ನಡೆಸಿಕೊಟ್ಟ ಮಹಾಂತಯೋಗಿ ॥ 87 ॥
ಗುರುವೆ ತಾಯಿ - ತಂದೆ ಬಂಧುಗಳಗ ನೀನೆ ಮಹಾಂತಯೋಗಿ ॥ 88 ॥
ಮಹಾಂತಯೆಂಬೋ ಮೂರು ಅಕ್ಷರ ಮುಕ್ತಿಮಾರ್ಗ ಮಹಾಂತಯೋಗಿ ॥ 89 ॥
ಮಹಾಂತನರ್ಥ ಮಹಾತ್ಮಸಾಧು ಮಂದಮತಿ ನಾ ಮಹಾಂತಯೋಗಿ ॥ 90 ॥
ಮಹಾಂತ ನಾಮಲಂಕೃತಬುದ್ಧಿ ಮಾದೇವ ಸುರ ಮಹಾಂತಯೋಗಿ ॥ 91 ॥
ಹಂಬಲಿಸಿ ನಿನ್ನ ಪಾಪ ನಂಬಿದ್ದೇನೋ ಮಹಾಂತಯೋಗಿ ॥ 92 ॥
ಶಂಭು ಜಗದಂಬುಧಿ ನೀನೆ ಮಹಾಂತಯೋಗಿ ॥ 93 ॥
ಸಾಂಬಸದಾಶಿವ ದಿಗಂಬರ ನೀನೆ ಮಹಾಂತಯೋಗಿ ॥ 94 ॥
ಹರುಷಬಾರೋ ಯನ್ನ ಪಂಚಪರುಷಬಾರೊ ಮಹಾಂತಯೋಗಿ ॥ 95 ॥
ಧಣಿಯ ಬಾರೊ ಯತಿ ಶಿರೋಮಣಿಯೆ ಬಾರೊ ಮಹಾಂತಯೋಗಿ ॥ 96 ॥
ಯೋಗಿಸ್ತೋಮದೊಳು ನಿಮ್ಮ ನಾಮಪ್ರೇಮ ಮಹಾಂತಯೋಗಿ ॥ 97 ॥
ಮಹಾಂತವಿದೆ ಮುಕ್ತ್ಯೈಕ್ಯ ಸ್ಥಳಮಧ್ಯ ಕಾಶಿ ಮಹಾಂತಯೋಗಿ ॥ 98 ॥
ಬಾರ ಜ್ಯೋತಿರ್ಲಿಂಗ ಶ್ರೀ ಸಂಗಮೇಶ ಮಹಾಂತಯೋಗಿ ॥99॥
ನುಡಿಸಿದಂತೆ ನುಡಿಯುವೆ ನಾನು ಮೂಢಪ್ರಾಣಿ ಮಹಾಂತಯೋಗಿ ॥100॥
ತಪ್ಪು ಬಿದ್ದ ಶಬ್ದಗಳಿಗೆ ಒಪ್ಪಿಕೊಳ್ಳೊ ಮಹಾಂತಯೋಗಿ ॥101॥
ಅಪ್ಪಿಸಲಹು ತಪ್ಪೆ ಯನ್ನಪ್ಪ ನೀನು ಮಹಾಂತಯೋಗಿ ॥102॥
ಮಂಗಲವು ಗುರುಂ ಲಿಂಗ ಜಂಗಮಯ್ಯ ಮಹಾಂತಯೋಗಿ ॥103॥
ಮಂಗಲವು ಮಹಾಂತನಾಮ ಪಠಿಸಿದವರಿಗೆ ಮಹಾಂತಯೋಗಿ ॥104॥
ತ್ರಾಹಿತ್ರಾಹಿ ನಮಃ ಶಿವಾಯ ಗುರು ಮಹಾಂತಯೋಗಿ ॥105॥
ಓಂ ನಮಃ ಶಿವಾಯ ಗುರು ಮಹಾಂತಯೋಗಿ ॥106॥
ಮಾಹಿ ನಮಃಶಿವಾಯ ಗುರು ಮಹಾಂತಯೋಗಿ ॥107॥
ಮಾಹಂ ಸೋಹಂ ಪರಬ್ರಹ್ಮಾನಂದ ಮಹಾಂತಯೋಗಿ ॥108॥

ಈ ಪ್ರಕಾರ ನೂರಾಯೆಂಟು ಮಹಾಂತೇಶ್ವರ ನಾಮಾವಳಿಯನ್ನು

ಸೂರ್ಯ ಉದಾಸ್ತ ಕಾಲಗಳಲ್ಲಿ ನೆನೆದವರಿಗೆ ಪಾಪ

ನಾಶವಾಗಿ ಸುಖ ಸಂಪತ್ತು ಸೌಖ್ಯವು ದೊರೆಯುವದು.

SRI JAGADGURU VISHWARADHYA
JNANA SIMHASAN JNANAMANDAL
LIBRARY
Jangamwadi Math, Varanasi
ACC No. 8804

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

CC0. In Public Domain. Jangamwadi Math Collection, Varanasi

Digitization by eGangotri and Sarayu Trust. Funding by MoE-IKS

ಪುಸ್ತಕ ದೊರೆಯುವ ವಿಳಾಸ :

ಶ್ರೀ ಶಿವಶಕ್ತಿ ಬುಕ್ ಡಿಪೋ, ಶಹಾಪುರ

ಶ್ರೀ ಶಂಕರಾನಂದ ಮುದ್ರಣಾಲಯ, ಯಾದಗಿರಿ.

ಆಶಾ ಜನರಲ್ ಸ್ಟೋರ್ಸ್ ಗುಲಬರ್ಗಾ.

ಶ್ರೀ ಕೃಷ್ಣ ಬುಕ್ ಡಿಪೋ, ಗುಲಬರ್ಗಾ

ಅಶೋಕ ಬುಕ್ ಡಿಪೋ, ಗುಲಬರ್ಗಾ

ವಿ. ಎಸ್. ಭಾವಿಕಟ್ಟಿ ಆ್ಯಂಡ್ ಬ್ರದರ್ಸ್ ಬುಕ್ ಸೇಲರ್, ಗುಲಬರ್ಗಾ

ಎಸ್. ಎಸ್. ಭಾವಿಕಟ್ಟಿ ಬುಕ್ ಸೇಲರ್, ಗುಲಬರ್ಗಾ

ಮಹಾದೇವ ಆ್ಯಂಡ್ ಸನ್ಸ ಬುಕ್ ಸೇಲರ್, ಗುಲಬರ್ಗಾ

ಶ್ರೀ ಮಡಿವಾಳೇಶ್ವರ ಮಹಾಮಠ, ಕಡಕೋಳ
ತಾ. ಜೇವರ್ಗಿ ಜಿ. ಗುಲಬರ್ಗಾ ✆ : 08442 - 256396

CC0. In Public Domain. Jangamwadi Math Collection, Varanasi